# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಜುಲೈ 19, 2024

ಸಂಪುಟ : 51 ಸಂಚಿಕೆ : 66 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




'ಮಕ್ಕಳ ರಾಮಾಯಣ' ದಾವಣಗೆರೆಯ ದಂತ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ವೃತ್ತಿ ರಂಗಭೂಮಿ ರಂಗಾಯಣ, ಬಾಪೂಜಿ ವಿದ್ಯಾಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಮಕ್ಕಳ ನಾಟಕೋತ್ಸವದಲ್ಲಿ ಗುರುವಾರ 'ಮಕ್ಕಳ ರಾಮಾಯಣ' ನಾಟಕ ಪ್ರದರ್ಶನಗೊಂಡಿತು.

## ಕಲಾಪಕ್ಕೆ ಗೈರು, ಬಿಜೆಪಿ ಸಭಾತ್ಯಾಗ ಸ್ಪೀಕರ್ ಗರಂ

ಬೆಂಗಳೂರು, ಜು. 18 - ವಿಧಾನಸಭೆ ಕಲಾಪದ ವೇಳೆ ಸಚಿವರು ಉಪಸ್ಥಿತರಿಲ್ಲ ಎಂದು ಆಕ್ರೋಶಗೊಂಡ ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಸಭಾತ್ಯಾಗ ಮಾಡಿವೆ.

ಸಚಿವರು ಹಾಜರಿರದೆ ಇರುವುದನ್ನು ಗಂಭೀರವಾಗಿ ಪರಿಗಣಿಸಿದ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ ಎಂದಿದ್ದಾರೆ.



ಕಲಾಪದ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್ ಹಾಗೂ ಬಿಜೆಪಿಯ ಹಿರಿಯ ಶಾಸಕರು, ಆಡಳಿತಾರೂಢ ಸದಸ್ಯರ ಸಾಲುಗಳು ಬಹುತೇಕ ಖಾಲಿಯಾಗಿವೆ ಎಂದು ಆಕ್ಷೇಪಿಸಿದರು.

ಆಗ ಮಾತನಾಡಿದ ಸರ್ಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್, ಕೆಲ ಸಚಿವರು ವಿಧಾನಪರಿಷತ್ತಿಗೆ ತೆರಳಿದ್ದಾರೆ. ಸದನದಲ್ಲಿ ಮೂರ್ನಾಲ್ಕು ಸಚಿವರು ಇದ್ದಾರೆ. ಕಲಾಪ ಮುಂದುವರೆಸಬೇಕು ಎಂದು ಕೋರಿದರು. ಇದಕ್ಕೆ ಒಪ್ಪದ ವಿಧಾನಸಭಾಧ್ಯಕ್ಷ ಖಾದರ್, ಇಲ್ಲಿ ಕಥೆ ಹೇಳಬೇಡಿ. ಸಚಿವರು ಹಾಜರಿರಬೇಕಿತ್ತು ಎಂದರು.

ಸಚಿವರ ಹಾಜರಿಗಾಗಿ ನಾನು ಕರೆ ಮಾಡುತ್ತಿದ್ದೇನೆ, ಆದರೆ ಕರೆಸಲು ಸಾಧ್ಯವಾಗುತ್ತಿಲ್ಲ ಎಂದು ಪಟ್ಟಣ್ ಅಸಹಾಯಕತೆ ವ್ಯಕ್ತಪಡಿಸಿದರು.

ಆಗ ಮಾತನಾಡಿದ ಅಶೋಕ್, ಪಟ್ಟಣ್ ಮುಖ್ಯ ಸಚೇತಕ ಹುದ್ದೆಗೆ ರಾಜೀನಾಮೆ ನೀಡಿ ಸಚಿವರಾಗಲಿ ಎಂದು ಸಲಹೆ (2ನೇ ಪುಟಕ್ಕೆ)

## ಶೈಕ್ಷಣಿಕ ಸಾಲ ನೀಡಲು ಅಲೆದಾಡಿಸದಿರಿ

### ಲೀಡ್ ಬ್ಯಾಂಕ್ ಸಭೆಯಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸೂಚನೆ

ದಾವಣಗೆರೆ, ಜು. 18- ಶೈಕ್ಷಣಿಕ ಸಾಲಕ್ಕಾಗಿ ವಿದ್ಯಾರ್ಥಿಗಳನ್ನು ಅಲೆದಾಡಿಸಬೇಡಿ ಎಂದು ಬ್ಯಾಂಕ್ ಅಧಿಕಾರಿಗಳಿಗೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಾಕೀತು ಮಾಡಿದರು.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಗುರುವಾರ ಲೀಡ್ ಬ್ಯಾಂಕ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಮ್ಮ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಪೋಷಕರು ಭಿಕ್ಷಾಪಾತ್ರೆ ಹಿಡಿದು ಸಂಘ-ಸಂಸ್ಥೆಗಳ ನೆರವಿಗಾಗಿ ಓಡಾಡುವಂತಾಗಿದೆ. ಅರ್ಹರನ್ನು ಅಲೆದಾಡಿಸದೇ ಶೈಕ್ಷಣಿಕ ಸಾಲ ಮಂಜೂರು ಮಾಡಿ ಎಂದು ಸೂಚಿಸಿದರು.

ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ಶೈಕ್ಷಣಿಕ ಸಾಲ ಪಡೆಯಲು ಇರುವ ಅರ್ಹತೆಗಳು, ನಿಬಂಧನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಡಾ.ಪ್ರಭಾ ಸಲಹೆ ನೀಡಿದರು.

ಸರ್ಕಾರದ ವಿವಿಧ ಯೋಜನೆಗಳಿಗಾಗಿ ಫಲಾನುಭವಿಗಳು ಸಲ್ಲಿಸಲಾಗಿರುವ ಅರ್ಜಿಗಳನ್ನು ಅರ್ಹತೆ ಆಧಾರದ ಮೇಲೆ 15 ದಿನಗಳೊಳಗೆ ಇತ್ಯರ್ಥಪಡಿಸುಂತೆ ಹೇಳಿದ ಸಂಸದರು, ಸಭೆಯಲ್ಲಿ ಪ್ರಶ್ನಿಸಿದಾಗ ಮಾತ್ರ ಅರ್ಜಿಗಳ ಇತ್ಯರ್ಥಕ್ಕೆ ಸಮಯ ಕೇಳಬಾರದು. ಅರ್ಜಿ ತಿರಸ್ಕರಿಸಿದರೆ ಅದಕ್ಕೆ ಸೂಕ್ತ ಕಾರಣವನ್ನು ಅರ್ಜಿದಾರರಿಗೆ ತಿಳಿಸಬೇಕು ಎಂದರು.

ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ರೈತರಿಗೆ ಸಾಲ ನೀಡುತ್ತಿಲ್ಲ ಎಂಬ ದೂರುಗಳು ಬರುತ್ತಿವೆ, ಏಕೆ ಎಂದು ಸಂಸದರು ಪ್ರಶ್ನಿಸಿದಾಗ, 2022ನೇ ಸಾಲಿನಲ್ಲಿ 641 ಕೋಟಿ ಸಾಲ ವಿತರಿಸಲಾಗಿತ್ತು. 2023ರಲ್ಲಿ (2ನೇ ಪುಟಕ್ಕೆ)

### ಸೌಜನ್ಯದಿಂದ ವರ್ತಿಸಿ

ಸಾಲದ ಅರ್ಜಿ ತಿರಸ್ಕರಿಸಲು ಸಿಬಿಲ್ ಸ್ಕೋರ್ ಕಡಿಮೆ ಎಂಬ ಕಾರಣವೇ ನೆಪವಾಗಬಾರದು. ಸಾರ್ವಜನಿಕರು ಬ್ಯಾಂಕ್‌ಗಳಿಗೆ ಬಂದಾಗ ಸೌಜನ್ಯದಿಂದ ವರ್ತಿಸಿ, ಅರ್ಜಿ ಅರ್ಹವಾಗಿದ್ದರೆ ಕೂಡಲೇ ಸಾಲ ಮಂಜೂರು ಮಾಡಬೇಕು ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು. ಸಭೆಗೂ ಮುನ್ನ ಪೂರ್ವಭಾವಿ ಸಭೆ ನಡೆಸಿ, ಅಂಕಿ-ಅಂಶಗಳೊಂದಿಗೆ ಸಭೆಗೆ ಆಗಮಿಸುವಂತೆ ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಗೆ ಸಂಸದರು ಸೂಚಿಸಿದರು.



ಗುರುವಾರ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅಧ್ಯಕ್ಷತೆಯಲ್ಲಿ ಲೀಡ್ ಬ್ಯಾಂಕ್ ಸಭೆ ನಡೆಯಿತು.

## ಲೂಟಿ ಉದ್ದೇಶಕ್ಕಾಗಿಯೇ ನಿಗಮದಲ್ಲಿ ಹುದ್ದೆ ಸೃಷ್ಟಿ !

ಬೆಂಗಳೂರು, ಜು. 18 - ಮಹರ್ಷಿ ವಾಲ್ಮೀಕಿ ನಿಗಮದ ಕೋಟ್ಯಂತರ ಹಣ ಲೂಟಿ ಮಾಡುವ ಉದ್ದೇಶದಿಂದಲೇ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿ ಮಾಡಿದ್ದ ವಿಷಯ ಬೆಳಕಿಗೆ ಬಂದಿದೆ.

ಶಿವಕುಮಾರ್ ಎಂಬ ಹೆಸರಲ್ಲಿ ಜ್ಯೂನಿಯರ್ ಅಕೌಂಟೆಂಟ್ ಹುದ್ದೆ ಸೃಷ್ಟಿಸಿ, ಹಣಕಾಸು ವ್ಯವಹಾರ ನೋಡಿಕೊಳ್ಳುವ ಅಧಿಕಾರ ನೀಡಿ, ಗುರುತಿನ ಚೀಟಿಯನ್ನೂ ನೀಡಲಾಗಿತ್ತು ಎಂಬುದು ಎಸ್‌ಐಟಿ ತನಿಖೆಯಿಂದ ಬಯಲಾಗಿದೆ.

ನಿಗಮದ ಹಣ ಇಟ್ಟಿದ್ದ ನಗರದ ಮಹಾತ್ಮ ಗಾಂಧಿ (ಎಂಜಿ) ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಫೆಬ್ರವರಿ 21ರಂದು 0341230300 01619 ನಂಬರ್‌ನ ಖಾತೆ ತೆರೆಯಲಾಗಿತ್ತು.

ಯ್ಯೂನಿಯನ್ ಬ್ಯಾಂಕ್‌ನಲ್ಲಿನ ಶಿವಕುಮಾರ್ ಖಾತೆಗೆ ನಿಗಮದಿಂದ 187 ಕೋಟಿ ರೂ. ವರ್ಗಾವಣೆಗೆ ಮನವಿ ಮಾಡಲಾಯಿತು. ಇದರ ಮನವಿ ಮೇರೆಗೆ ನಿಗಮದಿಂದ 187 ಕೋಟಿ ರೂ.ಗಳನ್ನು ವರ್ಗಾವಣೆ ಮಾಡಿದ್ದ ವಾಲ್ಮೀಕಿ ನಿಗಮ, ಮಾರ್ಚ್ 5 ರಿಂದ ಮೇ 6 (2ನೇ ಪುಟಕ್ಕೆ)

## ಫಾಸ್ಟ್ಯಾಗ್ ಅಂಟಿಸದಿದ್ದರೆ ದುಪ್ಪಟ್ಟು ಶುಲ್ಕ

ನವದೆಹಲಿ, ಜು. 18 - ರಾಷ್ಟ್ರೀಯ ಹೆದ್ದಾರಿ ಬಳಕೆದಾರರು ಉದ್ದೇಶಪೂರ್ವಕವಾಗಿ ಫಾಸ್ಟ್ಯಾಗ್ ಅನ್ನು ವಾಹನದ ಗಾಜಿಗೆ ಹಚ್ಚಿರದೆ ಇದ್ದರೆ, ಎರಡು ಪಟ್ಟು ಶುಲ್ಕ ವಸೂಲಿ ಮಾಡಲಾಗುವುದು ಎಂದು ಎನ್.ಹೆಚ್.ಎ.ಐ. ತಿಳಿಸಿದೆ.

ಉದ್ದೇಶಪೂರ್ವಕವಾಗಿ ಫಾಸ್ಟ್ಯಾಗ್ ಹಚ್ಚದೇ ಕಾರಣ ಟೋಲ್‌ಗಳಲ್ಲಿ ಅನಗತ್ಯ ಸಮಸ್ಯೆಯಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ.

ಫಾಸ್ಟ್ಯಾಗ್ ಅನ್ನು ಮುಂದಿನ ಗಾಜಿಗೆ ಹಚ್ಚದೆ ಇದ್ದರೆ ದುಪ್ಪಟ್ಟು ಶುಲ್ಕ ಪಡೆಯುವ ಬಗ್ಗೆ ಎಲ್ಲಾ ಬಳಕೆದಾರರಿಗೆ ಟೋಲ್ ತಾಣಗಳಲ್ಲಿ ಸೂಚನೆ ನೀಡಬೇಕು ಎಂದು ಎನ್.ಹೆಚ್.ಎ.ಐ. ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಗೊಂದಲದಿಂದಾಗಿ ಮೀಸಲಾತಿ ವಿಧೇಯಕಕ್ಕೆ ತಡೆ : ಸಿಎಂ



ಬೆಂಗಳೂರು, ಜು. 18 - ಕೆಲ ಗೊಂದಲಗಳ ಕಾರಣದಿಂದಾಗಿ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ವಿಧೇಯಕವನ್ನು ತಡೆಯಲು ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮುಂದಿನ ಸಂಪುಟ ಸಭೆಯಲ್ಲಿ ವಿಧೇಯಕದ ಬಗ್ಗೆ ಚರ್ಚೆ ನಡೆಸಿ ಗೊಂದಲ ನಿವಾರಿಸಲಾಗುವುದು ಎಂದವರು ಹೇಳಿದ್ದಾರೆ.

ಸೋಮವಾರ ಸಂಪುಟ ಸಭೆಯಲ್ಲಿ ವಿಧೇಯಕದ ಬಗ್ಗೆ ಚರ್ಚೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಕೆಲ ಗೊಂದಲಗಳಿವೆ. ಮುಂದಿನ ಸಂಪುಟ ಸಭೆಯಲ್ಲಿ ಗೊಂದಲ ನಿವಾರಿಸಲಾಗುವುದು ಎಂದು ಹೇಳಿದರು.

ವಿಧಾನಸಭೆಯಲ್ಲಿ ಮೀಸಲಾತಿ ವಿಧೇಯಕದ ಬಗ್ಗೆ ಮಾತನಾಡಿದ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಸರ್ಕಾರ ವಿಧೇಯಕದ (2ನೇ ಪುಟಕ್ಕೆ)

## ನಾಳೆ ನೀಟ್ ಫಲಿತಾಂಶ ಪ್ರಕಟಕ್ಕೆ ಸುಪ್ರೀಂ ಆದೇಶ

ನವದೆಹಲಿ, ಜು. 18 - ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಜುಲೈ 20ರ ಒಳಗೆ ನೀಟ್ - ಯುಜಿ ಪರೀಕ್ಷೆಯ ಕೇಂದ್ರ ಹಾಗೂ ನಗರವಾರು ಫಲಿತಾಂಶವನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ನೀಟ್ - ಯುಜಿ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿರುವ ಆರೋಪಗಳು ಕೇಳಿಬಂದಿದ್ದು, ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಈ (2ನೇ ಪುಟಕ್ಕೆ)

## 81 ಸಾವಿರದ ಗಡಿ ದಾಟಿದ ಷೇರುಪೇಟೆ ಸೂಚ್ಯಂಕ

ಮುಂಬೈ, ಜು. 18 - ಷೇರುಪೇಟೆಗಳಲ್ಲಿ ನಾಲ್ಕನೇ ದಿನ ಉತ್ಸಾಹ ಮುಂದುವರೆದಿದ್ದು, ಇದೇ ಮೊದಲ ಬಾರಿಗೆ ಸೂಚ್ಯಂಕ 81 ಸಾವಿರದ ಗಡಿ ದಾಟಿದೆ.

ಬಿ.ಎಸ್.ಇ. ಸೂಚ್ಯಂಕ626.91 ಅಂಕಗಳ ಏರಿಕೆ ಕಂಡಿದ್ದು 81,343.46 ಹಂತದಲ್ಲಿ (2ನೇ ಪುಟಕ್ಕೆ)

## ಮೀಸಲಾತಿ ವಿರೋಧಿ ಹೋರಾಟದಲ್ಲಿ 18 ಸಾವು, 2,500 ಜನರಿಗೆ ಗಾಯ

ಢಾಕಾ, ಜು. 18- ಸರ್ಕಾರಿ ಹುದ್ದೆಗಳ ಮೀಸಲಾತಿ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕೆಂದು ಬಾಂಗ್ಲಾದೇಶದ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆ ತೀವ್ರ ಸ್ವರೂಪ ಪಡೆದಿದ್ದು, ಗುರುವಾರ 18ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ ಹಾಗೂ 2,500ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಇದುವರೆಗೂ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ಒಟ್ಟು 25 ಜನ ಸಾವನ್ನಪ್ಪಿದ್ದಾರೆ.

ಬಾಂಗ್ಲಾದ ಸರ್ಕಾರಿ ಸ್ವಾಮ್ಯದ ಬಾಂಗ್ಲಾದೇಶ್ ವಾಹಿನಿಯ ಕಚೇರಿಗೂ ಪ್ರತಿಭಟನಾಕಾರರು ಮುತ್ತಿಗೆ ಹಾಕಿದ್ದಾರೆ. ಕಟ್ಟಡಕ್ಕೆ ಹಾನಿ ಮಾಡಿದ್ದಲ್ಲದೆ ಹಲವಾರು ವಾಹನಗಳನ್ನು ಸುಟ್ಟು ಹಾಕಿದ್ದಾರೆ. ಪತ್ರಕರ್ತರು ಸೇರಿದಂತೆ ಕೆಲ ಸಿಬ್ಬಂದಿ ಕಟ್ಟಡದಲ್ಲಿ ಸಿಕ್ಕಿ ಬಿದ್ದಿದ್ದಾರೆ.

ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಇತರೆ ನಗರಗಳಲ್ಲಿನ ವಿದ್ಯಾರ್ಥಿಗಳು ಕಳೆದ ಒಂದು ವಾರದಿಂದ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸುತ್ತಿದ್ದಾರೆ. 1971ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರ ಕುಟುಂಬಗಳಿಗೆ ಮೀಸಲಾತಿ ನೀಡುತ್ತಿರುವುದನ್ನು ವಿದ್ಯಾರ್ಥಿಗಳು ತೀವ್ರವಾಗಿ ವಿರೋಧಿಸುತ್ತಿದ್ದಾರೆ.

ಗುರುವಾರ ನಡೆದ ಪ್ರತಿಭಟನೆಗಳ ವೇಳೆ ವಿದ್ಯಾರ್ಥಿಗಳು (2ನೇ ಪುಟಕ್ಕೆ)


### ಬಾಂಗ್ಲಾಗೆ ತೆರಳದಂತೆ ಎಚ್ಚರಿಕೆ

ಢಾಕಾ, ಜು.18 - ಬಾಂಗ್ಲಾದೇಶದಲ್ಲಿ ಮೀಸಲಾತಿ ಸಂಘರ್ಷ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಆ ದೇಶಕ್ಕೆ ತೆರಳುವುದನ್ನು ತಪ್ಪಿಸಬೇಕು ಎಂದು ಭಾರತ ಸಲಹೆ ನೀಡಿದೆ. ಬಾಂಗ್ಲಾದೇಶದಲ್ಲಿ ಇರುವ ಭಾರತೀಯರು ತಮ್ಮ ಪ್ರಯಾಣ ಹಾಗೂ ಸಂಚಾರವನ್ನು ಕಡಿಮೆ ಮಾಡಬೇಕು ಎಂದು ಇಲ್ಲಿರುವ ಭಾರತೀಯ ಉಚ್ಛಾಯೋಗ ಸಲಹೆ ನೀಡಿದೆ. ಬಾಂಗ್ಲಾದೇಶದಲ್ಲಿ 7,000 ಭಾರತೀಯರಿದ್ದಾರೆ.

## ಭದ್ರಾ ಒಳ ಹರಿವು ಮತ್ತಷ್ಟು ಹೆಚ್ಚಳ

ಶಿವಮೊಗ್ಗ, ಜು. 18 - ಮಲೆನಾಡಿನಲ್ಲಿ ಮುಂಗಾರು ಮಳೆ ಧಾರಾಕಾರವಾಗಿ ಸುರಿಯುತ್ತಿದ್ದು ತುಂಗಾ ಮತ್ತು ಭದ್ರಾ ನದಿಗಳಲ್ಲಿ ನೀರಿನ ಹರಿವು ಗುರುವಾರ ಮತ್ತಷ್ಟು ಹೆಚ್ಚಾಗಿದೆ.

ಗಾಜನೂರಿನ ತುಂಗಾ ಜಲಾಶಯಕ್ಕೆ ಸುಮಾರು 80 ಸಾವಿರ ಕ್ಯೂಸೆಕ್ಸ್ ಒಳಹರಿವು ಇದ್ದು ಅಷ್ಟೇ ಪ್ರಮಾಣದ ನೀರನ್ನು ಡ್ಯಾಮ್ ನ ಎಲ್ಲಾ ಕ್ರೆಸ್ಟ್ ಗೇಟುಗಳನ್ನು ತೆರೆದು ನದಿಗೆ ಬಿಡಲಾಗಿದೆ. ಇದರಿಂದಾಗಿ ತುಂಗಭದ್ರಾ ನದಿಯಲ್ಲಿ ನೀರು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ನದಿ ಹಿನ್ನೀರು ಇನ್ನೂ ಹೆಚ್ಚಾಗಿ ಪ್ರವಾಹ ಭೀತಿ ಎದುರಾಗಿದೆ. ಫತ್ತೇಪುರ -ಉಕ್ಕಡಗಾತ್ರಿ ನಡುವೆ ನದಿ ಹಿನ್ನೀರಿನಲ್ಲಿ ಜಲಾವೃತ ಗೊಂಡಿರುವ ಸಂಪರ್ಕ ಸೇತುವೆ ಮತ್ತು ತೋಟ, ಗದ್ದೆಗಳನ್ನು ಹರಿಹರ ತಹಶೀಲ್ದಾರ್ ಗುರುಬಸವರಾಜ್ ವೀಕ್ಷಣೆ ಮಾಡಿದರು.



ಭದ್ರಾ ಒಳ ಹರಿವು ಮತ್ತಷ್ಟು ಹೆಚ್ಚಳ : ಭದ್ರಾ ಜಲಾಶಯಕ್ಕೆ ಬುಧವಾರ 35 ಸಾವಿರ ಕ್ಯೂಸೆಕ್ಸ್ ಇದ್ದ ಒಳ ಹರಿವು ಗುರುವಾರ ಸಂಜೆ 45 ಸಾವಿರ (2ನೇ ಪುಟಕ್ಕೆ)

## ರಾಜೀ ಪಂಚಾಯ್ತಿಗೆ ಹೋದವರನ್ನೇ ಬರ್ಬರವಾಗಿ ಹತ್ಯೆಗೈದ ಅಳಿಯ

ದಾವಣಗೆರೆ, ಜು. 18- ಯಾದಗಿರಿ ಜಿಲ್ಲೆಯ ಮುನಗಾಲ ಗ್ರಾಮದಲ್ಲಿ ದಾವಣಗೆರೆಯ ನಿಟುವಳ್ಳಿ ಚಿಕ್ಕನಳ್ಳಿ ಹೊಸ ಬಡಾವಣೆಯ ಮೂವರನ್ನು ಗುರುವಾರ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಕುಟುಂಬ ಕಲಹವೇ ಕೊಲೆಗೆ ಕಾರಣ ಎನ್ನಲಾಗಿದ್ದು, ಮುನಗಾಲ ಗ್ರಾಮದ ನಿವಾಸಿ ನವೀನ್ ದೇವೇಂದ್ರಪ್ಪ (35) ಪತ್ನಿ ಹಾಗೂ ಅತ್ತೆ-ಮಾವ ಮೂವರನ್ನು ಕೊಂದ ಆರೋಪಿ.

ಅನ್ನಪೂರ್ಣ (25) ನವೀನ್ ದೇವೇಂದ್ರಪ್ಪನ ಪತ್ನಿ, ಅತ್ತೆ ಕವಿತಾ (45) ಮಾವ ಬಸವರಾಜಪ್ಪ (52) ಕೊಲೆಯಾದ ದುರ್ದೈವಿಗಳು.

ದಾವಣಗೆರೆಯ ಅನ್ನಪೂರ್ಣಳನ್ನು ನವೀನ್ ಕಳೆದ ನಾಲ್ಕು ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದ. ದಂಪತಿಗೆ ಮೂರು ವರ್ಷದ ಹೆಣ್ಣು ಮಗುವಿದೆ.

ಕಳೆದ ಒಂದು ವರ್ಷದ ಹಿಂದೆ ಗಂಡನ ಕಿರುಕುಳ ತಾಳದೇ ಅನ್ನಪೂರ್ಣ ತವರು ಮನೆಗೆ ಹಿಂದಿರುಗಿದ್ದಳು. ಒಂದು ವರ್ಷದಿಂದ ತಂದೆ, ತಾಯಿ ಜೊತೆಗಿದ್ದ ಅನ್ನಪೂರ್ಣಳನ್ನು ಮತ್ತೆ ಜೊತೆಯಾಗಿ ಇರೋಣ ಎಂದು ಪತಿ ಕರೆದಿದ್ದರಿಂದ ಬುಧವಾರ ತೆರಳಿದ್ದರು.ನ್ಯಾಯ ಪಂಚಾಯಿತಿ ಮಾಡಿ ಮತ್ತೆ ಜೊತೆಗಿರಲು ಒಪ್ಪಿಗೆ ನೀಡಿದ ನಂತರ ಮಗಳನ್ನು ಗಂಡ ಮನೆಗೆ ಬಿಡಲು ದಾವಣಗೆರೆಯಿಂದ ಅನ್ನಪೂರ್ಣ ಪೋಷಕರೂ ತೆರಳಿದ್ದರು.



ಅನ್ನಪೂರ್ಣ ಬಸವರಾಜಪ್ಪ ಕವಿತಾ

**ಯಾದಗಿರಿಯ ಮುನಗಾಲ ಗ್ರಾಮದಲ್ಲಿ ಕೊಲೆಯಾದವರು ದಾವಣಗೆರೆ ಚಿಕ್ಕನಳ್ಳಿ ಹೊಸ ಬಡಾವಣೆ ವಾಸಿಗಳು**

ಮಗಳನ್ನು ಬಿಟ್ಟು, ಮರಳಿ ದಾವಣಗೆರೆಗೆ ಹೋಗುತ್ತೇವೆ ಎಂದಾಗ ಮಾವ, ಅತ್ತೆಯನ್ನು ಕಾರಿನಲ್ಲಿ ಬಸ್ ನಿಲ್ದಾಣಕ್ಕೆ ಬಿಡುವುದಾಗಿ ಮೂವರನ್ನು ಕಾರಿನಲ್ಲಿ ಕೂರಿಸಿಕೊಂಡು ಬಂದು ರಸ್ತೆ ಮಧ್ಯದಲ್ಲಿ ಮೂವರ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿ, ಚಾಕು ಇರಿದು ಭೀಕರವಾಗಿ ಕೊಲೆ ಮಾಡಿದ್ದಾನೆ.

ನಂತರ ಹೆಂಡತಿ, ಅತ್ತೆ ಹಾಗೂ (2ನೇ ಪುಟಕ್ಕೆ)

## ಜಿಎಸ್‌ಟಿ ಗೊಂದಲವಿಲ್ಲದೆ ಉದ್ಯಮ ಸ್ನೇಹಿಯಾಗಬೇಕಿದೆ

### ಜಿಎಸ್‌ಟಿ ಕುರಿತ ವಿಚಾರ ಸಂಕಿರಣದಲ್ಲಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಎನ್.ಎಸ್. ನಾಗಸ್ವಾಮಿ

ದಾವಣಗೆರೆ, ಜು. 18 - ಜಿ.ಎಸ್.ಟಿ. ನಿಯಮಗಳ ಜಾರಿ ಸಂಬಂಧದಲ್ಲಿ ಇರುವ ಗೊಂದಲ ಹಾಗೂ ಅಸ್ಪಷ್ಟತೆಗಳನ್ನು ನಿವಾರಿಸಿಕೊಳ್ಳಬೇಕಿದೆ ಎಂದು ಬಳ್ಳಾರಿ ಕೇಂದ್ರ ವಲಯದ ವಾಣಿಜ್ಯ ತೆರಿಗೆಗಳ (ಜಾರಿ) ಜಂಟಿ ಆಯುಕ್ತ ಎನ್.ಎಸ್. ನಾಗಸ್ವಾಮಿ ಹೇಳಿದ್ದಾರೆ.

ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವತಿಯಿಂದ ನಗರದ ಲೆಕ್ಕಪರಿಶೋಧಕರ ಭವನದಲ್ಲಿ ಆಯೋಜಿಸಲಾಗಿದ್ದ ಜಿ.ಎಸ್.ಟಿ. ಕಾಯ್ದೆ ಕುರಿತ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಯಾವುದೇ ಕಾಯ್ದೆ ಇಲ್ಲವೇ ನಿಯಮಗಳು ಸಿದ್ಧಾಂತದಲ್ಲಿ ಸ್ಪಷ್ಟವಾಗಿರುತ್ತವೆ. ಆದರೆ, ಜಾರಿಗೆ ತರುವಾಗ ಗೊಂದಲ ಹಾಗೂ ಅಸ್ಪಷ್ಟತೆಗಳಿರುತ್ತವೆ. ತೆರಿಗೆ ನಿಯಮಗಳ ವಿಷಯದಲ್ಲಂತೂ ಗೊಂದಲಗಳು ಇನ್ನಷ್ಟು ಹೆಚ್ಚಾಗುತ್ತವೆ ಎಂದವರು ಹೇಳಿದರು.

ಹಾಗೆಂದ ಮಾತ್ರಕ್ಕೆ, ಪ್ರತಿಯೊಬ್ಬ ತೆರಿಗೆ ಅಧಿಕಾರಿಯೂ ತಾನು ಭಾವಿಸಿದ ರೀತಿಯಲ್ಲಿ ನಿಯಮಗಳನ್ನು ಜಾರಿಗೆ ತರಲಾಗದು. ಉದ್ಯಮ ಸ್ನೇಹಿ ವ್ಯವಸ್ಥೆ ಜಾರಿಯಾಗಬೇಕಾದಲ್ಲಿ ಗೊಂದಲ ಹಾಗೂ ಅಸ್ಪಷ್ಟತೆಗಳನ್ನು ನಿವಾರಿಸಬೇಕಿದೆ ಎಂದು ನಾಗಸ್ವಾಮಿ ತಿಳಿಸಿದರು.

ನಿಯಮಗಳನ್ನು ಸರಿಯಾಗಿ ಅರ್ಥೈಸಿಕೊಂಡು ಜಾರಿಗೆ



ತರಲು ತೆರಿಗೆ ಸಲಹೆಗಾರರು ಹಾಗೂ ಅಧಿಕಾರಿಗಳು ಜೊತೆಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದವರು ಕರೆ ನೀಡಿದರು.

ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಪ್ರಾಕ್ಟಿಷನರ್ಸ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಶ್ರೀಧರ ಪಾರ್ಥಸಾರಥಿ ಮಾತನಾಡಿ, ತೆರಿಗೆ ಸಲಹೆಗಾರರು ಜಿ.ಎಸ್.ಟಿ. ಕಾಯ್ದೆಯನ್ನು ಸರಿಯಾಗಿ ತಿಳಿದರೆ ಮಾತ್ರ ಉಳಿಯಲು ಹಾಗೂ ಬೆಳೆಯಲು ಸಾಧ್ಯ ಎಂದು ಹೇಳಿದರು.

ನ್ಯಾಯಾಲಯದಲ್ಲಿ ವಕೀಲರು ಇಲ್ಲವೇ ಕಕ್ಷಿದಾರರಿಗೆ ಮಾತ್ರ ವಾದ ಮಂಡಿಸಲು ಅವಕಾಶ ಇದೆ. ಅದೇ ರೀತಿ ತೆರಿಗೆ ವಿಷಯದಲ್ಲೂ ಸಲಹೆ ನೀಡುವವರ ಬಗ್ಗೆ ನಿರ್ಬಂಧಗಳಿವೆ. ತೆರಿಗೆ ವಿಷಯದಲ್ಲಿ ಅನಧಿಕೃತ ವ್ಯಕ್ತಿಗಳ ಪ್ರವೇಶ ನಿರ್ಬಂಧಿಸಬೇಕಿದೆ ಎಂದು ತಿಳಿಸಿದರು.

ರಾಜ್ಯ ತೆರಿಗೆ ಸಲಹೆಗಾರರ ಸಂಘದ (2ನೇ ಪುಟಕ್ಕೆ)

# ಇಲಾಖೆ ಜೊತೆಗೆ ರಾಜಕೀಯ ಧುರೀಣರು ಕೈ ಜೋಡಿಸಿದಾಗ ಮಾತ್ರ ಸಂಚಾರಿ ವ್ಯವಸ್ಥೆ ಸರಿಪಡಿಸಲು ಸಾಧ್ಯ : ಎಸ್ಪಿ ಉಮಾ

ಹರಿಹರ, ಜು.18- ನಗರದಲ್ಲಿ ರಸ್ತೆ ಸಂಚಾರ ಸುಗಮಗೊಳಿಸಲು ಬರೀ ದಂಡ ವಿಧಿಸಿ ನಿಯಂತ್ರಣ ಮಾಡುವುದಕ್ಕಿಂತ, ಇಲಾಖೆ ಅಧಿಕಾರಿಗಳ ಜೊತೆಗೆ ರಾಜಕೀಯ ಧುರೀಣರು ಕೈ ಜೋಡಿಸಿದಾಗ ಮಾತ್ರ ಸಂಚಾರಿ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ತಿಳಿಸಿದರು.



ಗಾಂಧಿ ವೃತ್ತ,, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ರಿಲಯನ್ಸ್ ಮಾರುಕಟ್ಟೆ, ಜೆ. ಸೆವೆನ್ ಮುಂಭಾಗದ ರಸ್ತೆ ಸೇರಿದಂತೆ, ಹಲವು ರಸ್ತೆಗಳಲ್ಲಿ ಸಂಚಾರ ಮಾಡಿ, ದಿನನಿತ್ಯ ಆಗುತ್ತಿರುವ ಸಮಸ್ಯೆ ಗಳನ್ನು ಆಲಿಸಿ, ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಶಾಲಾ- ಕಾಲೇಜು ಸ್ಥಳದಲ್ಲಿ ವಿದ್ಯಾರ್ಥಿಗಳು ನಿರ್ಭಯವಾಗಿ ಓಡಾಡಲು ಮತ್ತು ಬಸ್ ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆ ಬರದಂತೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಬಾರ್ ಅಂಡ್ ರೆಸ್ಟೋರೆಂಟ್‌ಗಳು ಸರ್ಕಾರದ ನಿಯಮದ ಪ್ರಕಾರ ಸಮಯ ಪಾಲನೆಯನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಹೋಗಬೇಕು.

ನಗರದ ಮಾರುಕಟ್ಟೆ, ಮುಖ್ಯ ರಸ್ತೆ, ತಹಶೀಲ್ದಾರ್ ಕಚೇರಿ ಮುಂಭಾಗ, ಸಂತೆ ನಡೆಯುವ ಸ್ಥಳಗಳಲ್ಲಿ ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನಗಳನ್ನು ನಿಲ್ಲಿಸುವಂತಹ ಚಾಲಕರಿಗೆ ಕಡ್ಡಾಯವಾಗಿ ದಂಡವನ್ನು ಹಾಕಲಾಗುತ್ತದೆ. ಈ ವೇಳೆ ರಾಜಕೀಯ ಪಕ್ಷಗಳ ಮುಖಂಡರಾದವರು ದಂಡವನ್ನು ಹಾಕುವಾಗ ವಾಹನಗಳ ಮಾಲೀಕರ ಪರವಾಗಿ ಶಿಫಾರಸ್ಸು ಮಾಡುವುದರ ಬದಲಾಗಿ, ಅವರು ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಸಹಕಾರ ನೀಡಿದರೆ ಸುಗಮ ಸಂಚಾರ ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆ.

ಆಟೋ ಚಾಲಕರು ಮತ್ತು ಮಾಲೀಕರು ರಾತ್ರಿ ವೇಳೆ ಸಾರ್ವಜನಿಕರಿಂದ ಹೆಚ್ಚು ಹಣ ಕೇಳುವುದನ್ನು ಬಿಡಬೇಕು. ಕಡ್ಡಾಯವಾಗಿ ಲೈಸೆನ್ಸ್ ಹೊಂದಿರುವ ವ್ಯಕ್ತಿಗಳು ಮಾತ್ರ ಆಟೋ ಚಾಲನೆ ಮಾಡಬೇಕು. ಸಾರ್ವಜನಿಕ ಆಸ್ಪತ್ರೆಯಲ್ಲಿ ರಾತ್ರಿ ವೇಳೆಯಲ್ಲಿ ಚಿಕಿತ್ಸೆಗೆ ಬರುವ ವ್ಯಕ್ತಿಗಳು ವೈದ್ಯರ ಜೊತೆಗೆ ಅಸಭ್ಯವಾಗಿ ವರ್ತಿಸಿದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ. ಆಟೋ ಮತ್ತು ವ್ಯಾನ್ ಮಾಲೀಕರು ಮಕ್ಕಳನ್ನು ಸರ್ಕಾರದ ಮಾರ್ಗಸೂಚಿ ಅನ್ವಯದಂತೆ ಕರೆದು ಕೊಂಡು ಹೋಗಬೇಕು ಎಂದು ಎಚ್ಚರಿಸಿದರು.

ನಗರದಲ್ಲಿ ಬಹುತೇಕ ಕಡೆಗಳಲ್ಲಿ ಸಿಸಿ ಕ್ಯಾಮರಾ ಇಲ್ಲದೇ ಹೋದರೆ ಕಳ್ಳತನ, ಅಕ್ರಮ ಚಟುವಟಿಕೆ, ಸೇರಿದಂತೆ ಅನೇಕ ಕೃತ್ಯಗಳನ್ನು ನಿಯಂತ್ರಣಕ್ಕೆ ತರುವುದು ಕಷ್ಟವಾಗುತ್ತದೆ. ಆದ್ದರಿಂದ ಪೊಲೀಸ್ ಇಲಾಖೆಯ ಜೊತೆಗೆ ನಗರಸಭೆ, ಲೋಕೋಪಯೋಗಿ ಸೇರಿದಂತೆ ಎಲ್ಲರೂ ಸಹಕಾರ ನೀಡಿದಾಗ ಸುಗಮ ಸಂಚಾರ ವ್ಯವಸ್ಥೆ ತರಲು ಅನುಕೂಲ ಆಗುತ್ತದೆ ಎಂದು ಹೇಳಿದರು.

## ಸಿಬ್ಬಂದಿ ಕೊರತೆ

ಹರಿಹರದಲ್ಲಿ ಜನಸಂಖ್ಯೆ ಅಧಿಕವಾಗಿ ಇರುವ ಕಾರಣ, ಸಾಕಷ್ಟು ಸಮಸ್ಯೆಗಳೂ ಇವೆ. ಅದಕ್ಕೆ ತಕ್ಕಂತೆ ನಗರ ಠಾಣೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ ಇರುತ್ತದೆ. ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆಗೆ ಈಗಾಗಲೇ ಚರ್ಚಿಸಲಾಗಿದೆ. ಸಂಚಾರಿ ಪೊಲೀಸ್ ಠಾಣೆ ತೆರೆಯುವ ಬಗ್ಗೆಯೂ ಸರ್ಕಾರದ ಗಮನಕ್ಕೆ ತರಲಾಗಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಜಿ.ಎಸ್. ಬಸವರಾಜ್, ನಗರ ಠಾಣೆಯ ಸಿಪಿಐ ಸುರೇಶ್ ಸಗರಿ, ಪೊಲೀಸ್ ಇನ್ಸ್‌ಪೆಕ್ಟರ್ ದೇವಾನಂದ್, ಪಿಎಸ್ಐಗಳಾದ ವಿಜಯಕುಮಾರ್, ಶ್ರೀಪತಿ ಅಗ್ನಿ, ಎಎಸ್ಐಗಳಾದ ರಾಜಶೇಖರ್, ಮನಸೂರ್ ಆಹ್ಮದ್, ಪೊಲೀಸ್ ಸಿಬ್ಬಂದಿ ವರ್ಗದ ನಿಂಗರಾಜ್, ಸತೀಶ್, ನಾಗರಾಜ್, ತಿಪ್ಪೇಸ್ವಾಮಿ, ರಿಜ್ವಾನ್ ಆಹ್ಮದ್, ನಾಯ್ಕ್, ಅಂಜಾದ್ ಹಾಗೂ ನಿವೃತ್ತ ಇಂಜಿನಿಯರ್ ಮಲ್ಲಿಕಾರ್ಜುನ್, ದೇವೇಂದ್ರಪ್ಪ, ಕೃಷ್ಣ, ಮಂಜುನಾಥ್ ಕೊಪ್ಪಳ, ಕೆ.ಎಸ್.ಆರ್.ಟಿ. ಸಿ ಸಿಬ್ಬಂದಿಗಳು ಹಾಜರಿದ್ದರು.




# ಜಗಳೂರು ಪಟ್ಟಣದ ಮುಖ್ಯ ರಸ್ತೆ ವಿಸ್ತರಣೆಗೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ

ಜಗಳೂರು, ಜು. 18 - ಪಟ್ಟಣದ ಮುಖ್ಯ ರಸ್ತೆ ವಿಸ್ತರಣೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನಂಜುಂಡಸ್ವಾಮಿ ಬಣದ ವತಿಯಿಂದ ತಹಶಿಲ್ದಾರ್ ಅವರಿಗೆ ವಿಸಲ್ಲಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತದ ಮೂಲಕ ಅಂಬೇಡ್ಕರ್ ವೃತ್ತದಿಂದ ತಾಲ್ಲೂಕು ಕಚೇರಿವರೆಗೂ ಬೈಕ್‌ನಲ್ಲಿ ಮೆರವಣಿಗೆ ನಡೆಸಿ ನಂತರ ಮಾತನಾಡಿದರು.

ತಾಲ್ಲೂಕು ಅಧ್ಯಕ್ಷ ಗಡಿಮಾಕುಂಟೆ ಬಸವರಾಜಪ್ಪ ಮಾತನಾಡಿ,'ಚಳ್ಳಕೆರೆ ದಾವಣಗೆರೆ ರಸ್ತೆ ಮತ್ತು ಭರಮ ಸಮುದ್ರ ಹಾಗೂ ದೊಣೆಹಳ್ಳಿ ಕೂಡು ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕು. ರಸ್ತೆಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ, ಭಾರೀ ಪ್ರಮಾಣ ಹೊತ್ತು ಸಂಚರಿಸುವ ಖಾಸಗೀ ವಾಹನಗಳಿಗೆ ತೀವ್ರ ತೊಂದರೆ ಯಾಗಿದೆ ಎಂದರು.

ಜಂಟಿ ಕಾರ್ಯದರ್ಶಿ ಕುಮಾರ್ ಭರಮ ಸಮುದ್ರ ಮಾತನಾಡಿ, ಪಟ್ಟಣದ ಮುಖ್ಯ ರಸ್ತೆಯ ಇಕ್ಕೆಲಗಳ ವರ್ತಕರು ರಸ್ತೆ ಅಗಲೀಕರಣ ಕುರಿತು ರಾಜಕಾರಣದ ಹುನ್ನಾರ ನಡೆಸಲಾಗುತ್ತಿದೆ. ನೆರೆ ಹೊರೆಯ ತಾಲ್ಲೂಕುಗಳಲ್ಲಿ ಸೇರಿದಂತೆ ವಿಧಾನ ಸಭಾ ಕ್ಷೇತ್ರದ ಅರಸೀಕೆರೆಯಲ್ಲಿ ರಸ್ತೆ ವಿಸ್ತರಣೆಯಾಗಿದೆ. ಜಗಳೂರು ಪಟ್ಟಣ ದಿನದಿಂದ ದಿನಕ್ಕೆ ಪಟ್ಟಣ ಸರ್ವತೋಮುಖ ಅಭಿವೃದ್ದಿಗೊಳ್ಳುತ್ತಿದೆ. ಶಾಸಕರು ಶೀಘ್ರ ರಸ್ತೆ ಅಗಲೀಕರಣಕ್ಕೆ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಟಿ. ಲಕ್ಷ್ಮಣ ನಾಯಕ, ಲೋಕಣ್ಣ, ಡಿ.ಎಸ್.ಎಸ್. ತಾಲ್ಲೂಕು ಅಧ್ಯಕ್ಷ ಕುಬೇಂದ್ರಪ್ಪ, ಪಲ್ಲಾಗಟ್ಟೆ ರಂಗಪ್ಪ, ಪಾಂಡು, ರೈತ ಸಂಘಟನೆ ಮುಖಂಡ ಮಾರಪ್ಪ, ಭರಮಪ್ಪ, ರಾಜಪ್ಪ, ಚೌಡಪ್ಪ, ರಾಜಪ್ಪ, ಮಂಜಪ್ಪ, ರಾಜು, ಶಿವಣ್ಣ, ಪಾಲನಾಯಕ, ಓಬಯ್ಯ, ಸತೀಶ್, ಸೇರಿದಂತೆ ಭಾಗವಹಿಸಿದ್ದರು.

# ಮೀಸಲಾತಿ ವಿರೋಧಿ ಹೋರಾಟದಲ್ಲಿ 18 ಸಾವು, 2,500 ಜನರಿಗೆ ಗಾಯ

**(1ನೇ ಪುಟದಿಂದ)** ಹಾಗೂ ಭದ್ರತಾ ಸಿಬ್ಬಂದಿ ಮತ್ತು ಆಡಳಿತಾರೂಢ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ. ಈ ಘರ್ಷಣೆಗಳಲ್ಲಿ 18 ಜನ ಸಾವನ್ನಪ್ಪಿದ್ದಾರೆ ಹಾಗೂ 2,500ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಬಾಂಗ್ಲಾದೇಶದ ಪತ್ರಿಕೆಗಳು ವರದಿ ಮಾಡಿವೆ.

ಮೃತರಲ್ಲಿ ಬಹುತೇಕರು ವಿದ್ಯಾರ್ಥಿಗಳು ಎನ್ನಲಾಗುತ್ತಿದೆ. ಮಂಗಳವಾರದಂದು ಘರ್ಷಣೆಗಳಲ್ಲಿ ಆರು ಜನ ಸಾವನ್ನಪ್ಪಿದ್ದರು.

ಘರ್ಷಣೆಗಳ ಹಿನ್ನೆಲೆಯಲ್ಲಿ ಢಾಕಾ ಮೆಟ್ರೋ ರೈಲು ಸೇವೆ ಸ್ಥಗಿತಗೊಳಿಸಲಾಗಿತ್ತು. ಮೊಬೈಲ್ ಇಂಟರ್ನೆಟ್ ಸೇವೆ ನಿಲ್ಲಿಸಲಾಗಿದೆ. ಪೊಲೀಸರ ವೆಬ್‌ಸೈಟ್ ಕಾರ್ಯನಿರ್ವಹಿಸುತ್ತಿಲ್ಲ. ಆಡಳಿತರೂಢ ಅವಾಮಿ ಲೀಗ್ ವಿದ್ಯಾರ್ಥಿ ವಿಭಾಗದ ವೆಬ್‌ಸೈಟ್ ಹ್ಯಾಕ್ ಮಾಡಲಾಗಿದೆ.

ಕಾನೂನು ಸುವ್ಯವಸ್ಥೆ ಕಾಪಾಡಲು ದೇಶಾದ್ಯಂತ ಗಡಿ ಭದ್ರತಾ ಪಡೆಯನ್ನು ನಿಯೋಜಿಸಲಾಗಿದೆ. ಬಿಗಿ ಭದ್ರತೆ ನಡುವೆ ಸರ್ಕಾರಿ ಕಚೇರಿ ಹಾಗೂ ಬ್ಯಾಂಕನ್ನು ತೆರೆಯಲಾಗಿತ್ತು. ಆದರೆ, ಜನಸಂದಣಿ ವಿರಳವಾಗಿತ್ತು.

ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಜೊತೆ ಮಾತುಕತೆ ನಡೆಸಲು ಸರ್ಕಾರ ನಿರ್ಧರಿಸಿದೆ ಎಂದು ಕಾನೂನು ಸಚಿವ ಅನಿಸುಲ್ ಹಕ್ ಹೇಳಿದ್ದಾರೆ.

ಆದರೆ ವಿದ್ಯಾರ್ಥಿ ಸಂಘಟನೆಗಳು ಸರ್ಕಾರದ ಪ್ರಸ್ತಾಪಕ್ಕೆ ಸ್ಪಂದಿಸಿಲ್ಲ. ಆಡಳಿತಾರೂಢ ಪಕ್ಷದ ಕಾರ್ಯಕರ್ತರು ಹತ್ಯೆ ಹಾಗೂ ಹಿಂಸಾಚಾರ ನಡೆಸಿದ್ದಾರೆ ಎಂದು ವಿದ್ಯಾರ್ಥಿ ಸಂಘಟನೆಗಳು ದೂರಿವೆ.

1971ರ ವಿಮೋಚನಾ ಸಮರದಲ್ಲಿ ಪಾಲ್ಗೊಂಡಿದ್ದವರ ಕುಟುಂಬದವರಿಗೆ ಶೇ. 30 ರಷ್ಟು ಮೀಸಲಾತಿ ಇದೆ. ಅಲ್ಲದೇ, ಹಿಂದುಳಿದ ಜಿಲ್ಲೆಗಳಿಗೆ ಶೇಕಡ 10, ಮಹಿಳೆಯರಿಗೆ ಶೇಕಡ 10, ಧಾರ್ಮಿಕ ಅಲ್ಪಸಂಖ್ಯಾತರಿಗೆ ಶೇಕಡ 5 ಹಾಗೂ ವಿಕಲಚೇತನರಿಗೆ ಶೇಕಡ ಒಂದರಷ್ಟು ಮೀಸಲಾತಿ ಇದೆ. ಬಾಂಗ್ಲಾ ದೇಶದಲ್ಲಿ ಪ್ರತಿ ವರ್ಷ 4 ಲಕ್ಷ ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಸರ್ಕಾರ ಪ್ರತಿ ವರ್ಷ ಸುಮಾರು 3,000 ಜನರನ್ನು ಸರ್ಕಾರಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದೆ.

# ಭದ್ರಾ ಒಳ ಹರಿವು ಮತ್ತಷ್ಟು ಹೆಚ್ಚಳ



**(1ನೇ ಪುಟದಿಂದ)** ಕ್ಯೂಸೆಕ್ಸ್ ಗೆ ಏರಿಕೆ ಆಗಿತ್ತು. ಜಲಾಶಯದ ನೀರಿನ ಮಟ್ಟ 155 ಅಡಿ ದಾಟಿದ್ದು ಕಳೆದ ವರ್ಷಕ್ಕಿಂತ 14 ಅಡಿ ನೀರು ಹೆಚ್ಚು ಸಂಗ್ರಹವಾಗಿದೆ. ಜಲಾಶಯ ಭರ್ತಿಗೆ 30 ಅಡಿ ಭಾಕಿ ಇದ್ದು, ಜಲಾಶಯದ ಗರಿಷ್ಠ ಮಟ್ಟ 186 ಅಡಿಗಳಾಗಿರುತ್ತದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 141 ಅಡಿ ನೀರಿತ್ತು. ಭದ್ರಾ ಜಲಾಶಯಕ್ಕೆ ಒಳ ಹರಿವು ಹೆಚ್ಚಾಗುತ್ತಿರುವುದು ಅಚ್ಚುಕಟ್ಟಿನ ರೈತರಿಗೆ ಖುಷಿ ತಂದಿದೆ.

## ಹೊಸಪೇಟೆ ಜಲಾಶಯಕ್ಕೆ 1 ಲಕ್ಷ ಕ್ಯೂಸೆಕ್ಸ್ ಒಳಹರಿವು

ಗಾಜನೂರಿನ ತುಂಗಾ ಜಲಾಶಯದಿಂದ ಬಿಡುಗಡೆ ಮಾಡಿರುವ 80 ಸಾವಿರ ಕ್ಯೂಸೆಕ್ಸ್ ನೀರಿನ ಜೊತೆಗೆ ಇತರೆ ಹಳ್ಳ-ಕೊಳ್ಳ ನದಿಗಳ ನೀರು ಸೇರಿ ಒಟ್ಟು 1 ಲಕ್ಷದ 10 ಸಾವಿರ ಕ್ಯೂಸೆಕ್ಸ್ ನೀರು ಹೊಸಪೇಟೆಯ ತುಂಗಭದ್ರಾ ಜಲಾಶಯಕ್ಕೆ ಹರಿದು ಬಂದಿದೆ. ಇದರಿಂದಾಗಿ ಜಲಾಶಯದ ನೀರಿನ ಮಟ್ಟ 1615 ಅಡಿ ಆಗಿದ್ದು, 48 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದ ಗರಿಷ್ಠ ಮಟ್ಟ 1633 ಅಡಿ ಇದೆ.

# ನೀಟ್ ಫಲಿತಾಂಶ ಪ್ರಕಟಕ್ಕೆ ಆದೇಶ

**(1ನೇ ಪುಟದಿಂದ)**ಬಗ್ಗೆ ವಿಚಾರಣೆ ನಡೆಸಿರುವ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, ಅಭ್ಯರ್ಥಿಗಳ ಗುರುತನ್ನು ಮಸುಕು ಮಾಡಿ ಉಳಿದ ಫಲಿತಾಂಶದ ವಿವರ ಪ್ರಕಟಿಸಬೇಕು ಎಂದು ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರೂ ಇದ್ದಾರೆ.

ಇಡೀ ಪರೀಕ್ಷಾ ಪ್ರಕ್ರಿಯೆ ಅಪವಿತ್ರಗೊಂಡಿದೆ ಎಂಬುದು ಖಚಿತವಾದ ನಂತರವೇ ಮರು ಪರೀಕ್ಷೆಗೆ ಆದೇಶ ಹೊರಡಿಸಲು ಸಾಧ್ಯ ಎಂದು ಪೀಠ ಹೇಳಿದೆ.

ಪರೀಕ್ಷೆ ರದ್ದುಗೊಳಿಸಬೇಕು ಹಾಗೂ ಮರು ಪರೀಕ್ಷೆ ನಡೆಸಬೇಕು ಎಂಬ ಅರ್ಜಿಗಳ ಕುರಿತು ಜುಲೈ 22ರಂದು ಸುಪ್ರೀಂ ಕೋರ್ಟ್ ವಿಚಾರಣೆ ಮುಂದುವರೆಸಲಿದೆ.

ಪರೀಕ್ಷೆಯಲ್ಲಿ ವ್ಯಾಪಕ ಅವ್ಯವಹಾರಗಳು ನಡೆದಿವೆ, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಹಾಗೂ ಮರು ಪರೀಕ್ಷೆಯ ಅಗತ್ಯವಿದೆ ಎಂಬುದನ್ನು ನೀವು ಸಾಬೀತುಪಡಿಸಬೇಕು ಎಂದು ಮರು ಪರೀಕ್ಷೆ ಬಯಸುವ ಅಭ್ಯರ್ಥಿಗಳ ಪರವಾಗಿ ಹಾಜರಿದ್ದ ವಕೀಲರಿಗೆ ಸುಪ್ರೀಂ ಕೋರ್ಟ್ ಪೀಠ ತಿಳಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆ ಪಾಟ್ನಾ ಹಾಗೂ ಹಜಾರಿಬಾಗ್ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಗೋಧ್ರಾದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ ಎಂಬುದು ಕಂಡು ಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮರು ಪರೀಕ್ಷೆ ಬಯಸುತ್ತಿರುವ ಅರ್ಜಿದಾರರು, ಪ್ರಶ್ನೆ ಪತ್ರಿಕೆ ಸೋರಿಕೆ ವ್ಯವಸ್ಥಿತವಾಗಿದೆ ಹಾಗೂ ಇದರಿಂದ ಇಡೀ ಪರೀಕ್ಷೆಯ ಮೇಲೆ ಪರಿಣಾಮವಾಗಿದೆ ಎಂಬುದನ್ನು ಸಾಬೀತುಪಡಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ.

ಪಾಟ್ನಾ ಹಾಗೂ ಹಜಾರಿಬಾಗ್ ಕೇಂದ್ರಗಳಲ್ಲಿ ಪತ್ರಿಕೆ ಸೋರಿಕೆಯಾದ ಆರೋಪವಿದೆ. ಗೋದ್ರಾದಲ್ಲಿ ವ್ಯಕ್ತಿಯೋರ್ವ ಹಣ ಪಡೆದು ಕೆಲ ಅಭ್ಯರ್ಥಿಗಳ ಉತ್ತರ ಪತ್ರಿಕೆಯನ್ನು ಬರೆದಿದ್ದಾನೆ ಎನ್ನಲಾಗಿದೆ.

ನೀಟ್ ಅಕ್ರಮಗಳ ಕುರಿತು ಸಿಬಿಐ ತನಿಖೆ ನಡೆಸುತ್ತಿರುವ ಬಗ್ಗೆ ಮಾತನಾಡಿರುವ ಪೀಠ, ಈಗ ಸಿಬಿಐ ತನಿಖೆ ನಡೆಯುತ್ತಿದೆ. ವಿವರಗಳನ್ನು ಬಹಿರಂಗಪಡಿಸಿದರೆ ತನಿಖೆಯ ಮೇಲೆ ಪರಿಣಾಮವಾಗುತ್ತದೆ ಎಂದು ಹೇಳಿದೆ.

## ಬಿಜೆಪಿ ಸಭಾತ್ಯಾಗ, ಸ್ಪೀಕರ್ ಗರಂ

**(1ನೇ ಪುಟದಿಂದ)** ನೀಡಿದರು. ಪಟ್ಟಣ್ ಮಾತನಾಡಿ, ಹೆಚ್.ಸಿ. ಮಹದೇವಪ್ಪ ಸೇರಿದಂತೆ ಹಿರಿಯ ಸಚಿವರು ಇದ್ದಾರೆ. ನಾನು ಕಲಾಪದ ಟಿಪ್ಪಣಿ ಮಾಡಿಕೊಳ್ಳುತ್ತೇನೆ, ಮುಖ್ಯಮಂತ್ರಿ ಸಿದ್ದರಾಮಯ್ಯ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ಉತ್ತರ ನೀಡಲಿದ್ದಾರೆ ಎಂದರು.

ಅಶೋಕ್ ಮಾತನಾಡಿ, ನಾವು ಅಧಿವೇಶನಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೇವೆ. ಸಚಿವರಿಗೆ ಏನು ಸಮಸ್ಯೆ? ಅವರು ಏಕೆ ಸದನಕ್ಕೆ ಬರುತ್ತಿಲ್ಲ? ಅವರ ವರ್ತನೆ ಖಂಡಿಸಿ ಸಭಾತ್ಯಾಗ ಮಾಡುತ್ತೇವೆ ಎಂದು ಹೇಳಿದರು. ಈ ಹಂತದಲ್ಲಿ ಮಾತನಾಡಿದ ಖಾದರ್, ಸಚಿವರು ಹಾಗೂ ಶಾಸಕರು ತಮ್ಮ ಬೇರೆಲ್ಲಾ ಕೆಲಸಗಳನ್ನು ಬದಿಗೊತ್ತಿ ಸದನಕ್ಕೆ ಸರಿಯಾದ ಸಮಯಕ್ಕೆ ಬರಬೇಕು. ಸಚಿವರು ತಡವಾಗಿ ಬರುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದರು.

## 81 ಸಾವಿರದ ಗಡಿ ದಾಟಿದ ಷೇರುಪೇಟೆ

**(1ನೇ ಪುಟದಿಂದ)** ಅಂತ್ಯವಾಗಿದೆ. ಟಿಸಿಎಸ್, ಇನ್ಫೋಸಿಸ್ ಹಾಗೂ ಟೆಕ್ ಮಹೀಂದ್ರ ಷೇರುಗಳು ಏರಿಕೆ ಕಂಡಿವೆ.

ನಿಫ್ಟಿ ಸೂಚ್ಯಂಕ ಸಹ 187.85 ಅಂಕಗಳ ಏರಿಕೆ ಕಂಡಿದ್ದು ಸಾರ್ವಕಾಲಿಕ ದಾಖಲೆಯಾದ24,800.85 ಅಂಕಗಳ ಹಂತಕ್ಕೆ ತಲುಪಿದೆ.

## ಬರ್ಬರವಾಗಿ ಹತ್ಯೆಗೈದ ಅಳಿಯ

**(1ನೇ ಪುಟದಿಂದ)** ಮಾವ ಸೇರಿ ಮೂವರ ಮೃತದೇಹಗಳನ್ನು ವಡಗೇರ ತಾಲ್ಲೂಕಿನ ಜೋಳದಡಗಿ ಗ್ರಾಮದ ಬಳಿ ಬಿಸಾಡಿ ಬಂದಿದ್ದಾನೆ. ಯಾದಗಿರಿಯ ಅನ್ನಪೂರ್ಣಳ ಶವವನ್ನು ಪತ್ತೆ ಮಾಡಿರುವ ಪೊಲೀಸರು, ಆಕೆಯ ಗಂಡನನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ನವೀನ್ ಕಬ್ಬಿಣದ ರಾಡ್ ಹಾಗೂ ಚಾಕುನಿಂದ ಮೂವರನ್ನು ಕೊಲೆ ಮಾಡಿದ್ದಾನೆ ಎನ್ನಲಾಗಿದೆ. ಸೈದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೀದಿಬದಿ ವ್ಯಾಪಾರಿಗಳಿಂದ ಪ್ರತಿಭಟನೆ

**ಹರಿಹರ**

ಹರಿಹರ, ಜು. 18 - ನಗರದಲ್ಲಿ ಬೀದಿಬದಿ ರಸ್ತೆಯಲ್ಲಿ ವ್ಯಾಪಾರ ವಹಿವಾಟು ನಡೆಸುವ ವ್ಯಾಪಾರಿಗಳಿಗೆ ಪೊಲೀಸ್ ಇಲಾಖೆ ನೋಟಿಸ್ ನೀಡಿರುವುದನ್ನು ಖಂಡಿಸಿ, ಬೀದಿ ಬದಿ ವ್ಯಾಪಾರಿಗಳು ಪ್ರತಿಭಟನೆ ನಡೆಸಿ ಪಿಎಸ್ಐ ಶ್ರೀಪತಿ ಗಿನ್ನಿ ಯವರಿಗೆ ಮನವಿಯನ್ನು ಅರ್ಪಿಸಿದರು.



ಪ್ರತಿಭಟನಾ ಮೆರವಣಿಗೆ ಗಾಂಧಿ ವೃತ್ತದಿಂದ ಪ್ರಾರಂಭಗೊಂಡು ಹಳೆ ಪಿ.ಬಿ. ರಸ್ತೆ ಪೇಟೆ, ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ ಮುಖ್ಯ ರಸ್ತೆಯ ಮುಖಾಂತರ ಪೊಲೀಸ್ ಠಾಣೆಗೆ ಅಂತ್ಯಗೊಂಡಿತು.

ಈ ವೇಳೆ ಬೀದಿ ಬದಿಯ ವ್ಯಾಪಾರಿ ಸಂಘದ ಮುಖಂಡರು ಮಾತನಾಡಿ, ಹಳೆ ಪಿ.ಬಿ ರಸ್ತೆ, ಶಿವಮೊಗ್ಗ ರಸ್ತೆ, ಶೋಭಾ ಟಾಕೀಸ್ ರಸ್ತೆ, ಮತ್ತು ದೇವಸ್ಥಾನ ರಸ್ತೆಗಳಲ್ಲಿ ಬೀದಿ ಬದಿಯ ಅಂಗಡಿಗಳು ಹೆಚ್ಚು ಇದ್ದು ಇಲ್ಲಿನ ಅನೇಕ ಅಂಗಡಿಯವರಿಗೆ ಪೊಲೀಸ್ ಇಲಾಖೆ ನೋಟಿಸ್ ಕೊಟ್ಟಿದೆ. ಆದರೆ 2014 ರ ಬೀದಿಬದಿಯ ವ್ಯಾಪಾರಸ್ಥರ ಸಂರಕ್ಷಣಾ ಹಾಗೂ ನಿಯಂತ್ರಣ ಅಧಿ ನಿಯಮದ ಪ್ರಕಾರ ಇಂತಹ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

ಪೊಲೀಸ್ ರ ಅಹವಾಲುಗಳೇನೆ ಇದ್ದರೂ ನೇರವಾಗಿ ನಗರ ಪಾಲಿಕೆಗೆ ತಿಳಿಸತಕ್ಕದ್ದು ಹಾಗೂ ನಗರ ಪಾಲಿಕೆಯ ಟಿ.ವಿ.ಸಿ. ಸಮಿತಿಯಲ್ಲಿ ವೆಂಡಿಂಗ್ ಜೋನ್‌ಗಳ ಬಯ ಬೀದಿ ವ್ಯಾಪಾರಸ್ಥರ ಅನುಕೂಲ ತಕ್ಕಂತೆ ಚರ್ಚಿಸಿ ಪಾಲಿಕೆಯು ನಿರ್ಧಾರ ಕೈಗೊಳ್ಳುತ್ತದೆ. ಇದರಲ್ಲಿ ಒಪ್ಪಿಗೆ ಇರದೇ ಹೋದರೆ ಬೀದಿಬದಿ ವ್ಯಾಪಾರಸ್ಥರು ನಗರ ಪಾಲಿಕೆಯೊಂದಿಗೆ ಟಿ.ವಿ.ಸಿ. ಮೂಲಕ ಚರ್ಚೆ ನಡೆಯುತ್ತದೆ ನಿಯಮ ಹೀಗಿರುವಾಗ ಪೊಲೀಸ್ ಇಲಾಖೆಯ ಹಸ್ತಕ್ಷೇಪವನ್ನು ಮಾಡಿದೆ. ದಶಕಗಳಿಂದ ವ್ಯಾಪಾರ ಮಾಡಿಕೊಂಡು ಬರುತ್ತಿರುವ ಬಡ ಬೀದಿಬದಿ ವ್ಯಾಪರಿಗಳಿಗೆ ಭಯ ಪಡಿಸುವ ಕಾರ್ಯ ಮಾಡದೆ ತಾವು ನೀಡಿರುವ ನೋಟಿಸ್ ಹಿಂಪಡೆದು ವ್ಯಾಪಾರಿಗಳಿಗೆ ಮುಂದುವರೆಸಿಕೊಂಡು ಹೋಗಲು ಸಹಕರಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬೀದಿಬದಿ ಸ್ಥಿರ ಮತ್ತು ಸಂಚಾರಿ ಚಿಲ್ಲರೆ ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಇಸ್ಮಾಯಿಲ್ ಸಾಬ್, ಕಾರ್ಯದರ್ಶಿ ಕೆ. ಭಾರತಿ, ತಾಲ್ಲೂಕು ಸಂಚಾಲಕಿ ಮಂಜುಳಮ್ಮ, ಆನಂದ್, ಕೃಷ್ಣಪ್ಪ, ಯಲ್ಲಮ್ಮ, ಚೆನ್ನಪ್ಪ ಕುರವತ್ತಿ, ಗಾಯಿತ್ರಿ, ನೀಲಪ್ಪ, ರೇಣುಕಾ, ದುಗ್ಗಮ್ಮ, ಜಯ್ಯಪ್ಪ ಇತರರು ಹಾಜರಿದ್ದರು.

## ಶೈಕ್ಷಣಿಕ ಸಾಲ ನೀಡಲು ಅಲೆದಾಡಿಸದಿರಿ

**(1ನೇ ಪುಟದಿಂದ)** 838 ಹಾಗೂ 2024ರಲ್ಲಿ 840 ಕೋಟಿ ರೂ. ಸಾಲ ವಿತರಿಸಲಾಗಿದೆ. ವಸೂಲಾತಿ ಕಡಿಮೆಯಾಗಿದ್ದು, ನಬಾರ್ಡ್ ಹಾಗೂ ಅಪೆಕ್ಸ್ ಬ್ಯಾಂಕ್‌ನಿಂದ ಹಣ ಕಡಿಮೆ ನೀಡಲಾಗಿದೆ ಎಂದು ಬ್ಯಾಂಕ್ ಅಧಿಕಾರಿ ಉತ್ತರಿಸಿದರು. ಡಿಸಿಸಿ ಬ್ಯಾಂಕ್ ಬಾಕಿ ಇರುವ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ಸಂಸದರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಬಿ. ಇಟ್ನಾಳ್, ಆರ್‌ಬಿಐ ಬೆಂಗಳೂರು ವಿಭಾಗದ ವೆಂಕಟರಾಮಯ್ಯ ಟಿ.ಎನ್., ನಬಾರ್ಡ್ ಅಧಿಕಾರಿ ರಶ್ಮಿರೇಖಾ, ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಶೈಲಾ ಕೆ.ಮುರಾರಿ, ಕಮಲೇಶ್ ಇದ್ದರು.

### ಗೃಹ ಲಕ್ಷ್ಮಿ ಹಣವೂ ಸಾಲಕ್ಕೆ... ಜಿ.ಪಂ. ಸಿಇಒ ಅಸಮಾಧಾನ


ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಹಣವನ್ನು ಸಾಲಕ್ಕೆ ಜಮಾ ಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಶಾಸಕರ ಜನಸ್ಪಂದನ ಕಾರ್ಯಕ್ರಮದಲ್ಲಿ ಫಲಾನುಭವಿಯೊಬ್ಬರು ದೂರು ನೀಡಿದ್ದರು.

ಬೆಳೆ ಪರಿಹಾರ, ಪಿಂಚಣಿ ಅಥವಾ ಸರ್ಕಾರ ನೀಡುವ ಯೋಜನೆಗಳ ಹಣವನ್ನುಸಾಲಕ್ಕೆಹೊಂದಾಣಿಕೆಮಾಡಿಕೊಳ್ಳದಂತೆ ಅನೇಕ ಬಾರಿ ಹೇಳಿದ್ದರೂ ಇಂತಹ ಪ್ರಕರಣಗಳು ಮರುಕಳಿಸುತ್ತಿವೆ. ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಜಿ.ಪಂ. ಸಿಇಒ ಸುರೇಶ್ ಇಟ್ನಾಳ್ ಹೇಳಿದರು.

## ಹರಪನಹಳ್ಳಿಯಲ್ಲಿ ನಾಳೆ ಕಸಾಪ ಸಭೆ

ಹರಪನಹಳ್ಳಿ, ಜು. 18- ಪಟ್ಟಣದ ಸರ್ಕಾರಿ ನೌಕರರ ಸಭಾ ಭವನದಲ್ಲಿ ನಾಡಿದ್ದು 20ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಾಮಾನ್ಯ ಸಭೆ ಕರೆಯಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ತಿಳಿಸಿದ್ದಾರೆ.


**ನಾಲ್ಕನೇ ವರ್ಷದ ಪುಣ್ಯಸ್ಮರಣೆ**



**ದಿ. ಎ.ಎಂ. ಅಜ್ಜಪ್ಪ**

ನಿಧನ: 19.07.2020

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳಾದ : ಅಂಕಿತ್ ಕುಮಾರ್.ಎ ಸಂಕೇತ್.ಎ ಹಾಗೂ ಕುಟುಂಬಸ್ಥರು.


**ಪ್ರೇಮ್ ಕುಮಾರ್ ಎಂ. ನಿಧನ**



ದಾವಣಗೆರೆ ಕೆ.ಟಿ.ಜೆ. ನಗರ 12ನೇ ಕ್ರಾಸ್, 2ನೇ ಮೇನ್ ವಾಸಿ ಪ್ರೇಮ್ ಕುಮಾರ್ ಎಂ. (46) ರವರು ದಿನಾಂಕ : 18.7.24ರ ಗುರುವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಆರ್.ಹೆಚ್. ಬೃಂದಾವನದಲ್ಲಿ ದಿನಾಂಕ : 19.7.2024ರ ಶುಕ್ರವಾರ ಮಧ್ಯಾಹ್ನ 3ಕ್ಕೆ ನೆರವೇರಲಿದೆ.

**ನೇತ್ರದಾನ ಮಹಾದಾನ**

## ಮೀಸಲಾತಿ ವಿಧೇಯಕಕ್ಕೆ ತಡೆ : ಸಿಎಂ

**(1ನೇ ಪುಟದಿಂದ)** ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ವಿಟ್ಟರ್‌ನಲ್ಲಿ ಬಾರಿ ತಮ್ಮ ಹೇಳಿಕೆ ಬದಲಿಸಿದ್ದಾರೆ. ಮೊದಲು ಶೇಕಡ ನೂರರಷ್ಟು ಮೀಸಲಾತಿ ನೀಡುವುದಾಗಿ ತಿಳಿಸಲಾಗಿತ್ತು. ನಂತರ ಆಡಳಿತಾತ್ಮಕ ಹುದ್ದೆಗಳಲ್ಲಿ ಶೇಕಡ 50 ಹಾಗೂ ಆಡಳಿತಾತ್ಮಕವಲ್ಲದ ಹುದ್ದೆಗಳಲ್ಲಿ ಶೇಕಡಾ 70ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ತಿಳಿಸಲಾಯಿತು. ಅಂತಿಮವಾಗಿ ವಿಧೇಯಕವನ್ನು ತಡೆಯಲಾಗಿದೆ. ಇದು ತುಘಲಕ್ ಸರ್ಕಾರ ಎಂದು ಲೇವಡಿ ಮಾಡಿದರು.

ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲ್ಲಿ ತುಘಲಕ್ ಸರ್ಕಾರ ಇಲ್ಲ, ಸಿದ್ದರಾಮಯ್ಯ ಸರ್ಕಾರ ಇದೆ. ಮುಂದಿನ ಸಂಪುಟ ಸಭೆಯಲ್ಲಿ ವಿಧೇಯಕ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

## ಲೂಟಿ ಉದ್ದೇಶಕ್ಕಾಗಿಯೇ ಹುದ್ದೆ ಸೃಷ್ಟಿ !

**(1ನೇ ಪುಟದಿಂದ)** ರವರೆಗೆ ಹಂತ ಹಂತವಾಗಿ ಹೈದರಾಬಾದ್‌ನ ಆರ್‌ಬಿಎಲ್ ಬ್ಯಾಂಕ್‌ಗೆ ಹಣ ವರ್ಗಾವಣೆ ಮಾಡಲಾಯಿತು.

ಎರಡು ತಿಂಗಳ ಅವಧಿಯಲ್ಲಿ 94 ಕೋಟಿ ರೂ. ವರ್ಗಾವಣೆ ಕೃತ್ಯದಲ್ಲಿ ಯೂನಿಯನ್ ಬ್ಯಾಂಕ್‌ನ ಕೆಲವು ಅಧಿಕಾರಿಗಳು ಶಾಮೀಲಾಗಿರುವ ವಿಚಾರ ಎಸ್‌ಐಟಿ ತನಿಖೆಯಲ್ಲಿ ಪತ್ತೆಯಾಗಿದೆ.

ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಸಂಚಿಗೆ ಸಹಕಾರ ನೀಡಿದ್ದ ಯ್ಯೂನಿಯನ್ ಬ್ಯಾಂಕ್‌ನ ಆರು ಅಧಿಕಾರಿಗಳು ನಾಪತ್ತೆ ಯಾಗಿದ್ದು, ಈ ಆರೋಪಿಗಳ ಪತ್ತೆಗಾಗಿ ಎಸ್‌ಐಟಿ ತೀವ್ರ ಶೋಧ ನಡೆಸುತ್ತಿದೆ.

# ಉದ್ಯಮ ಸ್ನೇಹಿಯಾಗಬೇಕಿದೆ

**(1ನೇ ಪುಟದಿಂದ)** ಅಧ್ಯಕ್ಷ ಎಸ್. ನಂಜುಂಡ ಪ್ರಸಾದ್ ಮಾತನಾಡಿ, ಮುಂದಿನ ತಿಂಗಳು ಆಗಸ್ಟ್ 4-5ರಂದು ಮೈಸೂರಿನಲ್ಲಿ ರಾಜ್ಯ ತೆರಿಗೆ ಸಲಹೆಗಾರರ ಸಮಾವೇಶ ಆಯೋಜಿಸಲಾಗಿದೆ ಎಂದರು.

ದಾವಣಗೆರೆ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತ ಹೆಚ್. ವೀರೇಂದ್ರ ಪಾಟೀಲ್, ದಾವಣಗೆರೆ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷ ಉಮೇಶ್ ಶೆಟ್ಟಿ, ತೆರಿಗೆ ಸಲಹೆಗಾರರ ಸಂಘದ ದಾವಣಗೆರೆ ವಿಭಾಗದ ವಲಯ ಉಪಾಧ್ಯಕ್ಷ ಜಂಬಿಗಿ ರಾಧೇಶ್, ಲೆಕ್ಕ ಪರಿಶೋಧಕರಾದ ಅನ್ನಪೂರ್ಣ ಕಬ್ರ, ಟಿ.ಆರ್. ರಾಜೇಶ್ ಕುಮಾರ್ ಹಾಗೂ ಜತಿನ್ ಅನಿಲ್ ಕ್ರಿಸ್ಟೋಫರ್, ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಗೌರವಾಧ್ಯಕ್ಷ ಡಿ.ಆರ್. ಶಂಕರ್, ಕಾರ್ಯದರ್ಶಿ ಜಿ. ಮಹಾಂತೇಶ್, ಜಂಟಿ ಕಾರ್ಯದರ್ಶಿ ಎನ್.ವಿ. ಶಿವಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಹೆಚ್.ಟಿ. ಸುಧೀಂದ್ರ ರಾವ್ ಅಧ್ಯಕ್ಷತೆ ವಹಿಸಿದ್ದರು.

### ಸಹಸ್ರ ಅಧಿಸೂಚನೆಗಳ ವಿಶ್ವ ದಾಖಲೆ!

ಜಿ.ಎಸ್.ಟಿ. ಸಂಬಂಧ ಈಗಾಗಲೇ ಸಾವಿರದಷ್ಟು ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಇಷ್ಟು ಅಲ್ಪ ಅವಧಿಯಲ್ಲಿ ಇಷ್ಟೊಂದು ಬದಲಾವಣೆಯ ಆದೇಶಗಳು ಹೊರ ಬಂದಿರುವುದು ವಿಶ್ವದಾಖಲೆಯೇ ಸರಿ ಎಂದು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಪ್ರಾಕ್ಟಿಷನರ್ಸ್ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷ ಶ್ರೀಧರ ಪಾರ್ಥಸಾರಥಿ ಹೇಳಿದರು.

ಇಷ್ಟೊಂದು ಬದಲಾವಣೆಗಳ ಬಗ್ಗೆ ಬೇಸರ ಪಟ್ಟುಕೊಳ್ಳುವುದಕ್ಕಿಂತ, ಇದಕ್ಕೆಲ್ಲ ನಾವು ವೇಗವಾಗಿ ಹೊಂದಿಕೊಂಡಿದ್ದೇವೆ ಎಂದು ಸಂತೋಷ ಪಡಬೇಕಿದೆ ಎಂದೂ ಪಾರ್ಥಸಾರಥಿ ತಿಳಿಸಿದರು.

# ಜನತೆಗೆ ಆರ್ಥಿಕ ಸ್ವಾತಂತ್ರ್ಯ ನೀಡಿದ ಬ್ಯಾಂಕ್ ರಾಷ್ಟ್ರೀಕರಣ ದಿನಕ್ಕೆ 56 ರ ಸಂಭ್ರಮ

**ಬ್ಯಾಂಕ್ ಉದ್ಯೋಗಿಗಳು ಮಾತ್ರವಲ್ಲ, ಇಡೀ ದೇಶದ ಜನತೆ ಸಂಭ್ರಮಿಸುವ ದಿನ**




**ಬ್ಯಾಂಕ್ ರಾಷ್ಟ್ರೀಕರಣಕ್ಕೆ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಎರಡು ದಶಕಗಳ ಹೋರಾಟದ ಹಿನ್ನೆಲೆ.**

**ಸರ್ಕಾರದ ಖಾಸಗೀಕರಣ ಧೋರಣೆಗಳ ವಿರುದ್ಧ ಜನರೇ ಧ್ವನಿಯೆತ್ತಬೇಕಾಗಿದೆ**

**ಸಮಾಜಮುಖಿಯಾದ ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆ ನಮ್ಮ ದೇಶಕ್ಕೆ ಅತ್ಯಗತ್ಯ**



- ಕೆ ರಾಘುವೇಂದ್ರ ನಾಯರಿ,
ಬ್ಯಾಂಕ್ ಕಾರ್ಮಿಕ ಮುಖಂಡರು,
ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ(ರಿ.),
ಮೊ: 9844314543

ದೇಶದ ಆರ್ಥಿಕತೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ, ಜನತೆಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದ ಕೀರ್ತಿ 1969 ಜುಲೈ 19 ರಂದು ಕೇಂದ್ರ ಸರ್ಕಾರದಿಂದ ಘೋಷಣೆಯಾದ 'ಬ್ಯಾಂಕ್ ರಾಷ್ಟ್ರೀಕರಣ' ಕ್ಕೆ ಸಲ್ಲುತ್ತದೆ. ಅಂದು ಪ್ರಧಾನಿಗಳಾಗಿದ್ದ ದಿವಂಗತ ಇಂದಿರಾ ಗಾಂಧಿಯವರು ತೆಗೆದುಕೊಂಡ ಐತಿಹಾಸಿಕ ನಿರ್ಧಾರದ ಫಲವಾಗಿ ಬ್ಯಾಂಕಿಂಗ್ ಸೌಲಭ್ಯ ಮತ್ತು ಸೇವೆ ದೇಶದ ಮೂಲೆ ಮೂಲೆಗೆ ತಲುಪುವಂತಾ ಯಿತು. ಬ್ಯಾಂಕ್ ರಾಷ್ಟ್ರೀಕರಣವು ದೇಶದ ಲಕ್ಷಾಂತರ ವಿದ್ಯಾ ವಂತರಿಗೆ ಬ್ಯಾಂಕುಗಳಲ್ಲಿ ದೊಡ್ಡ ಪ್ರಮಾಣದ ಉದ್ಯೋಗಾವ ಕಾಶವನ್ನು ನೀಡಿತು. ಕೋಟ್ಯಾಂತರ ದೇಶವಾಸಿಗಳಿಗೆ ಸ್ವಉದ್ಯೋಗ ಕಲ್ಪಿಸಿಕೊಳ್ಳಲು ರಹದಾರಿಯನ್ನು ಕಲ್ಪಿಸಿತು. ವಿದ್ಯಾರ್ಥಿಗಳಿಗೆ ತಮ್ಮ ಉನ್ನತ ಶಿಕ್ಷಣದ ಕನಸನ್ನು ಸಾಕಾರಗೊ ಳಿಸಿಕೊಳ್ಳಲು ಸಾಲ ಸೌಲಭ್ಯ ಸಿಗುವಂತಾಯಿತು. ವ್ಯವಹಾರ ಸ್ಥರಿಗೆ ತಮ್ಮ ವಹಿವಾಟುಗಳನ್ನು ಗಣನೀಯವಾಗಿ ವೃದ್ಧಿಸಿ ಕೊಳ್ಳಲು ಸಹಕಾರಿಯಾಯಿತು. ಯುವಕರಿಗೆ, ಮಹಿಳೆಯರಿಗೆ, ರೈತರಿಗೆ ಹೊಸ ಆಶಾಕಿರಣದ ಉದಯವಾಯಿತು. ಇದೆಲ್ಲಕ್ಕಿಂತ ಹೆಚ್ಚಾಗಿ ಜನಸಾಮಾನ್ಯರು ತಮ್ಮ ದುಡಿಮೆಯ ಉಳಿಕೆಯ ಪಾಲನ್ನು ಸರ್ಕಾರಿ ಒಡೆತನದ ಬ್ಯಾಂಕುಗಳಲ್ಲಿ ಇಟ್ಟರೆ ಹೆಚ್ಚು ಸುರಕ್ಷಿತ ಎನ್ನುವ ಆತ್ಮವಿಶ್ವಾಸ ಬರಲು ಸಾಧ್ಯವಾಯಿತು. 1969 ರ ಜುಲೈ 19 ರಂದು ದೇಶದ 14 ಪ್ರಮುಖ ಖಾಸಗಿ ಬ್ಯಾಂಕುಗಳನ್ನು ಹಾಗೂ ತರುವಾಯ 1980 ರ ಏಪ್ರಿಲ್ 15 ರಂದು ಮತ್ತೆ 6 ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ ಸರ್ಕಾರದ ಒಡೆತನಕ್ಕೆ ಸೇರ್ಪಡೆಗೊಳಿಸಲಾಯಿತು.

**ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ನಿರ್ಧಾರ ಐತಿಹಾಸಿಕವಾದುದು :**

1969 ರಲ್ಲಿ ಕೇಂದ್ರ ಸರ್ಕಾರದ ನೇತೃತ್ವವನ್ನು ವಹಿಸಿದ್ದ ಅಂದಿನ ಪ್ರಧಾನಿಗಳಾಗಿದ್ದಂತಹ ದಿವಂಗತ ಇಂದಿರಾ ಗಾಂಧಿ ಯವರ ಬ್ಯಾಂಕ್ ರಾಷ್ಟ್ರೀಕರಣದ ಧೀರೋದಾತ್ತ ನಿರ್ಧಾರ ವನ್ನು ಯಾರಾದರೂ ಮೆಚ್ಚಲೇಬೇಕಾದದ್ದು. ಏಕೆಂದರೆ ಆ ಸಂದರ್ಭದಲ್ಲಿ ಖಾಸಗಿ ಬ್ಯಾಂಕುಗಳು ಬೃಹತ್ ಮತ್ತು ಪ್ರಭಾವಿ ಬಂಡವಾಳಶಾಹಿಗಳ ಬಿಗಿಮುಷ್ಠಿಯಲ್ಲಿದ್ದವು. ಟಾಟಾ ಕುಟುಂಬವು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾವನ್ನು, ಬಿರ್ಲಾ ಕುಟುಂಬವು ಯುಕೋ ಬ್ಯಾಂಕನ್ನು, ದಾಲ್‌ಚಂದ್ ಹೀರಾಚಂದ್ ಕುಟುಂಬವು ಬ್ಯಾಂಕ್ ಆಫ್ ಬರೋಡಾವನ್ನು, ಚೆಟ್ಟಿಯಾರ್ ಕುಟುಂಬವು ಇಂಡಿಯನ್ ಬ್ಯಾಂಕನ್ನು, ಮಣಿಪಾಲದ ಪೈ ಕುಟುಂಬವು ಸಿಂಡಿಕೇಟ್ ಬ್ಯಾಂಕನ್ನು, ದಕ್ಷಿಣ ಕನ್ನಡ ಜಿಲ್ಲೆಯ ಬಂಟ ಸಮುದಾಯವು ವಿಜಯಾ ಬ್ಯಾಂಕನ್ನು ಸ್ಥಾಪಿಸಿ ತಮ್ಮ ಕುಟುಂಬದ ಹಿಡಿತದಲ್ಲಿ ಇಟ್ಟುಕೊಂಡಿದ್ದವು. ಅವರೆಲ್ಲರ ತೀವ್ರ ವಿರೋಧವನ್ನು ಲೆಕ್ಕಿಸದೇ ದಿವಂಗತ ಇಂದಿರಾ ಗಾಂಧಿಯವರು ತೆಗೆದುಕೊಂಡ ಬ್ಯಾಂಕ್ ರಾಷ್ಟ್ರೀಕರಣದ ನಿರ್ಧಾರ ನಿಜಕ್ಕೂ ಐತಿಹಾಸಿಕವಾದುದು. ಇಡೀ ದೇಶ ಈ ನಿರ್ಧಾರವನ್ನು ಬೆಂಬಲಿಸಿತು ಮತ್ತು ಕೊಂಡಾಡಿತು. ಜಾಗತಿಕ ಮಟ್ಟದಲ್ಲೂ ಇದಕ್ಕೆ ಮೆಚ್ಚುಗೆ ವ್ಯಕ್ತವಾಯಿತು. ದೇಶದ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಒಂದಾಗಿ ಇತಿಹಾಸದ ಪುಟಗಳಲ್ಲಿ ದಾಖಲಾಯಿತು.

ಬ್ಯಾಂಕ್ ರಾಷ್ಟ್ರೀಕರಣವು ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಸ್ವರೂಪವನ್ನೇ ಅಮೂಲಾಗ್ರವಾಗಿ ಬದಲಾಯಿಸಿತು. ಗ್ರಾಮೀಣ ಭಾಗದಲ್ಲಿ ಸಾವಿರಾರು ಬ್ಯಾಂಕ್ ಶಾಖೆಗಳು ತೆರೆಯಲ್ಪಟ್ಟವು. ದೇಶದ ಜನತೆಯ ಉಳಿತಾಯದ ಹಣಕ್ಕೆ ಭದ್ರತೆ ಮತ್ತು ಸುರಕ್ಷೆ ಸಿಕ್ಕಿತು. ಖಾಸಗೀ ಬ್ಯಾಂಕುಗಳಿಂದ ಸಾಲ ನೀಡುವಲ್ಲಿ ಯಾವ ಕ್ಷೇತ್ರಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತೋ ಅವು ಸಾಲ ವಿತರಣೆಯ ಆದ್ಯತಾ ವಲಯದ ಕ್ಷೇತ್ರಗಳಾಗಿ ಪರಿಗಣಿಸ ಲ್ಪಟ್ಟವು. ಕೃಷಿ, ಉದ್ಯೋಗ ಸೃಷ್ಠಿ, ಬಡತನ ನಿರ್ಮೂಲನೆ, ಗ್ರಾಮೀಣ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ಸಣ್ಣ ಹಾಗೂ ಮಧ್ಯಮ ವರ್ಗದ ಕೈಗಾರಿಕೆಗಳು ಮುಂತಾದ ವಲಯಗಳಿಗೆ ಬ್ಯಾಂಕುಗಳು ಹೆಚ್ಚು ಹೆಚ್ಚು ಸಾಲ ನೀಡಲು ಆರಂಭಿಸಿದವು.

ದೇಶದ ಆರ್ಥಿಕ ಬೆಳವಣಿಗೆಗೆ ಸಾರ್ವಜನಿಕ ಕ್ಷೇತ್ರದ ಬ್ಯಾಂಕು ಗಳು ಬಹುದೊಡ್ಡ ಪ್ರಮಾಣದಲ್ಲಿ ಕೊಡುಗೆಯನ್ನು ನೀಡಲು ಆರಂಭಿಸಿದವು. 1975 ರಲ್ಲಿ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಿತು. 1982 ರಲ್ಲಿ ನಬಾರ್ಡ್ ಹಾಗೂ ಎಕ್ಸಿಮ್ ಬ್ಯಾಂಕುಗಳ ಸ್ಥಾಪನೆಯಾಯಿತು. ಲೀಡ್‌ಬ್ಯಾಂಕ್ ವ್ಯವಸ್ಥೆ ಸಾಕಾರಗೊಂಡಿತು. ದತ್ತು ಗ್ರಾಮ ಯೋಜನೆ ಅಸ್ತಿತ್ವಕ್ಕೆ ಬಂದಿತು. ಹೀಗೆ ಹತ್ತು ಹಲವಾರು ಯೋಜನೆಗಳ ಮೂಲಕ ಹಣಕಾಸು ಸೇವಾ ಕ್ಷೇತ್ರಕ್ಕೆ ಕಾಯಕಲ್ಪ ನೀಡಲು ಬ್ಯಾಂಕ್ ರಾಷ್ಟ್ರೀಕರಣವೇ ಮುನ್ನುಡಿಯಾಗಿತ್ತು ಎನ್ನುವುದು ಅತ್ಯಂತ ಗಮನಾರ್ಹ.

**ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ - ಬ್ಯಾಂಕ್ ರಾಷ್ಟ್ರೀಕರಣದ ಚಾಂಪಿಯನ್ :**

ರಾಷ್ಟ್ರೀಕರಣದ ರೂವಾರಿಗಳು ಎಂದು ನಾವು ಹೇಗೆ ದಿವಂಗತ ಇಂದಿರಾ ಗಾಂಧಿಯವರನ್ನು ಸ್ಮರಿಸುತ್ತೇವೆಯೋ ಅದೇ ರೀತಿಯಲ್ಲಿ ಬ್ಯಾಂಕ್ ರಾಷ್ಟ್ರೀಕರಣಕ್ಕಾಗಿ ಸುದೀರ್ಘ ವಾದ ಎರಡು ದಶಕಗಳ ಹೋರಾಟ ಮಾಡಿದ ಕೀರ್ತಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (AIBEA) ಕ್ಕೆ ಸಲ್ಲುತ್ತದೆ. 1947 ರಲ್ಲಿ ಉದಯವಾದ ಈ ಸಂಘಟನೆಯು ಬ್ಯಾಂಕ್ ರಾಷ್ಟ್ರೀಕರಣದ ವಿಷಯವನ್ನು ಕೈಗೆತ್ತಿಕೊಂಡು, ಆ ಕುರಿತಾಗಿ ಬೇಡಿಕೆಯಿಟ್ಟು, ಅದನ್ನು ಸಾಕಾರಗೊಳಿಸಲು ಆಂದೋಲನ ವನ್ನು ಆರಂಭಿಸಿ, ಹೋರಾಟ ಮಾಡಿದ ಏಕೈಕ ಬ್ಯಾಂಕ್ ಕಾರ್ಮಿಕ ಸಂಘಟನೆ. ಆದ ಕಾರಣ 'ಬ್ಯಾಂಕ್ ರಾಷ್ಟ್ರೀಕರಣದ ಚಾಂಪಿಯನ್' ಎಂಬ ಹೆಗ್ಗಳಿಕೆಗೆ 'ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ' (AIBEA) ಪಾತ್ರವಾಯಿತು.

ಸಂಘದ ಸದಸ್ಯರು, ಹಿತೈಷಿಗಳು, ಎಡಪಂಥೀಯ ಹೋರಾಟಗಾರರು, ಆರ್ಥಿಕ ತಜ್ಞರು, ಪತ್ರಕರ್ತರು, ಪುರೋಗಾಮಿ ಗುಂಪುಗಳು, ಜನಪರ ಸಂಘಟನೆಗಳು, ಎಐಟಿಯುಸಿ ನೇತೃತ್ವದ ಕಾರ್ಮಿಕ ವರ್ಗ ಹೀಗೆ ಹತ್ತು ಹಲವು ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಚಳುವಳಿಯನ್ನು ನಡೆಸಿತ್ತು. ಎಐಬಿಇಎ ಸದಸ್ಯರು ಸಂಸತ್ತಿನ ಹೊರಗೆ ಪ್ರತಿಭಟನೆ, ಚಳುವಳಿಗಳನ್ನು ನಡೆಸುತ್ತಿದ್ದರೆ, ಅತ್ತ ಸಂಘದ ಪ್ರಧಾನ ಕಾರ್ಯದರ್ಶಿಗಳು ಹಾಗೂ 1957 ರಿಂದ 1967 ರವರೆಗೆ ಸಂಸತ್ ಸದಸ್ಯರಾಗಿದ್ದ ದಿವಂಗತ ಕಾಮ್ರೇಡ್ ಪ್ರಭಾತ್ ಕಾರ್‌ರವರು ಸಂಸತ್ತಿನ ಒಳಗೆ ಬ್ಯಾಂಕ್ ರಾಷ್ಟ್ರೀಕರಣದ ಅಗತ್ಯವನ್ನು ಸರ್ಕಾರಕ್ಕೆ ಮನದಟ್ಟು ಮಾಡುತ್ತಿದ್ದರು. ಇದರ ನಡುವೆ 1947 ಮತ್ತು 1969 ರ ಮಧ್ಯಕಾಲದಲ್ಲಿ ಸಾಲು-ಸಾಲಾಗಿ 477 ಖಾಸಗೀ ಬ್ಯಾಂಕುಗಳು ಮುಚ್ಚಲ್ಪಟ್ಟವು. ಇದು ಆತಂಕಕ್ಕೆ ಮತ್ತು ಅನುಮಾನಕ್ಕೆ ಕಾರಣವಾಯಿತು.


ಖಾಸಗಿ ವ್ಯಕ್ತಿಗಳು ಸ್ಥಾಪಿಸುವ ಬ್ಯಾಂಕುಗಳು ಅವರ ಖಾಸಗಿ ವ್ಯವಹಾರಗಳಿಗೆ ಮಾತ್ರ ಬಳಕೆಯಾಗುದ್ದವೇ ವಿನಹ ದೇಶದ ಏಳಿಗೆಗಾಗಿ ಅಲ್ಲ ಎನ್ನುವುದನ್ನು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಕೇಂದ್ರ ಸರ್ಕಾರಕ್ಕೆ ಅರ್ಥ ಮಾಡಿಸಿತು. ಇದೆಲ್ಲದರ ಫಲವಾಗಿ 1969 ರಲ್ಲಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಬ್ಯಾಂಕ್ ರಾಷ್ಟ್ರೀಕರಣ ಹೋರಾಟದಲ್ಲಿ ಆಗ ಮುಂಚೂಣಿಯಲ್ಲಿದ್ದ ನಮ್ಮ ರಾಜ್ಯದ ಕಾಮ್ರೇಡ್ ಪಿ.ಎಸ್.ಸುಂದರೇಶನ್ ಹಾಗೂ ಕಾಮ್ರೇಡ್ ಹೆಚ್.ವಸಂತ ರೈ ಈಗಲೂ ಬ್ಯಾಂಕಿಂಗ್ ಚಳುವಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

**ಬ್ಯಾಂಕುಗಳು ಅಂದು-ಇಂದು:**

1969 ರಲ್ಲಿ ಒಂದು ಲಕ್ಷದಷ್ಟಿದ್ದ ಬ್ಯಾಂಕ್ ಉದ್ಯೋಗಿಗಳ ಸಂಖ್ಯೆ ಇಂದು ಒಂದು ಮಿಲಿಯನ್ ಗಡಿ ಮುಟ್ಟಿದೆ. 8200 ರಷ್ಟು ಇದ್ದ ಬ್ಯಾಂಕ್ ಶಾಖೆಗಳ ಸಂಖ್ಯೆ ಇಂದು 1,50,000 ರ ಗಡಿ ದಾಟಿದೆ. ರೂ.5000 ರಷ್ಟು ಇದ್ದ ಠೇವಣಿಯ ಪ್ರಮಾಣ ಇಂದು ರೂ.175 ಲಕ್ಷ ಕೋಟಿಯಾಗಿದೆ. ರೂ.3500 ಕೋಟಿಯಷ್ಟು ಇದ್ದ ಸಾಲ ನೀಡುವಿಕೆಯ ಪ್ರಮಾಣ ಇಂದು ರೂ.110 ಲಕ್ಷ ಕೋಟಿಯಷ್ಟಾಗಿದೆ. 1969 ರ ಪೂರ್ವದಲ್ಲಿ ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ಇರದೇ ಇದ್ದಂತಹ ಬ್ಯಾಂಕ್ ಶಾಖೆಗಳು ಇಂದು ಆ ಭಾಗದಲ್ಲಿ 50 ಸಾವಿರಕ್ಕೂ ಹೆಚ್ಚು ಶಾಖೆಗಳು ಇವೆ. ಆದ್ಯತಾ ವಲಯಕ್ಕೆ ಸಾಲವನ್ನೇ ನೀಡಿರದಿದ್ದ ಬ್ಯಾಂಕುಗಳು ಇಂದು ಒಟ್ಟು ಸಾಲ ನೀಡುವಿಕೆಯಲ್ಲಿ ಶೇ.40 ರಷ್ಟು ಸಾಲವನ್ನು ಆ ವಲಯಕ್ಕೆ ಮೀಸಲಾಗಿರಿಸುತ್ತಿವೆ.

ಈ ಅಂಕಿ - ಅಂಶಗಳ ಮೂಲಕ ನಾವು ಬ್ಯಾಂಕ್ ರಾಷ್ಟ್ರೀಕರಣದ ಮಹತ್ವವನ್ನು ಅರಿಯಬಹುದಾಗಿದೆ. ಬ್ಯಾಂಕುಗಳ ಮುಖವನ್ನೇ ನೋಡದ ಗ್ರಾಮೀಣ ಪ್ರದೇಶದ ಜನರು, ರೈತರು, ಕುಶಲಕರ್ಮಿಗಳು, (4ನೇ ಪುಟಕ್ಕೆ)

## ರಾಣೇಬೆನ್ನೂರಿನಲ್ಲಿ ಇಂದಿನಿಂದ ಉಜ್ಜಯಿನಿ ಶ್ರೀಗಳ ಇಷ್ಟಲಿಂಗ ಪೂಜೆ



ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶೀ ಕೇಂದ್ರ ಸ್ವಾಮಿಗಳ ಆಷಾಢ ಮಾಸದ ಇಷ್ಟಲಿಂಗ ಪೂಜೆ ಜನಜಾಗೃತಿ ಸಮಾರಂಭ ರಾಣೇಬೆನ್ನೂರಿನ ಶ್ರೀ ಚನ್ನೇಶ್ವರ ಮಠದಲ್ಲಿ ಮೂರು ದಿನಗಳ ಕಾಲ ನಡೆಯಲಿದೆ.

ಇಂದು ಸಂಜೆ ಪೂರ್ಣಕುಂಭದೊಂದಿಗೆ ಸ್ವಾಗತ. ನಂತರ ಧರ್ಮಸಭೆ, ನಾಳೆ ಶನಿವಾರ ಬೆಳಿಗ್ಗೆ ಇಷ್ಟಲಿಂಗ ಪೂಜೆ, ಸಂಜೆ ಧರ್ಮ ಸಭೆ, ನಾಡಿದ್ದು ಭಾನುವಾರ ಬೆಳಿಗ್ಗೆ ಇಷ್ಟಲಿಂಗ ಪೂಜೆ ನಂತರ ಧರ್ಮಸಭೆ ನಡೆಯಲಿದೆ. ಮೂರು ದಿನಗಳ ಧರ್ಮಸಭೆ ನಂತರ ಅನ್ನ ಸಂತರ್ಪಣೆ ಇರುತ್ತದೆ.

ಹೊನ್ನಾಳಿ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಶ್ರೀ, ಆವರಗೊಳ್ಳ ಓಂಕಾರ ಶ್ರೀ, ಶನೇಶ್ಚರ ಮಠದ ಶಿವಯೋಗಿ ಶ್ರೀ, ನಗರದ ಗುರುಬಸವ ಸ್ವಾಮಿಗಳು, ದಿಂಡದಹಳ್ಳಿ ಪಶುಪತಿ ಸ್ವಾಮಿಗಳು, ಕೋಣಂದೂರು ಸಿದ್ದವೀರ ಸ್ವಾಮಿಗಳು, ನೆಗಳೂರ ಗುರುಶಾಂತೇಶ್ವರ ಸ್ವಾಮಿಗಳು, ಲಿಂಗದಹಳ್ಳಿ ವೀರಭದ್ರ ಸ್ವಾಮಿಗಳು, ಮಣಕೂರ ಮಲ್ಲಿಕಾರ್ಜುನ ಸ್ವಾಮಿಗಳು, ರಟ್ಟಿಹಳ್ಳಿ ಶಿವಲಿಂಗ ಸ್ವಾಮಿಗಳು ಪಾಲ್ಗೊಳ್ಳುವರು.

ಉಪ ಸಭಾಪತಿ ರುದ್ರಪ್ಪ ಲಮಾಣಿ, ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಅರುಣಕುಮಾರ್ ಪೂಜಾರಿ, ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರಿ ಹಾಗೂ ಜನಪ್ರತಿನಿಧಿಗಳು ಭಾವಹಿಸುವರು ಎಂದು ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಪಟ್ಟಣ ಶೆಟ್ಟಿ, ಶಂಭು ಷಡಾಕ್ಷರಿ ಮಠ, ಜೆ.ಎನ್. ಸುರಳಿಕೇರಿ ಮಠ ತಿಳಿಸಿದರು.

## ಪರಿಶಿಷ್ಟರ ಹಣ ಗ್ಯಾರಂಟಿಗೆ ಬಳಸಿ ದ್ರೋಹ : ಆರ್.ಅಶೋಕ್ ಟೀಕೆ

ಬೆಂಗಳೂರು, ಜು. 18 - ಪರಿಶಿಷ್ಟ ವರ್ಗ ಮತ್ತು ಪಂಗಡಕ್ಕಾಗಿ ಮೀಸಲಿಟ್ಟ ಎಸ್ಸಿಪಿ - ಟಿಎಸ್ಪಿಯ 25 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡು, ಈ ಜನಾಂಗಗಳಿಗೆ ದ್ರೋಹ ಮಾಡಲಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವಿಧಾನಸಭೆಯಲ್ಲಿಂದು ಟೀಕಿಸಿದ್ದಾರೆ.

ನಿಲುವಳಿ ಸೂಚನೆ ಮೇಲಿನ ಪೂರ್ವಭಾವಿ ಚರ್ಚೆಯಲ್ಲಿ ಮಾತನಾಡಿದ ಅವರು, 5 ಗ್ಯಾರಂಟಿಗಳನ್ನು ಅವೈಜ್ಞಾನಿಕವಾಗಿ ಜಾರಿಗೆ ತರಲಾಯಿತು. ಯೋಜನೆಗಳಿಗೆ ಬಜೆಟ್ ಅನುದಾನ ಒದಗಿಸುವ ಬಗ್ಗೆ ಚರ್ಚೆ ಮಾಡಲಿಲ್ಲ. ಕಳೆದ ಹಾಗೂ ಪ್ರಸಕ್ತ ಹಣಕಾಸು ವರ್ಷದಲ್ಲಿ ಮೀಸಲಿಟ್ಟಿದ್ದ ಎಸ್ಸಿಪಿ ಮತ್ತು ಟಿಎಸ್ಪಿಯ 25 ಸಾವಿರ ಕೋಟಿ ರೂ. ಗಳಿಗೂ ಹೆಚ್ಚು ಹಣವನ್ನು ಬೇರೆ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ ಎಂದರು.

ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ಸಮುದಾಯದ ಕಲ್ಯಾಣಕ್ಕಾಗಿ ರಸ್ತೆ, ಚರಂಡಿ, ಪ್ರದೇಶ, ಬಡಾವಣೆಗಳ ಅಭಿವೃದ್ಧಿಗೆ ವಿನಿಯೋಗಿಸಬೇಕಿತ್ತು. ನಿಯಮ ಗಾಳಿಗೆ ತೂರಿ ಹಣ ಬೇರೆ ಉದ್ದೇಶಗಳಿಗೆ ಬಳಸಲಾಗಿದೆ.

ಲಿಂಗಾಯತರ ಅಭಿವೃದ್ಧಿ ನಿಗಮ, ಒಕ್ಕಲಿಗರ ಅಭಿವೃದ್ಧಿ ನಿಗಮ, ಬ್ರಾಹ್ಮಣರ ಅಭಿವೃದ್ಧಿ ನಿಗಮದ ಹಣವನ್ನೂ ಎಂದು ಆಕ್ಷೇಪಿಸಿದರು.

ಎಸ್ಸಿ/ಎಸ್ಟಿ ಜನಾಂಗಕ್ಕೆ 2 ಸಾವಿರ ರೂ. ಕೊಡುವುದರಿಂದ ಶುದ್ಧ ಕುಡಿಯುವ ನೀರು ದೊರೆಯುವುದಿಲ್ಲ. ಜನಾಂಗಕ್ಕೆ ಮೀಸಲಿಟ್ಟ ಹಣವನ್ನು ಬೇರೆ ಕಾರಣಕ್ಕೆ ಖರ್ಚು ಮಾಡಬಾರದು, ಚರ್ಚೆಗೆ ಹೆಚ್ಚಿನ ಅವಕಾಶ ನೀಡಬೇಕು ಎಂದು ಕೋರಿದರು.

ಸಭಾಧ್ಯಕ್ಷ ಯು.ಟಿ.ಖಾದರ್, ನಿಲುವಳಿ ಸೂಚನೆ ಬದಲಿಗೆ ನಿಯಮ 69ರಡಿ ಚರ್ಚೆಗೆ ಅವಕಾಶ ನೀಡುವುದಾಗಿ ಪ್ರಕಟಿಸಿದರು.

## ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಖಾಸಗಿ ಸಂಸ್ಥೆಗಳ ಸಹಯೋಗ ಅಗತ್ಯ



**ಮಲೇಬೆನ್ನೂರು**

ಮಲೇಬೆನ್ನೂರು, ಜು. 18 - ಖಾಸಗಿ ಸಂಸ್ಥೆಗಳು ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಧಾವಿಸಿದರೆ ಮಕ್ಕಳ ದಾಖಲಾತಿ ಹೆಚ್ಚುತ್ತದೆ. ಜೊತೆಗೆ ಸರ್ಕಾರಿ ಶಾಲೆಗಳ ಉಳಿವಿಗೆ ಕಾರಣವಾಗುತ್ತದೆ ಎಂದು ಇಂಡಿಯಾ ಸುಧಾರ್ ಟ್ರಸ್ಟ್ ಸದಸ್ಯ ಸುಧೀಂದ್ರ ಅವರು ಅಭಿಪ್ರಾಯಪಟ್ಟರು.

ಸಲಗನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಿಸಿ ಅವರು ಮಾತನಾಡಿದರು.

ಇಂಡಿಯಾ ಸುಧಾರ್ ಸಂಸ್ಥೆ ಸಿನೋಪ್ಸಿಸ್ ಕಂಪನಿಯ ಸಹಯೋಗದಲ್ಲಿ ಹರಿಹರ ತಾಲ್ಲೂಕಿನ 27 ಸರ್ಕಾರಿ ಪ್ರಾಥಮಿಕ ಶಾಲೆಗಳು ಮತ್ತು 5 ಪ್ರೌಢ ಶಾಲೆಗಳ ಒಟ್ಟು 4195 ಮಕ್ಕಳಿಗೆ 17600 ನೋಟ್ ಪುಸ್ತಕಗಳನ್ನು ಈ ವರ್ಷ ವಿತರಿಸಲಾಗಿದೆ ಎಂದರು.

ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಅಶ್ಫಾಕ್ ಅಹಮದ್ ಅವರು, ಇಂಡಿಯಾ ಸುಧಾರ್ ಸಂಸ್ಥೆಯ ಮುಖ್ಯಸ್ಥ ವಿನೋದ್ ಮುಗ್ರೋಡ್ ಹಾಗೂ ಶಿಕ್ಷಕ ಕಿರಣ್ ಕುಮಾರ್ ಹೆಗಡೆ ಅವರಿಗೆ ಶಾಲಾ ಸಿಬ್ಬಂದಿ ಹಾಗೂ ಮಕ್ಕಳ ಪರವಾಗಿ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷೆ ಸುನೀತಾ, ಉಪಾಧ್ಯಕ್ಷ ಹೋಬಳಿ ರಾಜಪ್ಪ, ಗ್ರಾಮ ಪಂಚಾಯಿತಿ ಸದಸ್ಯ ವಿಜಯಕುಮಾರ್, ಮೈಲಾರಪ್ಪ, ಶಿಕ್ಷಕರಾದ ಮಲ್ಲಿಕಾರ್ಜುನ, ಪರಶುರಾಮ, ಉಮಾ ಹಾಗೂ ಬಿ. ಸಿ. ರಮೇಶ್ ಹಾಜರಿದ್ದರು.

## ವಿವೇಕಾನಂದ ಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ



ದಾವಣಗೆರೆ, ಜು.18- ಇಲ್ಲಿನ ಬನಶಂಕರಿ ಬಡಾವಣೆಯ ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಈಚೆಗೆ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜ್ಞಾನ ಭಾರತಿ ವಿದ್ಯಾಲಯದ ಕಾರ್ಯದರ್ಶಿ ಎಂ.ಎನ್. ಮಲ್ಲೇಶಪ್ಪ ಶ್ಯಾಗಲೆ ಅವರು ಮಾತನಾಡಿ, ವಿದ್ಯಾರ್ಥಿ ಸಂಘಕ್ಕೆ ಆಯ್ಕೆಯಾಗಿರುವ ಮಕ್ಕಳು, ಧರ್ಮ-ಜಾತಿ, ಮತ-ಪಂಥ ಮತ್ತು ಲಿಂಗ ಭೇದ ಮಾಡದೆ, ಎಲ್ಲರನ್ನು ಒಗ್ಗೂಡಿಸಿ ಈ ಶೈಕ್ಷಣಿಕ ಸಾಲಿನ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಶ್ರಮಿಸಬೇಕು ಎಂದು ತಿಳಿಸಿದರು.

ನಿಸರ್ಗ ಶಾಲೆಯ ಕಾರ್ಯದರ್ಶಿ ಎಚ್. ಜಿ. ಪ್ರಕಾಶ್ ಮಾತನಾಡಿ, ವಿದ್ಯಾರ್ಥಿಗಳು ಗುರು-ಹಿರಿಯರಿಗೆ ಮತ್ತು ತಂದೆ-ತಾಯಿಗಳಿಗೆ ಸದಾ ಗೌರವಿಸಬೇಕು ಮತ್ತು ಶಾಲೆಯಲ್ಲಿ ಶಿಸ್ತಿನ ವಿದ್ಯಾಭ್ಯಾಸ ಮಾಡುವಂತೆ ಹೇಳಿದರು.

ಕೆ.ಎನ್. ರಾಜಶೇಖರ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಮುಖ್ಯಶಿಕ್ಷಕ ಬಿ. ಪರಮೇಶ್ವರಪ್ಪ, ಶಿಕ್ಷಕ ಟಿ. ಕಲ್ಲೇಶ್, ಪಿ.ಎಸ್ ತಾರಾ, ಮಂಜುಳಾ, ಪವಿತ್ರಾ, ನೇತ್ರಾ, ಎನ್.ದಿವ್ಯಾ ಮತ್ತು ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿದ್ದರು.

## ಬಾಲ್ಯ ವಿವಾಹ ಪ್ರಕರಣಗಳಲ್ಲಿ ಶೇ.11ರಷ್ಟಕ್ಕೆ ಮಾತ್ರ ಶಿಕ್ಷೆ

ನವದೆಹಲಿ, ಜು. 18 - ಬಾಲ್ಯ ವಿವಾಹ ತಡೆ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳಲ್ಲಿ ಶೇಕಡ 11 ರಷ್ಟರಲ್ಲಿ ಮಾತ್ರ ಶಿಕ್ಷೆಯಾಗುತ್ತಿದೆ ಎಂದು ಇತ್ತೀಚಿನ ವರದಿಯೊಂದು ತಿಳಿಸಿದೆ. 2022 ರಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ 3,636 ಪ್ರಕರಣಗಳನ್ನು ದಾಖಲಿಸಲಾಗಿತ್ತು. ಈ ಪೈಕಿ 181 ರ ವಿಚಾರಣೆ ಮಾತ್ರ ಪೂರ್ಣಗೊಂಡಿದೆ. ಇದೇ ವೇಗದಲ್ಲಿ ಪ್ರಕರಣಗಳ ತನಿಖೆಯ ಮುಂದುವರೆದಲ್ಲಿ 3,365 ಪ್ರಕರಣಗಳು ಇತ್ಯರ್ಥವಾಗಲು 19 ವರ್ಷಗಳೇ ಬೇಕಾಗಲಿವೆ ಎಂದು ಇಂಡಿಯಾ ಚೈಲ್ಡ್ ಪ್ರೊಟೆಕ್ಷನ್ ಸಂಸ್ಥೆ ರೂಪಿಸಿರುವ ವರದಿ ತಿಳಿಸಿದೆ. ಈ ವರದಿಯನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬಿಡುಗಡೆ ಮಾಡಿದೆ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ

ದಾವಣಗೆರೆ, ಜು.18- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸ ಲಾಗಿದೆ. ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

## ಸಿಎಂ ರಾಜೀನಾಮೆಗೆ ಆಗ್ರಹಿಸಿ ವಿಧಾನಸೌಧ ಮುತ್ತಿಗೆ ಯತ್ನ

ಬೆಂಗಳೂರು, ಜು. 18 - ಮಹರ್ಷಿ ವಾಲ್ಮೀಕಿ ಬುಡಕಟ್ಟು ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿ ನಾಯಕರ ನೇತೃತ್ವದಲ್ಲಿ ವಿಧಾನಸೌಧ ಮುತ್ತಿಗೆಗೆ ಪ್ರಯತ್ನಿಸಲಾಯಿತು.

ಭಿತ್ತಿ ಪತ್ರ ಹಾಗೂ ಬ್ಯಾನರ್‌ಗಳನ್ನು ಹಿಡಿದಿದ್ದ ಬಿಜೆಪಿ ಶಾಸಕರು ಹಾಗೂ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕಾಂಗ್ರೆಸ್ ಪಕ್ಷದ ದಲಿತ ವಿರೋಧಿ ಹಾಗೂ ಬುಡಕಟ್ಟು ಪಂಗಡಗಳ ವಿರೋಧಿ ನೀತಿ ಬಯಲಾಗಿದೆ ಇಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಅವರು ರಾಜೀನಾಮೆ ನೀಡುವವರೆಗೂ ನಮ್ಮ ಪ್ರತಿಭಟನೆ ಮುಂದುವರೆಯುತ್ತದೆ ಎಂದು ಹೇಳಿದರು.

ಈ ಹಗರಣದ ದೊಡ್ಡ ಮೊತ್ತವನ್ನು ಲೋಕಸಭಾ ಚುನಾವಣೆಗೆ ಮುಂಚೆ ಮದ್ಯ ಖರೀದಿಗೆ ಬಳಸಲಾಗಿದೆ. ಅಲ್ಲದೆ ದುಬಾರಿ ವಾಹನಗಳ ಖರೀದಿಗೆ ಹಗರಣದ ಹಣ ಬಳಕೆಯಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ ಎಂದು ವಿಜಯೇಂದ್ರ ಹೇಳಿದರು.

## ನನ್ನ ರಾಜಕೀಯ ಜೀವನದಲ್ಲಿ ಒಂದು ಕಪ್ಪು ಚುಕ್ಕೆಯೂ ಇಲ್ಲ



ಬೆಂಗಳೂರು, ಜು. 18 - ನಾಲ್ಕು ದಶಕಗಳ ನನ್ನ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಮಾಡಿರುವ ಒತ್ತಾಯವನ್ನು ತಳ್ಳಿ ಹಾಕಿದ್ದಾರೆ. ಬಿಜೆಪಿ ಎಂದೂ ದಲಿತರ ಪರವಾಗಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗ ಸಾಮಾಜಿಕ ನ್ಯಾಯದ ವಿರುದ್ಧವಾಗಿ ಕೆಲಸ ಮಾಡಿದೆ ಎಂದು ಆರೋಪಿಸಿದರು.

ಆಗ ಮಾತನಾಡಿದ ಬಿಜೆಪಿ ಹಿರಿಯ ಶಾಸಕ ಅಶ್ವತ್ಥ ನಾರಾಯಣ್, ಕಾಂಗ್ರೆಸ್ ಸರ್ಕಾರ ಹಾಗೂ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ವಿರುದ್ಧವಿದ್ದಾರೆ ಎಂದರು.

ಇದಕ್ಕೆ ತಿರುಗೇಟು ನೀಡಿದ ಸಿದ್ದರಾಮಯ್ಯ, ನಿಮ್ಮ ಭ್ರಷ್ಟಾಚಾರಗಳನ್ನೆಲ್ಲ ತೆಗೆಯುತ್ತೇವೆ, ನೀವು ಶೇ. 40ರ ಕಮೀಷನ್ ಹೊಡೆದಿದ್ದು ಬಯಲಾಗಿದೆ ಎಂದರು.

ಆಗ ಉತ್ತರಿಸಿದ ಅಶ್ವತ್ಥ ನಾರಾಯಣ, ನಿಮ್ಮದು ಶೇ.100ರಷ್ಟು ಭ್ರಷ್ಟಾಚಾರ. ನಿಮ್ಮದು ಅನೈತಿಕ ಸರ್ಕಾರ, ನಿಮಗೆ ನಾಚಿಕೆಯಾಗಬೇಕು ಎಂದರು. ಒಂದು ಹಂತದಲ್ಲಿ ಕಾವೇರಿದ ವಾತಾವರಣ ಉಂಟಾಗಿ ಉಭಯರೂ ಏಕವಚನದಲ್ಲಿ ವಾಗ್ವಾದ ನಡೆಸಿದರು. ಬಿಜೆಪಿ ಅವಧಿಯಲ್ಲಿ ಏನಾಗಿತ್ತು ಎಂಬುದನ್ನು ಬಹಿರಂಗ ಪಡಿಸುತ್ತೇವೆ. ಬಿಜೆಪಿ ಅವಧಿಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಹಾಗೂ ಹಗರಣಗಳನ್ನು ನಿಲ್ಲಿಸಿದ್ದೇವೆ. ನಿಮ್ಮ ನಾಯಕ ಹಾಗೂ ಪರಿಷತ್ ಮಾಜಿ ಸದಸ್ಯ ವೀರಯ್ಯ ಅವರು ದೇವರಾಜ ಅರಸ್ ಟ್ರಕ್ ಟರ್ಮಿನಲ್ ಹಗರಣದಲ್ಲಿ ಜೈಲಿಗೆ ಹೋಗಿದ್ದಾರೆ. ಭೋವಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರವಾಗಿದೆ ಎಂದು ಆರೋಪಿಸಿದರು.

## ಸರ್ಕಾರ ಅಸ್ಥಿರಗೊಳಿಸಲು ಇ.ಡಿ. ಮೂಲಕ ಪ್ರಯತ್ನ

### ನಿಗಮದ ಹಗರಣದಲ್ಲಿ ಸಿಎಂ, ಡಿಸಿಎಂ ಸಿಲುಕಿಸುವ ಯತ್ನ ಎಂದು ಕಾಂಗ್ರೆಸ್ ಆರೋಪ

ಬೆಂಗಳೂರು, ಜು. 18 - ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ತನಿಖೆ ಮೂಲಕ ಸಿಲುಕಿಸಿ, ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಸಂಚು ರೂಪಿಸಿದೆ ಎಂದು ಮುಖ್ಯಮಂತ್ರಿ ಅವರ ಆಪ್ತ ಸಚಿವರ ಬಳಗ ಇಂದಿಲ್ಲಿ ಕಿಡಿಕಾರಿದೆ.

ಸಚಿವರಾದ ಕೆ.ಜೆ.ಜಾರ್ಜ್, ಕೃಷ್ಣಭೈರೇಗೌಡ, ದಿನೇಶ್ ಗುಂಡೂರಾವ್, ಸಂತೋಷ್ ಲಾಡ್ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ವಾಲ್ಮೀಕಿ ನಿಗಮದ ಹಗರಣದಲ್ಲಿ ಇ.ಡಿ.ಗೆ ತಪ್ಪಿತಸ್ಥರ ಹುಡುಕುವ ಉದ್ದೇಶ ಇಲ್ಲ, ಕಾಂಗ್ರೆಸ್ ಸರ್ಕಾರವನ್ನು ಬುಡಮೇಲು ಮಾಡುವುದೇ ಇವರ ಉದ್ದೇಶ ಎಂದರು.

ಪ್ರಕರಣದ ಆರೋಪಿಗಳಿಂದ ಅಪ್ರೂವರ್ ಆಗಿ ಹೇಳಿಕೆ ಪಡೆಯುವ ಯತ್ನ ನಡೆದಿದೆ. ತಪ್ಪೊಪ್ಪಿಗೆ ನೀಡಿ, ಇಲ್ಲದಿದ್ದರೆ ನಿಮಗೆ ಇ.ಡಿ. ಪವರ್ ಗೊತ್ತಿಲ್ಲ, ನಂತರ ನೀವೇ ಸಂಕಷ್ಟಕ್ಕೆ ಸಿಲುಕುತ್ತೀರಿ ಎಂದು ವಿಚಾರಣೆ ವೇಳೆ ಹೆದರಿಸುವ ಮೂಲಕ ಅಧಿಕಾರಿಗಳು ತನಿಖೆಯನ್ನೇ ತಪ್ಪು ದಾರಿಗೆ ಕೊಂಡೊಯ್ಯುತ್ತಿದ್ದಾರೆ ಎಂದು ದೂರಿದರು.

ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಜಾಪ್ರಭುತ್ವ ವಿರೋಧಿ ಕೆಲಸಕ್ಕೆ ಮುಂದಾಗಿದೆ. ಆದರೆ, ಇಂತಹ ಗೊಡ್ಡು ಹೆದರಿಕೆ, ಬೆದರಿಕೆಗಳಿಗೆ ನಾವು ಬಗ್ಗುವ ಮಾತೇ ಇಲ್ಲ ಎಂದರು.

ವಾಲ್ಮೀಕಿ ನಿಗಮದ ಹಗರಣ ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ. ಅಧಿಕಾರಿಗಳು ವಿಚಾರಣೆಗೊಳಪಟ್ಟವರ ಮೇಲೆ ದಬಾವಣೆ ನಡೆಸುತ್ತಿದ್ದಾರೆ. ಈ ಹಗರಣದಲ್ಲಿ ಉನ್ನತ ಮಟ್ಟದಲ್ಲಿರುವವರೂ ಭಾಗಿಯಾಗಿದ್ದಾರೆ ಎಂಬ ಹೇಳಿಕೆ ನೀಡುವಂತೆ ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು.

ಜನ ಮನ್ನಣೆ ಹಾಗೂ ಅಧಿಕಾರ ಕಳೆದುಕೊಂಡು ರಾಜ್ಯದಲ್ಲಿ ದುರ್ಬಲವಾಗಿರುವ ಬಿಜೆಪಿ ನಾಯಕರು, ಜಾರಿ ನಿರ್ದೇಶನಾಲಯ (ಇ.ಡಿ.) ಬಳಸಿಕೊಂಡು ವಾಮಮಾರ್ಗದಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಯತ್ನಿಸುತ್ತಿದ್ದಾರೆ ಎಂದು ಹೇಳಿದರು.

ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಕಳೆದ 10 ವರ್ಷಗಳಲ್ಲಿ ಇ.ಡಿ. ರಾಜಕೀಯ ಅಸ್ತ್ರವಾಗಿದೆ. ಬಿಜೆಪಿಗೆ ಎಲ್ಲಿ ಚುನಾವಣೆ ಗೆಲ್ಲಲು ಸಾಧ್ಯವಿಲ್ಲವೋ ಅಲ್ಲೆಲ್ಲಾ ಇ.ಡಿ., ಐಟಿ ಬಳಸಿಕೊಂಡು ಆಡಳಿತ ಪಕ್ಷಗಳ ಮೇಲೆ ದಾಳಿ ಮಾಡುವುದು ವಾಡಿಕೆಯಾಗಿದೆ.

ಬಿಜೆಪಿಯ ಇಂತಹ ನೀಚ ನಡೆಗಳಿಗೆ ಜಾರ್ಖಂಡ್, ಪಶ್ಚಿಮ ಬಂಗಾಳ, ದೆಹಲಿ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮಹಾರಾಷ್ಟ್ರ ಸೇರಿದಂತೆ ಸಾಕಷ್ಟು ಉದಾಹರಣೆಗಳಿದ್ದು, ಪಟ್ಟಿ ಇನ್ನೂ ದೊಡ್ಡದಿದೆ ಎಂದರು.

ಕೆಲವು ಪ್ರತಿಷ್ಠಿತ ಸುದ್ದಿ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಈ ಬಗ್ಗೆ ಅಧ್ಯಯನ ಮಾಡಿವೆ. 2014ರಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ದೇಶದಲ್ಲಿ ಇ.ಡಿ. ದಾಖಲಿಸುವ ಪ್ರಕರಣಗಳ ಸಂಖ್ಯೆ ಶೇ.400ರಷ್ಟು ಹೆಚ್ಚಳವಾಗಿದೆ. ಅದರಲ್ಲಿ ಶೇ.95ರಷ್ಟು ಪ್ರಕರಣಗಳು ವಿರೋಧ ಪಕ್ಷಗಳ ವಿರುದ್ಧವಾಗಿವೆ ಎಂದರು.

ಶೇ.5ರಷ್ಟು ಮಾತ್ರ ಬಿಜೆಪಿ ಅಥವಾ ಮಿತ್ರ ಪಕ್ಷಗಳ ಮೇಲೆ ಗುರಿಯಾಗಿದೆ. ಬಿಜೆಪಿ ವಾಷಿಂಗ್ ಮೆಷಿನ್ ಪಕ್ಷ ಎಂಬುದನ್ನು ಸಾಬೀತುಪಡಿಸುತ್ತಿವೆ. ವಿಪಕ್ಷದಲ್ಲಿದ್ದರೆ ಕೇಸು, ಬಿಜೆಪಿಗೆ ಸೇರಿದ ಕೂಡಲೇ ಖುಲಾಸೆ ಚೀಟಿ ಎಂಬುದನ್ನು ಒತ್ತಿ ಹೇಳುತ್ತಿವೆ ಎಂದು ಅವರು ಅಂಕಿ-ಅಂಶಗಳನ್ನು ಮುಂದಿಟ್ಟರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಈ ಕಾಲದಲ್ಲಿ ಸತ್ಯ ಮತ್ತು ನಿಖರ ಅಂಕಿ-ಅಂಶಗಳು ಲೆಕ್ಕಕ್ಕಿಲ್ಲದಂತಾಗಿವೆ, ಯುಪಿಎ ಸರ್ಕಾರದ ಅವಧಿಯಲ್ಲಿ ಶೇ.53ರಷ್ಟು ಪ್ರಕರಣಗಳು ಮಾತ್ರ ವಿರೋಧ ಪಕ್ಷಗಳ ನಾಯಕರ ಮೇಲೆ ದಾಖಲಾಗಿತ್ತು. ಶೇ.47ರಷ್ಟು ಪ್ರಕರಣಗಳು ಸ್ವತಃ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ನಾಯಕರ ಮೇಲೆ ದಾಖಲಾಗಿದ್ದವು. ಆದರೆ, ಇಂದಿನ ಸ್ಥಿತಿ ಏನು ಎಂದು ಸಚಿವ ಕೃಷ್ಣ ಭೈರೇಗೌಡ ಪ್ರಶ್ನಿಸಿದರು.

ಈ ಹಿಂದೆ ಬಿಜೆಪಿ ಸರ್ಕಾರದಲ್ಲೂ ಸಾಕಷ್ಟು ಹಗರಣಗಳು ನಡೆದಿವೆ. ಕೊರೊನಾ ಸಂದರ್ಭದಲ್ಲಿ ಹೆಣದ ಮೇಲೂ ಹಣ ಮಾಡಿದ ಆರೋಪ ಬಿಜೆಪಿ ಮೇಲಿದೆ. ಆದರೆ, ಜಾರಿ ನಿರ್ದೇಶನಾಲಯ ಈ ಬಗ್ಗೆ ಏಕೆ ತನಿಖೆ ನಡೆಸುವುದಿಲ್ಲ ಎಂದು ಪ್ರಶ್ನಿಸಿದರು.

ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದಲ್ಲಿ 46 ಕೋಟಿ ರೂ. ಲೂಟಿಯಾಗಿದೆ. ಬಿಜೆಪಿಯ ಮಾಜಿ ಎಂಎಲ್‌ಸಿ ಹಾಗೂ ಮಾಜಿ ಎಂಪಿ ಅಭ್ಯರ್ಥಿಯೊಬ್ಬರ ಬ್ಯಾಂಕ್ ಖಾತೆಗೆ 3 ಕೋಟಿ ರೂ. ಹೋಗಿದೆ. ಈ ಪ್ರಕರಣವನ್ನು ಏಕೆ ಇ.ಡಿ. ತನಿಖೆ ಮಾಡುತ್ತಿಲ್ಲ? ಇದು ಹಗರಣದ ಲಾಭಾಂಶ ಅಲ್ವ? ಆ ಲೂಟಿಯ ಹಣ ಯಾವ ಎಲೆಕ್ಷನ್‌ಗೆ ಹೋಗಿದೆ ಅಂತ ಇ.ಡಿ. ಏಕೆ ತನಿಖೆ ನಡೆಸುತ್ತಿಲ್ಲ. ಭೋವಿ ನಿಗಮ, ತಾಂಡಾ ಅಭಿವೃದ್ಧಿ ನಿಗಮದಲ್ಲೂ ಕೋಟಿ ಕೋಟಿ ರೂ. ಲೂಟಿಯಾಗಿದೆ ಅಲ್ಲಿ ಏಕೆ ತನಿಖೆ ಇಲ್ಲ? ಎಂದು ಪ್ರಶ್ನಿಸಿದರು.

## ಉತ್ತರ ಪ್ರದೇಶ : ರೈಲು ಹಳಿ ತಪ್ಪಿ ಇಬ್ಬರ ಸಾವು

ನವದೆಹಲಿ, ಜು. 18 - ಚಂಡೀಘಡ - ದಿಬ್ರುಘರ್ ಎಕ್ಸ್‌ಪ್ರೆಸ್ ರೈಲು ಉತ್ತರಪ್ರದೇಶದ ಗೊಂಡ ಬಳಿ ಹಳಿ ತಪ್ಪಿ ಇಬ್ಬರು ಸಾವನ್ನಪ್ಪಿದ್ದಾರೆ ಹಾಗೂ 34 ಜನ ಗಾಯಗೊಂಡಿದ್ದಾರೆ.

ಮೋತಿಗಂಜ್ ಹಾಗೂ ಜಿಲಾಹಿ ರೈಲ್ವೆ ನಿಲ್ದಾಣಗಳ ನಡುವೆ ಅಪಘಾತ ಸಂಭವಿಸಿದೆ. ತಕ್ಷಣವೇ ನೆರವಿಗಾಗಿ ತಂಡಗಳನ್ನು ರವಾನಿಸಿದ್ದು, ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರೈಲು ಹಳಿ ತಪ್ಪುವ ಮುಂಚೆ ಸ್ಫೋಟದಂತಹ ಸದ್ದು ಕೇಳಿ ಬಂದಿತ್ತು ಎಂದು ರೈಲಿನ ಚಾಲಕ ತಿಳಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಅಪಘಾತದಲ್ಲಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ, ಬ್ರಜೇಶ್ ಪಾಠಕ್ ಮೊದಲು ಹೇಳಿದ್ದರು. ನಂತರ ಮೃತರ ಸಂಖ್ಯೆ 2 ಎಂದು ಸ್ಪಷ್ಟಪಡಿಸಲಾಗಿದೆ

# ರೈತನಿಗೆ ಅವಮಾನಿಸಿದ ಜಿ.ಟಿ. ಮಾಲ್ ಒಂದು ವಾರ ಬಂದ್

ಬೆಂಗಳೂರು, ಜು. 18 - ರೈತನಿಗೆ ಅಪಮಾನ ಮಾಡಿದ ನಗರದ ಮಾಗಡಿ ರಸ್ತೆಯ ಜಿ.ಟಿ.ಮಾಲ್ ಅನ್ನು ಒಂದು ವಾರ ಬಂದ್ ಮಾಡಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ವಿಧಾನಸಭೆಗಿಂದು ತಿಳಿಸಿದ್ದಾರೆ.

ರೈತರೊಬ್ಬರನ್ನು ಮಾಲ್ ಒಳಗೆ ಬಿಡದೆ ಅಪಮಾನ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷಭೇದ ಮರೆತು ಸದಸ್ಯರು ಮಾತನಾಡಿ, ಮಾಲ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದಾಗ ಮಧ್ಯಪ್ರವೇಶಿಸಿದ ಸಚಿವರು, ರೈತನಿಗೆ ಅಪಮಾನ ಮಾಡಿದ ಮಾಲ್ ಅನ್ನು ಒಂದು ವಾರ ಮುಚ್ಚಿಸುವಂತಹ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ಗ್ರಾಮೀಣ ಭಾಗದಿಂದ ಬಂದಿದ್ದ ತಮ್ಮ ತಂದೆಯನ್ನು ಮಗ ಮಾಲ್‌ಗೆ ಕರೆದೊಯ್ದಾಗ ಅವರ ಉಡುಗೆ ಗಮನಿಸಿದ ಸುರಕ್ಷತಾ ಸಿಬ್ಬಂದಿ ಪಂಚೆ ತೊಟ್ಟಿದ್ದಾರೆ ಎಂಬ ಕಾರಣಕ್ಕೆ ಒಳಗೆ ಬಿಟ್ಟಿಲ್ಲ. ಈ ಕ್ರಮವನ್ನು ತೀವ್ರವಾಗಿ ಖಂಡಿಸುತ್ತೇನೆ ಎಂದರು.

ಸರ್ಕಾರ ಮಾಲ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ಕ್ರಮದಿಂದ ಎಲ್ಲಾ ಮಾಲ್‌ಗಳಿಗೂ ಸಂದೇಶ ರವಾನಿಸಬೇಕು. ಮಾಲ್‌ನ ಮಾಲೀಕರು ಎಷ್ಟೇ ಶ್ರೀಮಂತರಾದರೂ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸ್ಪಂದಿಸುವುದು ಮುಖ್ಯ ಎಂದರು.

ಸಭಾಧ್ಯಕ್ಷರ ಹೇಳಿಕೆಗೆ ಧ್ವನಿಗೂಡಿಸಿದ ಲಕ್ಷ್ಮಣ ಸವದಿ, ಮಾಲ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರೆ ಸಾಲದು, ಒಂದು ವಾರ ವಿದ್ಯುತ್ ಕಡಿತ ಮಾಡಿ, ತಕ್ಕ ಪಾಠ ಆಗಲಿದೆ. ಸರ್ಕಾರದ ಆದೇಶ ಹೊರಡಿಸಿ, ರೈತರ ಉಡುಪಿಗೆ ಬೆಲೆ ಕೊಡದ ಮಾಲ್ ವಿರುದ್ಧ ಕ್ರಮ ಆಗಬೇಕು ಎಂದರು.

ಪ್ರಕಾಶ್ ಕೋಳಿವಾಡ ಮಾತನಾಡಿ, ಅವಮಾನಿತನಾದ ರೈತ ತಮ್ಮ ಕ್ಷೇತ್ರದ ಅರೆಮಲ್ಲಾಪುರ ಗ್ರಾಮದವರಾಗಿದ್ದು, ಒಂಭತ್ತು ಮಕ್ಕಳಿದ್ದಾರೆ. ಎಲ್ಲರಿಗೂ ಶಿಕ್ಷಣ ಕೊಡಿಸಿದ್ದಾರೆ, ಒಬ್ಬ ಪುತ್ರ ಎಂಬಿಎ ಓದುತ್ತಿದ್ದು, ಮಗನನ್ನು ನೋಡಲು ಬೆಂಗಳೂರಿಗೆ ಬಂದಿದ್ದರು. ಮಗ ಜಿ.ಟಿ. ಮಾಲ್‌ಗೆ ಕರೆದುಕೊಂಡು ಹೋದಾಗ ಉಡುಗೆ ನೋಡಿ ಅಪಮಾನ ಮಾಡಲಾಗಿದೆ, ಈ ಕೃತ್ಯಕ್ಕೆ ಮಾಲ್ ಮುಚ್ಚಿಸಬೇಕು ಎಂದರು.

ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ಮಾತನಾಡಿ, ಮಾಲ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಬೆಂಗಳೂರಿನಲ್ಲಿನ ಕೆಲವು ಕ್ಲಬ್‌ಗಳಲ್ಲಿ ಶೂ ಧರಿಸಲೇಬೇಕು ಎಂಬ ಷರತ್ತು ಹಾಕುತ್ತಾರೆ. ಇಂತಹ ಕ್ಲಬ್‌ಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದರು.

ಸಚಿವ ಭೈರತಿ ಸುರೇಶ್ ಮಾತನಾಡಿ, ಕ್ಲಬ್‌ಗಳಲ್ಲಿ ಪಂಚೆ, ಚಪ್ಪಲಿ ಹಾಕುವಂತಿಲ್ಲ, ಮಾಜಿ ಪ್ರಧಾನಿ ದೇವೇಗೌಡರು ಪಂಚೆ ಉಟ್ಟುಕೊಂಡು ಹೋದರೆ ಆಗಲೂ ಹಾಗೆಯೇ ಮಾಡುತ್ತಾರಾ? ಸಾಂಪ್ರದಾಯಿಕ ಉಡುಗೆಗೆ ಗೌರವ ಸಿಗುವಂತಾಗಬೇಕು ಎಂದರು.

ಸುರೇಶ್‌ಕುಮಾರ್ ಮಾತನಾಡಿ, ಚಡ್ಡಿ, ಪ್ಯಾಂಟ್ ಹಾಕಿಕೊಂಡು ಹೋದರೆ ಬಿಡುತ್ತಾರೆ. ಪಂಚೆ ಧರಿಸಿದ್ದರೆ ಬಿಡುವುದಿಲ್ಲ, ಅಂತಹ ಕ್ಲಬ್‌ಗಳಿಗೆ ಏಕೆ ಹೋಗುತ್ತೀರಾ? ಎಂದು ಛೇಡಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ರೈತರಿಗೆ ಅವಮಾನ ಮಾಡಿದ ವಿಚಾರ ಹತ್ತಾರು ಬಾರಿ ಚರ್ಚೆಯಾಗಿದೆ, ಸರ್ಕಾರದಿಂದ ಕ್ರಮ ಕೈಗೊಳ್ಳುವ ಆದೇಶ ಹೊರಡಿಸಿ, ಅನುಷ್ಠಾನ ಮಾಡಬೇಕು ಎಂದರು.

ಹಲವು ಶಾಸಕರ ಒತ್ತಾಯಕ್ಕೆ ಮಣಿದ ಸಚಿವ ಭೈರತಿ ಸುರೇಶ್, ತಪ್ಪು ಎಸಗಿದ ಮಾಲ್ ಅನ್ನು ಏಳು ದಿನ ಮುಚ್ಚಿಸುವುದಾಗಿ ಭರವಸೆ ನೀಡಿದಾಗ ಚರ್ಚೆಗೆ ತೆರೆ ಬಿದ್ದಿತು.

# ಯುವಕರಲ್ಲಿ ನಾಯಕತ್ವದ ಕೊರತೆ: ಸಿ.ಜಿ. ದಿನೇಶ್



ದಾವಣಗೆರೆ, ಜು. 18- ಭಾರತವು ಉತ್ತಮ ಯುವಶಕ್ತಿ ಹೊಂದಿರುವ ರಾಷ್ಟ್ರ, ಆದರೆ ಉತ್ತಮ ನಾಯಕತ್ವದ ಕೊರತೆಯನ್ನು ಇಂದಿನ ಯುವಕರಲ್ಲಿ ಕಾಣುತ್ತಿರುವುದು ಬೇಸರದ ಸಂಗತಿ ಎಂದು ಅನ್‌ಮೋಲ್ ವಿದ್ಯಾಸಂಸ್ಥೆಯ ಅಧ್ಯಕ್ಷ ಸಿ.ಜಿ. ದಿನೇಶ್ ಹೇಳಿದರು.

ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅನ್‌ಮೋಲ್ ವಿದ್ಯಾಸಂಸ್ಥೆಯು ದೇಶಕ್ಕೆ ಉತ್ತಮ ನಾಗರಿಕರನ್ನು ಸಿದ್ಧಪಡಿಸುವ ದೃಷ್ಟಿಯಿಂದ ಇಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳಲ್ಲಿ ಉತ್ತಮ ನಾಯಕತ್ವದ ಗುಣಗಳನ್ನು ಬಿತ್ತಲಾಗುತ್ತಿದೆ ಎಂದರು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಕೌಸ್ತುಭ ಜೋಶಿ ನಾಯಕತ್ವದ ಗುಣಗಳ ಬಗ್ಗೆ ಮಾತನಾಡಿದರು. ಅನ್‌ಮೋಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲ ಯು. ಕೊಟ್ರೇಶ್ ಮತ್ತಿತರರು ಉಪಸ್ಥಿತರಿದ್ದರು.

# ರಾಣೇಬೆನ್ನೂರು : ನಾಮದೇವ ಸಿಂಪಿ ಸಮಾಜದಿಂದ ಏಕಾದಶಿ



ರಾಣೇಬೆನ್ನೂರು, ಜು. 18 - ಇಲ್ಲಿನ ನಾಮದೇವ ಸಿಂಪಿ ಸಮಾಜದವರು ವಿಠಲನ ಪ್ರಿಯ ದಿನವಾದ ಬುಧವಾರವೇ ಏಕಾದಶಿ ಬಂದಿದ್ದು, ಭಕ್ತರು ಅತ್ಯಂತ ಶ್ರದ್ಧಾಭಕ್ತಿಯಿಂದ ಪ್ರಥಮ ಆಷಾಢ ಕಾರ್ಯಕ್ರಮವನ್ನು ವಿಠಲ ರುಕ್ಮಾಯಿ ದೇವಸ್ಥಾನದಲ್ಲಿ ಫಲ ಪಂಚಾಮೃತ ಅಭಿಷೇಕ ಮಾಡಿದರು.

ನೆರೆದಿದ್ದ ಸಮಸ್ತ ಭಕ್ತರಿಗೆ ಸಿಹಿ ಪ್ರಸಾದ ವಿತರಿಸಲಾಯಿತು. ಮಗುವಿಗೆ ವಿಠಲನ ಶೃಂಗಾರ ಮಾಡಲಾಯಿತು. ಮಹಾಮಂಗಳಾರತಿ, ನವಗ್ರಹ ಪೂಜಾ ಮುಂತಾದ ಎಲ್ಲ ಧಾರ್ಮಿಕ ವಿಧಿ ವಿಧಾನಗಳಲ್ಲಿ ಸಮಾಜದ ಅಧ್ಯಕ್ಷ ಪ್ರವೀಣ ಕೋಪರ್ಡೆ, ಗದಿಗೆಪ್ಪ ಬಗಾಡೆ, ಸಮಾಜದ ಭಕ್ತರು ಪಾಲ್ಗೊಂಡಿದ್ದರು.

# ಮಾಜಿ ಸೈನಿಕರ ಮಕ್ಕಳಿಗೆ ಪುಸ್ತಕ ಅನುದಾನ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು.18- ಕರ್ನಾಟಕದ ಮಾಜಿ ಸೈನಿಕರ ಹಾಗೂ ಹೊರ ರಾಜ್ಯದ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ (ಅಧಿಕಾರಿಗಳನ್ನು ಹೊರತುಪಡಿಸಿ) ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಒಂದನೇ ತರಗತಿಯಿಂದ ಪಿ.ಯು.ಸಿವರೆಗೆ ಓದುವ ಮಕ್ಕಳಿಗೆ ಪುಸ್ತಕ ಅನುದಾನಕ್ಕಾಗಿ ಮತ್ತು ಪದವಿ, ಡಿಪ್ಲೋಮಾ, ಜೆ.ಓ.ಸಿ ವೃತ್ತಿಪರ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶುಲ್ಕ ರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಕಚೇರಿಯಿಂದ ಪಡೆದು, ಅಗತ್ಯ ದಾಖಲೆಗಳೊಂದಿಗೆ ಸೆಪ್ಟೆಂಬರ್ 30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಚೇರಿಯ ದೂ. ಸಂ: 08182-220925 ಸಂಪರ್ಕಿಸಬೇಕೆಂದು ಇಲಾಖೆ ಉಪನಿರ್ದೇಶಕ ಡಾ.ಸಿ.ಎ ಹಿರೇಮಠ ತಿಳಿಸಿದ್ದಾರೆ.

# ದ್ವಿಚಕ್ರ ವಾಹನ ರಿಪೇರಿ ಉಚಿತ ತರಬೇತಿಗೆ ಅರ್ಜಿ

ದಾವಣಗೆರೆ, ಜು. 18 - ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಹಾಗೂ ರುಡ್‌ಸೆಟ್ ಸಂಸ್ಥೆಯ ವತಿಯಿಂದ ದ್ವಿಚಕ್ರ ವಾಹನ ರಿಪೇರಿ ಮತ್ತು ಸೇವೆ ಕುರಿತ 30 ದಿನಗಳ ಉಚಿತ ತರಬೇತಿಗಾಗಿ ಆಗಸ್ಟ್ 21 ರಿಂದ ಗ್ರಾಮೀಣ ನಿರುದ್ಯೋಗಿ ಯುವಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9740982585, 9380162042 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ್ ತಿಳಿಸಿದ್ದಾರೆ.

# ಮಹಿಳೆಯರಿಗೆ ಫ್ಯಾಷನ್ ಡಿಸೈನಿಂಗ್ ಟೈಲರಿಂಗ್ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜು.18- ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಡ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಫ್ಯಾಷನ್ ಡಿಸೈನಿಂಗ್ ಹಾಗೂ ಟೈಲರಿಂಗ್ ಕುರಿತ ಉಚಿತ ತರಬೇತಿ ಆಗಸ್ಟ್ 1 ರಿಂದ ಆರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಮಹಿಳೆಯರು ತರಬೇತಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 23 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9740982585 ಕ್ಕೆ ಸಂಪರ್ಕಿಸಬಹುದಾಗಿದೆ.

# ಮೀಸಲಾತಿ ವಿಧೇಯಕ ತಡೆ ಕರ್ನಾಟಕಕ್ಕೆ ಅವಮಾನ

ಬೆಂಗಳೂರು, ಜು. 18 – ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವ ವಿಧೇಯಕವನ್ನು ತಡೆದಿರುವ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮೀಸಲಾತಿಯ ವಿಧೇಯಕ ಪ್ರಸಕ್ತ ಅಧಿವೇಶನದಲ್ಲೇ ಸರ್ಕಾರ ಮಂಡಿಸಲಿ, ಇಲ್ಲವೇ ಕನ್ನಡಿಗರ ಆಕ್ರೋಶ ಎದುರಿಸಲು ಸಿದ್ದವಾಗಲಿ ಎಂದಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಕನ್ನಡಿಗರಿಗೆ ಉದ್ಯೋಗ ಕೊಡುವ ವಿಧೇಯಕ ದಿಢೀರ್ ತಡೆಹಿಡಿದು ಕನ್ನಡ-ಕನ್ನಡಿಗ-ಕರ್ನಾಟಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅವಮಾನಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ನೆಲದ ಮಕ್ಕಳ ಉದ್ಯೋಗದ ಹಕ್ಕನ್ನು ರಕ್ಷಿಸುವ ನಿಟ್ಟಿನಲ್ಲಿ ಕನ್ನಡಪರ ಹೋರಾಟಗಾರರ ಬಹುದಿನಗಳ ಹೋರಾಟದ ಬೇಡಿಕೆಗೆ ನಿನ್ನೆಯಷ್ಟೇ 'ಅಸ್ತು 'ಎಂದು ಹೆಜ್ಜೆ ಇಟ್ಟಿದ್ದ ಸರ್ಕಾರ ದಿನ ಕಳೆಯುವುದರೊಳಗೇ 'ಸುಸ್ತು' ಹೊಡೆದಿರುವುದೇಕೆ? ಎಂದವರು ಪ್ರಶ್ನಿಸಿದ್ದಾರೆ.

ರಾಜ್ಯ ಸರ್ಕಾರದ ನಿರ್ಧಾರದಿಂದ ಪ್ರತಿಪಕ್ಷಗಳ ಇಂಡಿಯ ಮೈತ್ರಿಕೂಟದಲ್ಲಿ ಬಿರುಕು ಮೂಡುವ ಭೀತಿಯಿಂದ ಹೈಕಮಾಂಡ್ ಮುಖ್ಯಮಂತ್ರಿಗಳ ಕೈ ಕಟ್ಟಿ ಹಾಕಿರಬೇಕು. ಇಲ್ಲದಿದ್ದರೇ ಕನ್ನಡಿಗರ ಬದುಕು ಹಸನಾಗಿಸುವ ವಿಧೇಯಕವನ್ನು ಬದಿಗೆ ಸರಿಸುವ ಪಲಾಯನವಾದಿ ನಿರ್ಧಾರ ಕೈಗೊಳ್ಳಲು ಹೇಗೆ ಸಾಧ್ಯ? ಎಂದವರು ಪ್ರಶ್ನಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ನಿಗಮ ಹಾಗೂ ಮುಡಾ ಹಗರಣಗಳಿಂದ ತತ್ತರಿಸಿರುವ ಕಾಂಗ್ರೆಸ್ ತನ್ನ ಮುಖ ಮುಚ್ಚಿಕೊಳ್ಳಲು ಹಗರಣದ ಚರ್ಚೆ ಹಾಗೂ ತನಿಖೆಯನ್ನು ದಿಕ್ಕು ತಪ್ಪಿಸಲು ಹಾಗೂ ಜನರ ಗಮನ ವಿಚಲಿತಗೊಳಿಸುವ ಕುತಂತ್ರದಿಂದ ಕನ್ನಡ ಪರ ವಿಧೇಯಕವನ್ನು ತಡೆಹಿಡಿದು ಗುರಾಣಿ ಮಾಡಿಕೊಳ್ಳುವ ಹುನ್ನಾರ ನಡೆಸಿದ್ದರೆ ರಾಜ್ಯದ ಜನತೆ ಕಾಂಗ್ರೆಸ್ಸಿಗರನ್ನು ಎಂದಿಗೂ ಕ್ಷಮಿಸರು ಎಂದೂ ಅವರು ಹೇಳಿದ್ದಾರೆ.

**ಮೂರು ಬಾರಿ ಯೂ ಟರ್ನ್**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ವಿಟ್ಟರ್‌ನಲ್ಲಿ ಮೀಸಲಾತಿ ಬಗ್ಗೆ ಮೂರು ಬಾರಿ ಯೂ ಟರ್ನ್ ಹೊಡೆದಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ. ವಿಧೇಯಕ ಸದ್ಯಕ್ಕೆ ಮಂಡಿಸುತ್ತಿಲ್ಲ ಎನ್ನುವ ಅಂಜುಬುರುಕ ನಿರ್ಧಾರದ ಹಿಂದೆ ನಾಡಿನ ಆತ್ಮಗೌರವ, ಕನ್ನಡಿಗರ ಸ್ವಾಭಿಮಾನ ಹಾಗೂ ಕನ್ನಡತನವನ್ನು ಹಿಮ್ಮೆಟ್ಟಿಸುವ ಕರ್ನಾಟಕ ವಿರೋಧಿ ಶಕ್ತಿಗಳ ಲಾಭಿ ಮೇಲುಗೈ ಸಾಧಿಸಿರುವಂತಿದೆ. ಸರ್ಕಾರದ ರಣಹೇಡಿ ನಿರ್ಧಾರವನ್ನು ಖಂಡಿಸುತ್ತೇನೆ ಎಂದಿದ್ದಾರೆ.**

# ಆರ್ಥಿಕ ಸ್ವಾತಂತ್ರ್ಯ ನೀಡಿದ ಬ್ಯಾಂಕ್ ರಾಷ್ಟ್ರೀಕರಣ ದಿನಕ್ಕೆ 56 ರ ಸಂಭ್ರಮ

**(3ನೇ ಪುಟದಿಂದ)** ನಿರುದ್ಯೋಗಿ ವಿದ್ಯಾವಂತರು, ಅನಕ್ಷರಸ್ಥರು, ಆರ್ಥಿಕ ದುರ್ಬಲರು, ಕಾರ್ಮಿಕರು, ದಿನಗೂಲಿಗಳು, ವಿದ್ಯಾರ್ಥಿಗಳು, ಮಹಿಳೆಯರು, ಶೋಷಿತರು, ದಮನಿತರು ಇಂದು ಹೆಮ್ಮೆಯಿಂದ ಬ್ಯಾಂಕಿಂಗ್ ಸೌಲಭ್ಯವನ್ನು ಅನುಭವಿಸುವಂತಾಗಿದೆ ಮತ್ತು ಸೇವೆಯನ್ನು ಪಡೆದುಕೊಳ್ಳುತ್ತಿದ್ದಾರೆ. 'ನಮ್ಮ ದೇಶ-ನಮ್ಮ ಬ್ಯಾಂಕು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಾಗಿದೆ. ಕ್ಲಾಸ್ ಬ್ಯಾಂಕಿಂಗ್ ವ್ಯವಸ್ಥೆ ಮಾಸ್ ಬ್ಯಾಂಕಿಂಗ್ ವ್ಯವಸ್ಥೆಯಾಗಿ ಪರಿವರ್ತಿತವಾಯಿತು. ಇದು ಬ್ಯಾಂಕ್ ರಾಷ್ಟ್ರೀಕರಣದ ಅಪ್ರತಿಮ ಸಾಧನೆ.

**ಸರ್ಕಾರಿ ಬ್ಯಾಂಕುಗಳು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು:**

ಪ್ರಸ್ತುತ ನಮ್ಮ ದೇಶದ ರಾಷ್ಟ್ರೀಕೃತ ಬ್ಯಾಂಕಿಂಗ್ ಕ್ಷೇತ್ರವು ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದೆ. ಯಾವ ಕಾಂಗ್ರೆಸ್ ನೇತೃತ್ವದ ಸರ್ಕಾರ 1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣ ಮಾಡಿತ್ತೋ ಅದೇ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರ 1991ರ ನಂತರದ ವರ್ಷಗಳಲ್ಲಿ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ಮತ್ತು ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಯ ಹೆಸರಿನಲ್ಲಿ 'ರಾಷ್ಟ್ರೀಕರಣ' ನೀತಿಯನ್ನೇ ಬುಡ ಮೇಲಾಗಿಸುವ ಕೆಲಸಕ್ಕೆ ಅಡಿಗಲ್ಲು ಹಾಕಿದ್ದು ದುರಂತ ಎಂತಲೇ ಹೇಳಬಹುದು.

1991 ರ ನಂತರದ ಕಾಲದಲ್ಲಿ ಬಂದಂತಹ ಎಲ್ಲ ಸರ್ಕಾರಗಳು ಬ್ಯಾಂಕ್ ರಾಷ್ಟ್ರೀಕರಣ ನೀತಿಯನ್ನು ಎಷ್ಟು ಸಾಧ್ಯವೋ ಅಷ್ಟು ದುರ್ಬಲಗೊಳಿಸುತ್ತಿವೆ. ಇದು ಖಂಡಿತವಾಗಿಯೂ ಆಕ್ಷೇಪಣೀಯ. ಸರ್ಕಾರೀ ಒಡೆತನದ ಬ್ಯಾಂಕುಗಳಲ್ಲಿನ ಸರ್ಕಾರದ ಬಂಡವಾಳದ ಹಿಂತೆಗೆತ, ಬ್ಯಾಂಕುಗಳಲ್ಲಿ ವಿದೇಶೀ ಬಂಡವಾಳದ ಒಳಹರಿವು, ಖಾಸಗೀಕರಣದ ಹುನ್ನಾರ, ಬ್ಯಾಂಕುಗಳ ಅವೈಜ್ಞಾನಿಕ ವಿಲೀನ ಪ್ರಕ್ರಿಯೆ, ಬ್ಯಾಂಕುಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿಯನ್ನು ಮಾಡದೇ ಇರುವುದು, ಹೊಸ ತಲೆಮಾರಿನ ಗ್ರಾಹಕರ ಅಗತ್ಯಗಳಿಗೆ ತಕ್ಕನಾಗಿ ಸೇವೆಯನ್ನು ಮೇಲ್ದರ್ಜೆಗೆ ಏರಿಸಲು ಅನಗತ್ಯ ವಿಳಂಬ ಮಾಡುತ್ತಿರುವುದು, ಖಾಸಗೀ ಕಂಪನಿಗಳಿಗೆ ಬ್ಯಾಂಕ್‌ಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದು, ಅಂಚೆ ಸೇವೆಯಲ್ಲಿ ವಿಫಲತೆಯನ್ನು ಕಾಣುತ್ತಿರುವ ಅಂಚೆ ಕಛೇರಿಗಳಿಗೆ ಬ್ಯಾಂಕನ್ನು ಆರಂಭಿಸಲು ಅನುಮತಿ ನೀಡಿರುವುದು ಮುಂತಾದ ಹತ್ತು ಹಲವು ರಾಷ್ಟ್ರೀಕರಣ ವಿರೋಧಿ ನೀತಿಯಿಂದಾಗಿ ಇಂದು ದೇಶದ ಸಾರ್ವಜನಿಕ ಸ್ವಾಮ್ಯದ ಬ್ಯಾಂಕಿಂಗ್ ವ್ಯವಸ್ಥೆ ಜರ್ಝರಿತಗೊಂಡಿದೆ. ಇದರ ನಡುವೆ ವಸೂಲಾಗದ ಕೆಟ್ಟ ಸಾಲದ ಪ್ರಮಾಣ ಬೃಹದಾಕಾರ ವಾಗಿ ಬೆಳೆಯುತ್ತಿದೆ. ಇದು ತೀವ್ರ ಆತಂಕಕ್ಕೆ ಕಾರಣವಾಗುತ್ತಿದೆ.

ಸಾಲ ವಸೂಲಾತಿಯು ಕ್ಲುಪ್ತ ಸಮಯದಲ್ಲಿ ಆಗದೇ ಹೋದಲ್ಲಿ ಬ್ಯಾಂಕಿನ ಅನುತ್ಪಾದಕ ಸಾಲದ ಪ್ರಮಾಣ ಹೆಚ್ಚುತ್ತಲೇ ಹೋಗುತ್ತದೆ. ಇದರಿಂದ ಬ್ಯಾಂಕಿನ ಮೇಲೆ ಸಾರ್ವಜನಿಕರಿಗಿರುವ ವಿಶ್ವಾಸಾರ್ಹತೆ ಕುಂಠಿತಗೊಳ್ಳುತ್ತದೆ. 2015 ರವರೆಗೆ ಲಕ್ಷಾಂತರ ಕೋಟಿ ರೂಪಾಯಿಗಳ ಲಾಭವನ್ನು ಗಳಿಸುತ್ತಿದ್ದ ರಾಷ್ಟ್ರೀಕೃತ ಬ್ಯಾಂಕುಗಳು (2015 ರಲ್ಲಿ ದೇಶದ ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟಾರೆ ನಿರ್ವಹಣಾ ಲಾಭ ರೂ.137817.00 ಕೋಟಿಗಳಷ್ಟಿತ್ತು) ಒಮ್ಮಿಂದೊಮ್ಮೆಲೇ ನಷ್ಟವನ್ನು ತೋರಿಸಲು ಆರಂಭಿಸಿದವು. ಇದಕ್ಕೆ ಕಾರಣ ದೇಶದ ಖಾಸಗೀ ಬೃಹತ್ ಬಂಡವಾಳ ಶಾಹಿಗಳು ತಾವು ತೆಗೆದುಕೊಂಡ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಉದ್ದೇಶಪೂರ್ವಕವಾಗಿ ಮರುಪಾವತಿ ಮಾಡದಿರುವುದು. ಸಾಲ ಮರುಪಾವತಿ ಮಾಡಲು ಸಮರ್ಥರಿರುವವರೆ ಸಾಲಮನ್ನಾ, ಬಡ್ಡಿ ಮನ್ನಾ ಮುಂತಾದ ಯೋಜನೆಗಳತ್ತ ಆಸೆಗಣ್ಣುಗಳಿಂದ ನೋಡುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಬ್ಯಾಂಕುಗಳು ಹಾಗೂ ಸರ್ಕಾರಗಳು ಕಳೆದೊಂದು ದಶಕಗಳಲ್ಲಿ ಸುಮಾರು ಲಕ್ಷಾಂತರ ಕೋಟಿಗಳಷ್ಟು ಪ್ರಮಾಣದ ಸಾಲವನ್ನು ಮನ್ನಾ ಮಾಡಿದ್ದಾರೆ. ಇದನ್ನು ಸರ್ಕಾರವೇ ಲೋಕಸಭೆಯಲ್ಲಿ ಒಪ್ಪಿಕೊಂಡಿದೆ. ಬ್ಯಾಂಕುಗಳು ಗಳಿಸುತ್ತಿರುವ ಲಕ್ಷಾಂತರ ಕೋಟಿ ರೂಪಾಯಿಗಳ ಲಾಭಾಂಶವನ್ನು ಖಾಸಗೀ ಬಂಡವಾಳ ಶಾಹಿಗಳು ಲೂಟಿ ಮಾಡುತ್ತಿದ್ದಾರೆ. ಈ ಬೆಳವಣಿಗೆಗಳ ವಿರುದ್ಧ ಮೂರು ಲಕ್ಷಕ್ಕೂ ಹೆಚ್ಚಿನ ಬ್ಯಾಂಕ್ ಉದ್ಯೋಗಿಗಳ ಸದಸ್ಯತ್ವವನ್ನು ಹೊಂದಿರುವ ವಿಶ್ವದ ಅತೀ ದೊಡ್ಡ ಬ್ಯಾಂಕ್ ಕಾರ್ಮಿಕ ಸಂಘಟನೆಯಾದ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (AIBEA) ನಿರಂತರವಾಗಿ ಹೋರಾಟವನ್ನು ಮಾಡಿಕೊಂಡು ಬರುತ್ತಿದೆ. 'ಬ್ಯಾಂಕುಗಳು ಗಳಿಸುವ ಲಾಭವು ದೇಶದ ಜನರ ಕಲ್ಯಾಣಕ್ಕೆ ಬಳಕೆಯಾಗಬೇಕೇ ಹೊರತು ಖಾಸಗೀ ಕಂಪನಿಗಳ ಲೂಟಿಗಾಗಿ ಅಲ್ಲ' ಎನ್ನುವುದು ಸಂಘದ ಧ್ಯೇಯವಾಗಿದೆ. ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ತನ್ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಸಿ.ಹೆಚ್.ವೆಂಕಟಾಚಲಂ ಮತ್ತು ರಾಜ್ಯ ಅಧ್ಯಕ್ಷ ಎಂ.ಎಸ್.ಶ್ರೀನಿವಾಸನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಎಂ.ಜಯನಾಥ್ ಅವರುಗಳ ನೇತೃತ್ವದಲ್ಲಿ ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಉಳಿಸುವುದಕ್ಕಾಗಿ ಹಲವಾರು ಹೋರಾಟಗಳನ್ನು ರೂಪಿಸುತ್ತಿದೆ.

ಕೇಂದ್ರ ಸರ್ಕಾರವು ಸಾಲ ವಸೂಲಾತಿಗಾಗಿ ಕಠಿಣ ಕಾನೂನು ಕ್ರಮಗಳನ್ನು ರೂಪಿಸಬೇಕು, ಸಾಲ ಮರುಪಾವತಿ ಮಾಡದವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕು, ಅವರ ಹೆಸರುಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು, ಅವರ ಆಸ್ತಿಗಳನ್ನು ಬ್ಯಾಂಕುಗಳು ಮುಟ್ಟುಗೋಲು ಹಾಕಿಕೊಳ್ಳಬೇಕು ಎನ್ನುವುದು ಹೋರಾಟದ ಪ್ರಮುಖ ಬೇಡಿಕೆಗಳಾಗಿವೆ.

ದೇಶದ 6,38,000 ಹಳ್ಳಿಗಳ ಪೈಕಿ ಇಂದಿಗೂ ಕೇವಲ 35,000 ಹಳ್ಳಿಗಳಲ್ಲಿ ಮಾತ್ರ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಅಂದರೆ ಪ್ರಸ್ತುತ 20 ಹಳ್ಳಿಗಳಿಗೆ ಒಂದರಂತೆ ಬ್ಯಾಂಕ್ ಶಾಖೆಯ ಸೌಲಭ್ಯವಿದೆ. ಈ ಅಸಮ ತೋಲನವನ್ನು ಹೋಗಲಾಡಿಸಬೇಕಾದರೆ ರಾಷ್ಟ್ರೀಕರಣ ಬ್ಯಾಂಕಿಂಗ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು, ಸದೃಢಗೊಳಿಸಬೇಕು ವಿಸ್ತಾರಗೊಳಿಸಬೇಕು, ಜನ ಸಾಮಾನ್ಯರ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಹೆಚ್ಚಿಸಬೇಕೇ ವಿನಃ ಖಾಸಗೀಕರಣಗೊಳಿಸುವುದಲ್ಲ. ಇದನ್ನು ಕೇಂದ್ರ ಸರ್ಕಾರ ಅರ್ಥ ಮಾಡಿಕೊಂಡು ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳಿಗೆ ಅಗತ್ಯ ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡಬೇಕು. ಜೊತೆಗೆ ಯಾವುದೇ ಹಂತದಲ್ಲೂ ದೇಶದ ಅಭಿವೃದ್ಧಿಗೆ ಸಹಕರಿಸದ, ದೇಶದ ಕಷ್ಟದ ಸಮಯದಲ್ಲಿ ಕೈಜೋಡಿಸದ, ದೇಶದ ಜನರ ಅಗತ್ಯಗಳಿಗೆ ಸ್ಪಂದಿಸದ ಹೊಸ ತಲೆಮಾರಿನ ಖಾಸಗೀ ಬ್ಯಾಂಕುಗಳಿಗೆ ನೀಡುವ ಅನಗತ್ಯ ಪ್ರೋತ್ಸಾಹವನ್ನು ನಿಲ್ಲಿಸಬೇಕಾದ ಅಗತ್ಯವಿದೆ. 'ಬ್ಯಾಂಕಿಂಗ್ ಸೌಲಭ್ಯ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕಾಗಬೇಕು' ಎನ್ನುವುದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಮತ್ತೊಂದು ಪ್ರಮುಖ ಬೇಡಿಕೆಯಾಗಿದೆ. ಈ ಬೇಡಿಕೆ ಸಾಕಾರಗೊಳ್ಳಬೇಕಾದರೆ, ನಮ್ಮ ದೇಶದ ಹೆಮ್ಮೆಯ 'ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆ' ಇನ್ನಷ್ಟು ಸದೃಢವಾಗಿ ನಮ್ಮ ಮುಂದಿನ ಪೀಳಿಗೆಗೆ ಸಿಗುವಂತಾಗಬೇಕಾದರೆ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು (AI-BEA) ನಡೆಸುತ್ತಿರುವ ಹೋರಾಟದಲ್ಲಿ ಬ್ಯಾಂಕ್ ಉದ್ಯೋಗಿಗಳಷ್ಟೇ ಭಾಗಿಗಳಾದರೆ ಸಾಕಾಗದು. 1969 ರಿಂದ ಬ್ಯಾಂಕ್ ರಾಷ್ಟ್ರೀಕರಣದ ಪ್ರಯೋಜನವನ್ನು ಪಡೆದಿರುವ ಸಾರ್ವಜನಿಕರು ಸಹ ಈ ಹೋರಾಟದಲ್ಲಿ ಸಕ್ರಿಯವಾಗಿ ಸ್ವಯಂಪ್ರೇರಿತರಾಗಿ ಪಾಲ್ಗೊಳ್ಳಬೇಕಾದ ಅಗತ್ಯವಿದೆ.

ಬನ್ನಿ... ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳನ್ನು ಇನ್ನಷ್ಟು ಪುನಃಶ್ಚೇತನಗೊಳಿಸಿ, ದೇಶವನ್ನು ಕಟ್ಟುವಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸೋಣ ಮತ್ತು ಬ್ಯಾಂಕ್ ರಾಷ್ಟ್ರೀಕರಣ ವ್ಯವಸ್ಥೆಯನ್ನು ಸಾರ್ಥಕಗೊಳಿಸೋಣ.


**ಶೆಡ್ ಜಾಗ ಮಾರಾಟಕ್ಕೆ**
ಲೋಕಿಕೆರೆ ರೋಡ್, ಇಂಡಸ್ಟ್ರೀಯಲ್ ಏರಿಯಾದಲ್ಲಿ ಶೆಡ್ ಜಾಗ ಮಾರಾಟಕ್ಕೆ ಇದೆ. ಇಂಡಸ್ಟ್ರೀಯಲ್ ಕನ್ವರ್ಷನ್ ಆಗಿದೆ. ಹೆಚ್ಚಿನ ಮಾಹಿತಿಗಾಗಿ ವಿಚಾರಿಸಿ :
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409

**ವರ್ಗಾವಣೆ ಪತ್ರ ಕಳೆದಿದೆ**
ಲೀಲಾ ಬಿ. ಬಿನ್ ಬಸವರಾಜ ಬಿ. ಹೆಸರಿನಲ್ಲಿರುವ 2020-25ರ ಸಾಲಿನ ವರ್ಗಾವಣೆ ಪತ್ರವು ದಿನಾಂಕ 15.6.2024ರಂದು ಡಾಂಗೇ ಪಾರ್ಕ್ ಹತ್ತಿರ, ಜೆರಾಕ್ಸ್ ಮಾಡಿಸುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ಸಂಪರ್ಕಿಸಿ.
96323 56003

**ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಅಡುಗೆ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಸ್ಥಳ : ಕೆ.ಬಿ. ಬಡಾವಣೆ, ಕಾವೇರಮ್ಮ ಶಾಲೆ ಹಿಂಭಾಗ, ಕೆಲಸದ ಸಮಯ : ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ. ಆಸಕ್ತರು ಸಂಪರ್ಕಿಸಿ
ಮೊ. : 98442 94446

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Property Hub**
- EC
- E-swathu
- Building Licence
- Khatha Change
96118 66449

**ಸೈಟ್ ಮಾರಾಟಕ್ಕಿದೆ**
30x36 ದಕ್ಷಿಣ ಮುಖವುಳ್ಳ ಸೈಟ್ ಗ್ಲಾಸ್ ಹೌಸ್ ಹತ್ತಿರ, ಲೊಕೋಷನ್ ಚೆನ್ನಾಗಿದೆ.
99862 34416

**ಬೇಕಾಗಿದ್ದಾರೆ**
ಸಪ್ಲೈಯರ್ ಹಾಗೂ ಕೌಂಟರ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಿದ್ದಗಂಗಾ ಹೋಟೆಲ್
ದಾವಣಗೆರೆ. ಸಂಪರ್ಕಿಸಿ :
70190 73163

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**WANTED**
- Salesman
- ITI Fitter
attractive salary with PF and ESI
Ambika Furniture,
843, Ashoka Road, Davanagere-577002
88844 88092, 99167 93795

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ (ಟಾಪ್ ಲೊಕೇಶನ್) 50x80 ಪಶ್ಚಿಮ (ರೂ. 2460 ಅಡಿಗೆ) 40x60 ದಕ್ಷಿಣ (ರೂ. 60 ಲಕ್ಷ) 40x60 ಪಶ್ಚಿಮ (ರೂ. 62 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿ ವ್ಯಾಪಾರ. ಕೇವಲ (1/2%) ಅರ್ಧ ಪರ್ಸೆಂಟ್ ಕಮಿಷನ್ ನನ್ನದು

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಟೀಂ ಅಕಾಡೆಮಿ ಕಾಲೇಜ್ ಹತ್ತಿರ
30x40 ಪೂರ್ವ, 30x50 ಪೂರ್ವ, 30x40 ಪಶ್ಚಿಮ, 30x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
(ಭೀಮಸಮುದ್ರದ ಗೋಟು)
ಸಂಪರ್ಕಿಸಿ :
63601 25657

**ಬೇಕಾಗಿದ್ದಾರೆ**
ಪಿಯುಸಿ ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**TUITIONS PCMB/CS**
5th Std to 10th Std Science, Maths
ಸಮೃದ್ಧಿ ಅಕಾಡೆಮಿ
96202 62361

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಯುವಕ-ಯುವತಿಯರಿಗೆ ಒಂದು ಸದಾವಕಾಶ
ವಯೋಮಿತಿ : 20-35 ವರ್ಷ
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.
ಕೆಲಸದ ವಿವರ : ಚಿಕಿತ್ಸಾ ವಿಭಾಗಕ್ಕೆ ಥೆರಪಿಸ್ಟ್
(45 ದಿನಗಳ ಟ್ರೈನಿಂಗ್ ಉಚಿತವಾಗಿ ಕೊಟ್ಟು ತದನಂತರ ನಮ್ಮಲ್ಲೆ ಸರ್ಟಿಫಿಕೇಟ್ ಕೊಟ್ಟು ಸಂಬಳ ನೀಡಲಾಗುವುದು)
ಹೆಚ್ಚಿನ ಮಾಹಿತಿಗಾಗಿ
8618642929, 08192-252228

**FLAT FOR SALE**
2BHK, SQ.FT : 1325
Flat for Lease, 3 BHK, SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

ಶ್ರೀ ಗುರು ಮರುಳಸಿದ್ಧೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿರುವ ಹೋಟೆಲ್‌ಗೆ ಅಡುಗೆ ಕೆಲಸಗಾರರು ಬೇಕಾಗಿದ್ದಾರೆ.
ಸಂಪರ್ಕಿಸಿ :
94487 53131

**ದೊಡ್ಡಓಬಜ್ಜಿಹಳ್ಳಿ 11 ಗುಂಟೆ ಜಮೀನು ಮಾರಾಟಕ್ಕೆ ಇದೆ.**
(ಊರಿಗೆ ಲಗತ್ತು)
98447 42251

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಬಿಲ್ಡಿಂಗ್ ಎಲೆಕ್ಟ್ರಿಕಲ್ ಪ್ಲಂಬಿಂಗ್ & ಸೆಕ್ಯೂರಿಟಿ ಸ್ವಲ್ಪ ಅನುಭವ ಇರುವ ಹುಡುಗ ಬೇಕಾಗಿದ್ದಾರೆ. ಸಂಬಳ 10.000/- ದಿಂದ 14,000/- ಊಟಕ್ಕೆ 2000 ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
97400 98047

**ಶಿಕ್ಷಕಿಯರು ಬೇಕಾಗಿದ್ದಾರೆ**
1) ಬಿಎ., ಬಿ.ಇಡಿ - 02
2) ಬಿ.ಎಸ್ಸಿ., ಪಿಸಿಎಂ ಅಥವಾ ಬಿ.ಎಸ್ಸಿ. ಬಿ.ಇಡಿ - 02, 3) ಡಿ.ಇಡಿ. - 02
ಜ್ಞಾನದೀಪ ಪಬ್ಲಿಕ್ ಸ್ಕೂಲ್
ನಿಟುವಳ್ಳಿ, ದಾವಣಗೆರೆ,
ಕಾರ್ಯದರ್ಶಿಗಳು
94496 79346, 89710 18943

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ತಾಜ್ ಪ್ಯಾಲೇಸ್ ಹತ್ತಿರ ಬೂದಿಹಾಳು ರಸ್ತೆ ಸೈಟುಗಳು ಮಾರಾಟಕ್ಕಿವೆ**
NA ಸೈಟುಗಳು
(15x40, 20x30, 30x40)
78925 68692

**ಮಳಿಗೆ ಬಾಡಿಗೆಗೆ ಇದೆ**
20x40 ಅಳತೆಯ ಮಳಿಗೆ 8HP ಪವರ್ ಇದೆ ಹಾಗೂ ಮೊದಲನೇ ಮಹಡಿ 2 BHK ಆಫೀಸ್‌ಗೆ ಬಾಡಿಗೆಗೆ ಇದೆ. (ಆರಾಧ್ಯ ಪ್ರಿಂಟರ್ಸ್) ಅಶೋಕ ರಸ್ತೆ, ಭೀಮ ಲಾಡ್ಜ್ ಹಿಂಭಾಗ, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.
98440 44187

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ : PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಚ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(ರೂ. 1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**NOW HIRING:**
Female Office Assistant
Responsibilities: Maintaining the office, handling xerox and online services.
Qualification: 2nd PUC qualification, female, under 25 years old, and basic computer and typing skills are a plus. Salary: INR 12,000/month with performance-based increments. Apply Now: Contact
+91 96868 30756

**SINGAPORE & MALAYSIA**
06 Days, Date : 10th August 2024, Rs. 97990/- P.P.
DUBAI (05 Days)
Date : 12ht Oct 2024 & Rs. 89990/- P.P.
Vietnam & Combodia,
10 Days Date : 18th Oct 2024
Rs. 157000/- P.P. Conact : Dvg World Tours:
99006 66122


**ನಿಮಗೆ ಮಂಡಿನೋವು ಇದೆಯೇ ?**
ಪ್ರತಿ ಬುಧವಾರ ಮತ್ತು ಶನಿವಾರ ಬೆಂಗಳೂರಿನ ಖ್ಯಾತ ವೈದ್ಯರಾದ ಡಾ॥ ಅನಿಲ್ ಕುಮಾರ್ ಅವರು ಗ್ವಾಸಾಥೆರಪಿ ಹಾಗೂ ಥೆರೇಸ್ ಥೆರಪಿ ಆಹಾರ ಪದ್ಧತಿ ಮೂಲಕ ಚಿಕಿತ್ಸೆ ನೀಡುವರು.
ಪುನಃಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 99169 33905

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
- ರೆಸ್ಟೋರೆಂಟ್ ಮ್ಯಾನೇಜರ್
- ಕುಕ್ಸ್ • ಹೆಲ್ಪರ್
- ಬಿಲ್ಲಿಂಗ್ ಕಂಪ್ಯೂಟರ್ಸ್
- ಸಪ್ಲೈಯರ್ಸ್ • ಕ್ಯಾಪ್ಟನ್

ಅನುಭವವುಳ್ಳವರಿಗೆ ಆಕರ್ಷಕ ಸಂಬಳ
99726 98591
94490 37488

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ 60x40 ಅಳತೆಯ ಮನೆ 'ಬಿ' ಬ್ಲಕ್‌ನಲ್ಲಿ ಮಾರಾಟಕ್ಕಿದೆ. ವಿಚಾರಿಸಿ :
97425 37448

**WANTED**
Urban money
(Corporate loan DSA) is looking for a Sales professional
- Tele sales executive - 4
- Relationship manager - 5
- Sales manager -1
- Backend team (Operations) - 1

Contact
Santhosh, 99805 70746

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟ್ ಡಿಸಿ ಆಫೀಸ್ ಹತ್ತಿರ, ಕರೂರು ರಸ್ತೆಗೆ ಹೊಂದಿಕೊಂಡಿರುವ ಸೈಟ್‌ಗಳು ಮಾರಾಟಕ್ಕಿವೆ.
(ಅಳತೆ 30x40, 30x50)
78925 68692

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
70195 12416


**ತಿದ್ದುಪಡಿ**
ದಿನಾಂಕ : 18.07.2024ರ ಗುರುವಾರದ 'ಜನತಾವಾಣಿ' ಸಂಚಿಕೆಯ ಮೂರನೇ ಪುಟದಲ್ಲಿ ಪಿ ಅಂಡ್ ಎಸ್. ಸಿ ನಂ. 29/2024 ಕ್ಕೆ ಸಂಬಂಧಪಟ್ಟಂತೆ, ಗೌರವಾನ್ವಿತ ಒಂದನೇ ಹೆಚ್ಚುವರಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ ಎಂದು ಪ್ರಕಟವಾಗಿದ್ದು, ಅದನ್ನು ಗೌರವಾನ್ವಿತ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ ಎಂದು ತಿದ್ದಿ ಓದಿಕೊಳ್ಳಬೇಕೆಂತ ಮನವಿ.
ಹೆಚ್. ದಿವಾಕರ್, ವಕೀಲರು, ದಾವಣಗೆರೆ.

# ಕೃಷಿ ಅರಣ್ಯ ಪದ್ಧತಿಗೆ ವೈಪರೀತ್ಯ ತಡೆವ ಸಾಮರ್ಥ್ಯ

## ರಾಜಗೊಂಡನಹಳ್ಳಿಯಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಡಾ. ಟಿ.ಎನ್. ದೇವರಾಜ್



ಚನ್ನಗಿರಿ,ಜು.18- ಭವಿಷ್ಯದಲ್ಲಿ ಸುಸ್ಥಿರ ಕೃಷಿಗೆ ಕೃಷಿ ಅರಣ್ಯ ಪದ್ಧತಿಯು ಮಹತ್ವದ ಪಾತ್ರವಹಿಸುತ್ತದೆ ಎಂದು ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಹೇಳಿದರು.

ಚನ್ನಗಿರಿ ತಾಲ್ಲೂಕು ರಾಜಗೊಂಡನಹಳ್ಳಿ ತಾಂಡಾದಲ್ಲಿ ಆಯೋಜಿಸಿದ್ದ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ 96ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಸಿ ನೆಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತೀ ವರ್ಷವೂ ಒಂದಿಲ್ಲೊಂದು ಹವಾಮಾನ ವೈಪರೀತ್ಯಕ್ಕೆ ಕೃಷಿ ಕ್ಷೇತ್ರ ತೊಂದರೆಗೀಡಾಗುತ್ತಿದ್ದು, ಕೃಷಿ ಅರಣ್ಯ ಪದ್ಧತಿಯು ಈ ವೈಪರೀತ್ಯಗಳನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ಹೊಂದಿದೆ ಹಾಗೂ ರೈತರಿಗೆ ಸುಸ್ಥಿರ ಆದಾಯ ತರುವ ಸಾಮರ್ಥ್ಯ ಹೊಂದಿದೆ ಎಂದರು.

ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರದ ಉತ್ಪಾದಕತೆ ಹೆಚ್ಚಿಸುವ ನಿಟ್ಟಿನಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ತಾಂತ್ರಿಕತೆಗಳು ಮಹತ್ತರ ಪಾತ್ರ ವಹಿಸಿದ್ದು, ಕಳೆದ 96 ವರ್ಷಗಳ ಇದರ ಕೊಡುಗೆ ಅವಿಸ್ಮರಣೀಯ ಎಂದು ತಿಳಿಸಿದರು.

ಚನ್ನಗಿರಿ ತಾಲೂಕು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಅರುಣ್ ಕುಮಾರ್ ಮಾತನಾಡಿ, ಸರ್ಕಾರದ ವಿವಿಧ ಯೋಜನೆಗಳನ್ನು ಬಳಸಿಕೊಂಡು ವೈವಿಧ್ಯಮಯ ಕೃಷಿ ಪದ್ಧತಿಗಳನ್ನು ಹಾಗೂ ಸಮಗ್ರ ಕೃಷಿ ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ರೈತರಿಗೆ ಕರೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯ ಉಮೇಶ್ ನಾಯಕ್, ಸರ್ಕಾರದ ಯೋಜನೆಗಳನ್ನು ತಮ್ಮ ತಾಂಡಾಕ್ಕೆ ತಂದಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವತಿ ಯಿಂದ ಪರಿಶಿಷ್ಟ ಜಾತಿಯ ವಿಶೇಷ ಕಾರ್ಯಕ್ರಮದಡಿ 700 ತೆಂಗಿನ ಸಸಿಗಳನ್ನು ರೈತರಿಗೆ ಉಚಿತವಾಗಿ ವಿತರಿಸ ಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿಗಳಾದ ರಘುರಾಜ ಜೆ, ಸಣ್ಣಗೌಡ್ರ, ಕೃಷಿ ಅಧಿಕಾರಿ ಮೆಹತಾಬ್ ಅಲಿ, ರೈತ ಮುಖಂಡರಾದ ಆನಂದ ನಾಯಕ್, ವೀರಭದ್ರ ನಾಯಕ್, ರುದ್ರ ನಾಯಕ್, ನಾಗರಾಜ್, ಕೃಷಿ ಸಖಿ ರಂಜಿತಾಬಾಯಿ, ಪಶುಸಖಿ ಮಧುಬಾಯಿ ಮುಂತಾದವರು ಭಾಗವಹಿಸಿದ್ದರು.



# ಎಸ್.ಎಸ್. ಕೇರ್ ಟ್ರಸ್ಟ್ ವಿದ್ಯಾರ್ಥಿ ವಿಭಾಗದ ಉದ್ಘಾಟನೆ

ದಾವಣಗೆರೆ, ಜು.17- ನೂತನ ಎಸ್.ಎಸ್. ಕೇರ್ ಟ್ರಸ್ಟಿನ ವಿದ್ಯಾರ್ಥಿ ವಿಭಾಗವು ಟ್ರಸ್ಟಿನ ಸಕ್ರಿಯ ಯೋಜನೆಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಜೆಜೆಎಂ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಎಸ್.ಎಸ್. ಕೇರ್ ಟ್ರಸ್ಟ್ ವಿದ್ಯಾರ್ಥಿ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

2017 ರಿಂದ ಪ್ರಾರಂಭವಾದ ಆರೋಗ್ಯ ಶಿಬಿರದಂತಹ ಸಾಮಾಜಿಕ ಸೇವೆ ಎಲ್ಲರ ಮನ ಗೆದ್ದಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಘಟಕವು ನಿಯೋಜಿಸಿಕೊಂಡ ವಾರ್ಷಿಕ ಯೋಜನೆ ಯಶಸ್ವಿಯಾಗುವಂತೆ ಶ್ರಮವಹಿಸಲು ಮನವಿ ಮಾಡಿದರು.

ಟ್ರಸ್ಟಿನ ವಿದ್ಯಾರ್ಥಿ ವಿಭಾಗದ ಪದಾಧಿಕಾರಿಗಳು ಉತ್ತಮ ನಾಯಕತ್ವ ಬೆಳೆಸಿಕೊಳ್ಳುವ ಜತೆಗೆ ತಮ್ಮ ಕಾರ್ಯವನ್ನು ಜವಾಬ್ದಾರಿಯುತವಾಗಿ ನಿಭಾಯಿಸುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜೆಜೆಎಂ ಕಾಲೇಜಿನ ಪ್ರಾಧ್ಯಾಪಕ ಮೂಗನಗೌಡ ಪಾಟೀಲ್ ಮಾತನಾಡಿ, ಪ್ರಭಾ ಮಲ್ಲಿಕಾರ್ಜುನ್ ಅವರ ನಾಯಕತ್ವದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ನಗರ ಪ್ರದೇಶಕ್ಕಷ್ಟೇ ಸೀಮಿತವಾಗದೆ. ಗ್ರಾಮಾಂತರ ಪ್ರದೇಶದಲ್ಲೂ ಆರೋಗ್ಯ ಶಿಬಿರದ ಸೇವೆ ನೀಡುತ್ತಿರುವುದನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಜೆಜೆಎಂ ಕಾಲೇಜಿನ ಪ್ರಾಚಾರ್ಯರಾದ ಡಾ. ಶುಕ್ಲಾ ಶೆಟ್ಟಿ, ಎಸ್.ಎಸ್. ಹೈಟೆಕ್ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಸಾದ್, ಪ್ರಾಧ್ಯಾಪಕರಾದ ಡಾ. ಜಿ.ಎಸ್.ಲತಾ, ಶಾಂತಲಾ ಅರುಣ್ ಕುಮಾರ್, ಶುಭಾ, ಎಸ್.ಅಶ್ವಿನಿ, ವಿದ್ಯಾರ್ಥಿ ವಿಭಾಗದ ಅಧ್ಯಕ್ಷ ಓಂ ದುಬೆ ಮತ್ತಿತರರಿದ್ದರು.

# ಶಾಸನ ಕಠಿಣವಾಗಿದ್ದರೂ ಕೋರ್ಟ್ ಜಾಮೀನಿಗೆ ಅಡ್ಡಿಯಿಲ್ಲ : ಸುಪ್ರೀಂ

ನವದೆಹಲಿ, ಜು. 18 - ಶಾಸನಗಳಲ್ಲಿ ನಿರ್ಬಂಧ ಇರುವುದು ಸಂವಿಧಾನಿಕ ನ್ಯಾಯಾಲಯಗಳು ಜಾಮೀನು ನೀಡಲು ಅಡ್ಡಿಯಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಯುಎಪಿಎ ಅನ್ವಯ ಬಂಧಿತ ವ್ಯಕ್ತಿಗೆ ಜಾಮೀನು ನೀಡುವಾಗ ನ್ಯಾಯಾಲಯ ಈ ನಿಲುವು ತಳೆದಿದೆ.

ಸಂವಿಧಾನದ 21ನೇ ವಿಧಿ ಅನ್ವಯ ನೀಡಲಾಗಿರುವ ಜೀವನ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು ಹೆಚ್ಚಿನದು ಹಾಗೂ ಪವಿತ್ರವಾದದ್ದು ಎಂದು ನ್ಯಾಯಮೂರ್ತಿಗಳಾದ ಉಜ್ವಲ್ ಭುಯಾನ್ ಹಾಗೂ ಜೆ.ಬಿ. ಪರ್ಡಿವಾಲ ಅವರನ್ನು ಒಳಗೊಂಡ ಪೀಠ ಹೇಳಿದೆ.

ಶಾಸನಗಳಲ್ಲಿನ ಅಂಶಗಳ ಕಾರಣಕ್ಕಾಗಿ ಜಾಮೀನು ನೀಡುವ ವಿಷಯದಲ್ಲಿ ಸಂವಿಧಾನಿಕ ಪೀಠವನ್ನು ನಿರ್ಬಂಧಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನೇಪಾಳದ ನಿವಾಸಿ ಶೇಖ್ ಜಾವೇದ್ ಇಕ್ಬಾಲ್ ಅವರಿಗೆ ಜಾಮೀನು ನೀಡುವಾಗ ನ್ಯಾಯಾಲಯ ಈ ನಿಲುವು ತಳೆದಿದೆ. ನೇಪಾಳದಲ್ಲಿ ಭಾರತದ ನಕಲಿ ನೋಟಿನ ವ್ಯಾಪಾರ ಮಾಡುತ್ತಿದ್ದ ಆರೋಪದ ಮೇಲೆ ಇಕ್ಬಾಲ್ ಬಂಧಿಸಲಾಗಿತ್ತು.

ಆತನ ಪರವಾಗಿ ಹಾಜರಿದ್ದ ವಕೀಲ ಎಂ.ಎಸ್. ಖಾನ್, ಆರೋಪಿ 9 ವರ್ಷಗಳಿಂದ ವಶದಲ್ಲಿದ್ದಾನೆ. ನಿಕಟ ಭವಿಷ್ಯದಲ್ಲಿ ವಿಚಾರಣೆ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ. ಹೀಗಾಗಿ ಜಾಮೀನು ನೀಡಬೇಕು ಎಂದು ಮನವಿ ಮಾಡಿಕೊಂಡಿದ್ದರು.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಜಾಮೀನು ವಿರೋಧಿಸಿ, ಈ ಪ್ರಕರಣದಲ್ಲಿ ಆರೋಪಗಳು ಗಂಭೀರವಾಗಿವೆ. ಆರೋಪಿ ವಿದೇಶಿ ನಾಗರಿಕ, ಆತ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಜಾಮೀನು ನೀಡಬಾರದು. ವಿಚಾರಣಾ ನ್ಯಾಯಾಲಯ ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸುವಂತೆ ತಿಳಿಸಬೇಕು ಎಂದು ಕೋರಿದರು.

ವಿಚಾರಣೆ ಆಮೆ ವೇಗದಲ್ಲಿ ಸಾಗುತ್ತಿದೆ, ನಿಕಟ ಭವಿಷ್ಯದಲ್ಲಿ ವಿಚಾರಣೆ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ. ಆರೋಪ ಗಂಭೀರವಾಗಿದೆ ಎಂಬ ಕಾರಣಕ್ಕಾಗಿ ಜಾಮೀನು ನಿರಾಕರಿಸಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿತು.

# ಉಜ್ವಲ ಭವಿಷ್ಯಕ್ಕಾಗಿ ಮಕ್ಕಳನ್ನು ಶಾಲೆಗೆ ದಾಖಲು ಕರೆ

ದಾವಣಗೆರೆ, ಜು. 18 - ದೇಶದ ಅಭಿವೃದ್ದಿಗೆ ಶಿಕ್ಷಣವೇ ತಳಹದಿ, ಎಲ್ಲಾ ಮಕ್ಕಳು ಶಿಕ್ಷಣ ಪಡೆಯ ಬೇಕೆಂಬುದು ಸರ್ಕಾರ ಹಾಗೂ ಇಲಾಖೆ ಗುರಿಯಾಗಿದ್ದು, ಈ ನಿಟ್ಟಿನಲ್ಲಿ ಇದೇ ದಿನಾಂಕ 31 ರವರೆಗೆ ವಿಶೇಷ ದಾಖಲಾತಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಪ್ರವೇಶ ಕಲ್ಪಿಸಬೇಕೆಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದ್ದಾರೆ.




ಶಿಕ್ಷಣ ವಂಚಿತ ಮಕ್ಕಳು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು ಎಂಬುದನ್ನು ಸಾಕ್ಷೀಕರಿಸಲು ಸರ್ಕಾರ, ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಸಂಘ-ಸಂಸ್ಥೆಗಳು ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಆಂದೋಲನಗಳ ಮೂಲಕ ಪೋಷಕರು ಮತ್ತು ಸಮುದಾಯಕ್ಕೆ ಜಾಗೃತಿಯ ಅರಿವನ್ನು ಮೂಡಿಸಬೇಕು.

ಶಿಕ್ಷಣ ವಂಚಿತ ಮತ್ತು ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರಲು ಮತ್ತು ಆ ಮಕ್ಕಳನ್ನು ಉಚಿತ ಹಾಗೂ ಕಡ್ಡಾಯ ಶಿಕ್ಷಣದ ವ್ಯಾಪ್ತಿಗೆ ಒಳಪಡಿಸುವುದು ನಮ್ಮ ಆದ್ಯತೆಯಾಗಿ ರುವುದರಿಂದ ಈ ಆಂದೋಲನದ ಅಡಿಯಲ್ಲಿ ಶಾಲಾ ಶಿಕ್ಷಕರು, ಶಿಕ್ಷಣಾಸಕ್ತರು, ಜನಪ್ರತಿನಿಧಿಗಳು, ಮುಖಂಡರು, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಶಾಲಾ ಮಕ್ಕಳೊಂದಿಗೆ ಗ್ರಾಮಗಳಲ್ಲಿ ಮತ್ತು ವಾರ್ಡ್ ಗಳಲ್ಲಿ ಬ್ಯಾನರ್‌ಗಳೊಂದಿಗೆ ಜಾಥಾ ನಡೆಸಿ, ಘೋಷಣೆಗಳ ಮುಖಾಂತರ ಸಮುದಾಯದಲ್ಲಿ ಜಾಗೃತಿಯ ಅರಿವನ್ನು ಮೂಡಿಸ ಬೇಕಿರುವುದು ಇಂದಿನ ತುರ್ತು ಕಾರ್ಯವಾಗಿದೆ.

ಈ ನಿಟ್ಟಿನಲ್ಲಿ ಶಾಲೆಯನ್ನು ಬಿಟ್ಟಿರುವ ಮಕ್ಕಳ ಪೋಷಕರೊಂದಿಗೆ ವಲಸೆ ಬಂದ ಕುಟುಂಬಗಳ ಮುಖ್ಯಸ್ಥರೊಂದಿಗೆ ಮತ್ತು ದಿನಗೂಲಿ ಮಾಡುತ್ತಿರುವ ಮಕ್ಕಳು ಕಂಡುಬಂದಲ್ಲಿ ಅವರ ಮಾಲೀಕರ ಜೊತೆ ಸಮಾಲೋಚಿಸಿ ಮಕ್ಕಳನ್ನು ಹತ್ತಿರದ ಶಾಲೆಗಳಿಗೆ ಸೇರಿಸಲು ಮನವೊಲಿಕೆ ಮಾಡಲು ಸಾರ್ವಜನಿಕರಲ್ಲಿ ಕೋರಿದೆ. ಜೊತೆಗೆ ಬಾಲ್ಯ ವಿವಾಹ, ಅನಾರೋಗ್ಯ ಹಾಗೂ ಇನ್ನಿತರೆ ಕಾರಣಗಳಿಂದ ಶಾಲೆ ಬಿಟ್ಟಿದ್ದಲ್ಲಿ, ಅಂತಹವರನ್ನು ಗುರುತಿಸಿ ಶಾಲಾ ವ್ಯಾಪ್ತಿಗೆ ಕರೆ ತರಲು ಶಿಕ್ಷಣ ಇಲಾಖೆ, ಮಹಿಳಾ ಮತ್ತು ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಒಳಗೊಂಡು ಈ ಕೆಲಸ ಮಾಡಬೇಕೆಂದು ಸಂಸದರು ತಿಳಿಸಿದ್ದಾರೆ.

# ಸರ್ಕಾರಿ ಶಾಲೆಗೆ ಜಮೀನು ದಾನ ಮಾಡಿದ್ದ ಮೊಹ್ಮದ್ ಯಾಕೂಬ್ ಸಾಬ್ ನಿಧನ



ದಾವಣಗೆರೆ, ಜು.18- ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ನಿವೃತ್ತ ಮುಖ್ಯ ಇಂಜಿನಿಯರ್ ಅಲ್ಹಾಜ್ ಕೆ. ಮೊಹ್ಮದ್ ಯಾಕೂಬ್ ಸಾಬ್ ಅವರು ತಮಗೆ ಸೇರಿದ್ದ ಜಮೀನನ್ನು ಶಾಲೆಗೆ ದಾನ ಮಾಡುವುದರ ಮೂಲಕ ಶಿಕ್ಷಣ ಪ್ರೇಮ ಮೆರೆದಿದ್ದಾರೆ.

ನಗರದ ಎಂ.ಸಿ. ಕಾಲೋನಿ 'ಬಿ' ಬ್ಲಾಕ್ ಈಜುಕೊಳದ ಹತ್ತಿರದಲ್ಲಿ ವಾಸವಾಗಿದ್ದ ಅವರು, ತಮ್ಮ ಹೆಸರಿನಲ್ಲಿದ್ದ ಸುಮಾರು 1 ಕೋಟಿ ರೂ. ಬೆಲೆ ಬಾಳುವ ಜಮೀನಿನನ್ನು ಸಂತೇಬೆನ್ನೂರಿನ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಗೆ ದಾನ ಮಾಡಿರುವುದು ಶ್ಲಾಘನೀಯ.

ಸಂತೇಬೆನ್ನೂರಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮನವಿಗೆ ಸ್ಪಂದಿಸಿದ ಮೊಹ್ಮದ್ ಯಾಕೂಬ್ ಸಾಬ್ ಅವರು, ವಿದೇಶದಲ್ಲಿರುವ ತಮ್ಮ ಪುತ್ರರನ್ನು ಸ್ವದೇಶಕ್ಕೆ ಕರೆಸಿಕೊಂಡು ಜಮೀನನ್ನು ಶಾಲೆ ಹೆಸರಿಗೆ ನೋಂದಣಿ ಮಾಡಿಸಿಕೊಡುವುದರೊಂದಿಗೆ ಮಾದರಿಯಾಗಿದ್ದಾರೆ.

ಮೊಹ್ಮದ್ ಯಾಕೂಬ್ ಸಾಬ್ ಅವರು ನಿನ್ನೆ ನಿಧನರಾಗಿದ್ದು, ಅವರ ಅಂತ್ಯಕ್ರಿಯೆಯು ಇಂದು ಬೆಳಿಗ್ಗೆ ಸ್ಥಳೀಯ ಹಳೇ ಖಬರಸ್ತಾನದಲ್ಲಿ ನೆರವೇರಿತು. ಮೃತರ ನಿವಾಸಕ್ಕೆ ಆಗಮಿಸಿದ್ದ ಗಣ್ಯರು, ಬಂಧುಗಳು ಅವರ ಅಂತಿಮ ದರ್ಶನ ಪಡೆದು, ಅವರ ವ್ಯಕ್ತಿತ್ವ, ದಾನ - ಧರ್ಮ, ಸಾಮಾಜಿಕ ಸೇವೆಯನ್ನು ಕೊಂಡಾಡಿದರು.

# ವಿಶ್ವ ಮಧ್ವ ಪರಿಷತ್ತಿನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು.18- ವಿಶ್ವ ಮಧ್ವ ಮಹಾಪರಿಷತ್ ವತಿಯಿಂದ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ಶೇ.90 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ನಗರದ ಪಿ.ಜೆ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪರಿಷತ್ ಶಾಖೆಯಲ್ಲಿ ಅರ್ಜಿ ಲಭ್ಯವಿದ್ದು, ಇದೇ ದಿನಾಂಕ 25 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ 9900153953, 9481865146 ಸಂಪರ್ಕಿಸಿ.

# ಶ್ರೀ ರಾಮ ಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಎಲ್ಲೋ ಡೇ

ದಾವಣಗೆರೆ, ಜು. 18 - ನಗರದ ಶ್ರೀ ರಾಮಕೃಷ್ಣ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಎಲ್ಲೋ ಡೇ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳು ಹಳದಿ ಬಣ್ಣದ ವಿವಿಧ ಉಡುಪುಗಳನ್ನು ಧರಿಸಿ, ಮಾವಿನ ಹಣ್ಣು, ಬಾಳೆಹಣ್ಣು, ಪೈನಾಪಲ್ ಹಾಗೂ ಮುಂತಾದ ಹಣ್ಣು, ತರಕಾರಿಗಳ ವೇಷ ಹಾಕಿ ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಡಿ.ಸಿ. ಸುರೇಶ್, ಸಹ ಶಿಕ್ಷಕಿಯರಾದ ಶೋಭಾ ಹುಲ್ಲುಮನಿ, ಕಾವ್ಯ, ಆಶಾ, ಮಹಾಲಕ್ಷ್ಮಿ, ಅನಿತಾ, ಶ್ರೀದೇವಿ, ತನುಶ್ರೀ, ಕರಿಬಸಮ್ಮ, ವಿದ್ಯಾರ್ಥಿ - ವಿದ್ಯಾರ್ಥಿನಿಯರು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



# ಸರ್ಕಾರಿ ನೌಕರರ ಒಕ್ಕೂಟಕ್ಕೆ ನೇಮಕ



ಮಲೇಬೆನ್ನೂರು, ಜು.18- ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅನುದಾನಿತ ಶಾಲಾ ನೌಕರರ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷರನ್ನಾಗಿ ದೈಹಿಕ ಶಿಕ್ಷಕ ಕುಂಬಳೂರಿನ ಕೆ.ಭೀಮಪ್ಪ ಅವರನ್ನು ರಾಜಾಧ್ಯಕ್ಷ ಹೆಚ್.ಎಸ್. ಜೈಕುಮಾರ್ ನೇಮಕ ಮಾಡಿದ್ದಾರೆ.

ಉಪಾಧ್ಯಕ್ಷರಾಗಿ ಮಾಜಿ ಗೌಡ್ರು, ಕಾರ್ಯದರ್ಶಿಯಾಗಿ ಇರ್ಷದ್ ಅಲಿ ಸಹ ಕಾರ್ಯದರ್ಶಿಯಾಗಿ ಶಿವಪ್ಪ ಮಾಳಗಿ, ಖಜಾಂಚಿಯಾಗಿ ಜಿಗಳಿ ನಾಗರಾಜ್, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಇಷರತ್ ಅಲಿ, ಸಂಘಟನಾ ಕಾರ್ಯದರ್ಶಿಯಾಗಿ ಶೀತವ್ವ ಪಾಟೀಲ್, ಸಂಚಾಲಕರಾಗಿ ಕೆ. ಬಸವರಾಜ್, ಹಿರಿಯ ಸದಸ್ಯರಾಗಿ ತುಕಾರಾಮ್ ಅವಪಾಡೆ ನೇಮಕ ಗೊಂಡಿದ್ದಾರೆ.

## ನಾಳೆ ಭಾವಸಾರ ಕ್ಷತ್ರಿಯ ದೈವ ಮಂಡಳಿ ಸಭೆ

ದಾವಣಗೆರೆ, ಜು. 18- ಇಲ್ಲಿನ ಮಹಾರಾಜ ಪೇಟೆಯ ಭಾವಸಾರ ಕ್ಷತ್ರಿಯ ದೈವ ಮಂಡಳಿಯ ಸರ್ವ ಸದಸ್ಯರ ಮಹಾಸಭೆಯನ್ನು ನಾಡಿದ್ದು ದಿನಾಂಕ 20ರ ಶನಿವಾರ ಸಂಜೆ 5 ಗಂಟೆಗೆ ಕರೆಯಲಾಗಿದೆ.

## 33ನೇ ವಾರ್ಡ್‌ನಲ್ಲಿ ಜಾಗ ಒತ್ತುವರಿಯಾಗಿಲ್ಲ : ಸ್ಪಷ್ಟನೆ

ದಾವಣಗೆರೆ, ಜು. 18- ಇಲ್ಲಿನ 33ನೇ ವಾರ್ಡ್‌ನಲ್ಲಿ ಪಾರ್ಕ್ ಪಕ್ಕದ ವಾಹನ ನಿಲುಗಡೆ ಜಾಗ ಒತ್ತುವರಿಯಾಗಿದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂದು ವಿದ್ಯಾನಂದನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಬಿ.ವಿ. ಕುಸುಮ ಸ್ಪಷ್ಟಪಡಿ ಸಿದ್ದಾರೆ. ವಿದ್ಯಾಸಂಸ್ಥೆಯವರು ಜಾಗ ಒತ್ತುವರಿ ಮಾಡಿದ್ದಾರೆ ಎಂದು ಪಿ.ರುದ್ರೇಶ್ ಮಾಡಿರುವ ಆರೋಪವನ್ನು ಅವರು ಅಲ್ಲಗಳೆದಿದ್ದಾರೆ. ಇಲ್ಲಿನ 3 ಮೀಟರ್ ಜಾಗ ಶಾಲೆಗಾಗಿಯೇ ಬಿಟ್ಟಿರುವ ಪಾತ್‌ವೇ ಜಾಗವಾಗಿದೆ. ಅದರಾಚೆಗೆ ಪಾರ್ಕ್ ಇದೆ. ಈ ಬಗ್ಗೆ ದಾಖಲೆ ಪತ್ರದಲ್ಲೂ ನಮೂದಾಗಿದೆ ಎಂದವರು ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

## ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.18- ದುಮ್ಮಿ ಹುಸೇನ್ ಸಾಬ್ ಚಾರಿಟೇಬಲ್ ಮತ್ತು ಎಜುಕೇಶನಲ್ ಟ್ರಸ್ಟ್ ವತಿಯಿಂದ ಇದೇ ದಿನಾಂಕ 21ರ ಬೆಳಗ್ಗೆ 10.30ಕ್ಕೆ ನಗರದ ರೋಟರಿ ಬಾಲ ಭವನದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ಮುಸ್ಲಿಂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಟ್ರಸ್ಟಿನ ಅಧ್ಯಕ್ಷ ಡಾ.ಡಿ. ಅಬ್ದುಲ್ ಬುಡೇನ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪಾಲಿಕೆ ಸದಸ್ಯ ಕೆ. ಚಮನ್ ಸಾಬ್, ತಂಜೀಮುಲ್ ಮುಸ್ಲಿಮೀನ್ ಸಮಿತಿಯ ಅಧ್ಯಕ್ಷ ದಾದು ಸೇಠ್, ಸದಸ್ಯ ಜನಾಬ್ ಸೈಯದ್ ಇಮ್ರಾನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

**ಭದ್ರಾ ಜಲಾಶಯ**



ನೀರಿನ ಮಟ್ಟ : 155 ಅಡಿ
ಒಳ ಹರಿವು : 42165 ಕ್ಯೂಸೆಕ್ಸ್
ಹೊರ ಹರಿವು : 174 ಕ್ಯೂಸೆಕ್ಸ್
ಕಳೆದ ವರ್ಷ : 141 ಅಡಿ 5 ಇಂಚು

## ಬಸವರಾಜಪ್ಪ ಅವರಿಗೆ ಸಂತಾಪ

ದಾವಣಗೆರೆ, ಜು. 18- ಯಾದಗಿರಿ ಜಿಲ್ಲೆ ಮುನಗಾಲದಲ್ಲಿ ಬರ್ಬರ ಹತ್ಯೆಗೀಡಾದ ದಾವಣಗೆರೆ ಕ್ಲಬ್ ಸಿಬ್ಬಂದಿ ಬಸವರಾಜಪ್ಪ, ಅವರ ಪತ್ನಿ ಕವಿತಾ ಹಾಗೂ ಮಗಳು ಅನ್ನಪೂರ್ಣ ಅವರಿಗೆ ದಾವಣಗೆರೆ ಕ್ಲಬ್ ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.


**AARAIKE SUPER SPECIALITY HOSPITAL**
Our commitment - Your Health

**WE ARE HIRING STAFF NURSES**

**JOB REQUIREMENT**

- Certified Nursing Staff
- Minimum 2 years of experience as Staff Nurse
- OT Nursing Staff with 2 years experience
- Ready to work in Shifts
- Ready to work as team
- Good Communication and professional Skill

SEND YOUR RESUME CONTACT US:

**9606084128, 9343544999**

aaraikehospitalshrdvg@gmail.com


# ಚಿತ್ರದುರ್ಗದಲ್ಲಿ ನಾಳೆ ಮಾದಿಗ ಸಮಾಜದ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ

## ಎಚ್. ಆಂಜನೇಯ ಚಾರಿಟಬಲ್ ಟ್ರಸ್ಟ್‌ನಿಂದ ಸಮಾಜದ ಮಕ್ಕಳಿಗೆ ಶಿಕ್ಷಣಕ್ಕೆ ಒತ್ತು

ದಾವಣಗೆರೆ, ಜು.18- ಎಚ್. ಆಂಜನೇಯ ಚಾರಿಟಬಲ್ ಟ್ರಸ್ಟಿನಿಂದ ಚಿತ್ರದುರ್ಗ ನಗರದ ಎಸ್.ಜಿ. ಕಲ್ಯಾಣ ಮಂಟಪದಲ್ಲಿ ಜು.20ರಂದು ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ಟ್ರಸ್ಟಿನ ಉದ್ಘಾಟನೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಮಾದಿಗ ಸಮಾಜದ ಪ್ರತಿಭಾವಂತ ಮಕ್ಕಳು ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ ಪುರಸ್ಕಾರ ಮಾಡಲಾಗುವುದು ಎಂದು ಹೇಳಿದರು.

ಅಂದು, ಭೂಮಿ ತಾಯಿ ಬಳಗದಿಂದ ವಾದ್ಯಗೋಷ್ಠಿ, ಮೈಸೂರು ನಗಾರಿ ಮಂಜು ತಂಡದಿಂದ ನಗಾರಿ ಕುಣಿತ ಕಾರ್ಯಕ್ರಮ ನಡೆಯಲಿವೆ ಎಂದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ಟ್ರಸ್ಟನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ. ಸುಧಾಕರ್, ಶಾಸಕರಾದ ಕೆ.ಸಿ. ವೀರೇಂದ್ರ ಪಪ್ಪಿ, ಎನ್. ವೈ. ಗೋಪಾಲಕೃಷ್ಣ, ಟಿ. ರಘುಮೂರ್ತಿ ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್, ಆದಿ ಜಾಂಬವ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಮತ್ತು ಮುಂಡರಗಿ ನಾಗರಾಜ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಚಿತ್ರದುರ್ಗ-ದಾವಣಗೆರೆ ಜಿಲ್ಲೆಯ ಮಾದಿಗ ಸಮುದಾಯದ ಎಸ್ಸೆಸ್ಸೆಲ್ಸಿಯ 35 ಹಾಗೂ ಪಿಯುಸಿಯ 33 ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದ್ದು, ಕಡುಬಡತನದ 6 ಜನರಿಗೆ ಲ್ಯಾಪ್‌ಟಾಪ್, ಉಳಿದ ವಿದ್ಯಾರ್ಥಿಗಳಿಗೆ ಬ್ಯಾಗ್ ಸೇರಿದಂತೆ ಕಲಿಕಾ ಸಾಮಗ್ರಿ ನೀಡಲಾಗುವುದು ಎಂದು ಹೇಳಿದರು.

ಶೋಷಿತ ಸಮಾಜ ಮತ್ತು ಅಕ್ಷರ ವಂಚಿತರ ಪರ ಹೋರಾಟಗಾರ ಎಚ್. ಆಂಜನೇಯ ಅವರು ಈ ಹಿಂದೆ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿದ್ದಾಗ ಎಸ್‌ಸಿಎಸ್‌ಪಿ- ಟಿಎಸ್‌ಪಿ ಕಾಯ್ದೆ ಜಾರಿ ತರುವ ಮೂಲಕ ಸಾಕಷ್ಟು ಅನುಕೂಲ ಮಾಡಿದ್ದಾರೆ.

ಪ್ರೊ.ಸಿ.ಕೃಷ್ಣಪ್ಪ ಅವರ ಆಶಯದಂತೆ ಹಾಸ್ಟೆಲ್ ಸೌಲಭ್ಯ, ಮುರಾರ್ಜಿ ದೇಸಾಯಿ ಶಾಲೆ ನಿರ್ಮಾಣ ಇಂತಹ ವಿವಿಧ ಕಾರ್ಯಗಳ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿ ಮೂಡಿಸಿದ ಎಚ್. ಆಂಜನೇಯ ಅವರ ಆಶಯದಂತೆ ಟ್ರಸ್ಟ್ ಸಮಾಜಕ್ಕೆ ನೆರವು ನೀಡಲಿದೆ ಎಂದರು.

ವಕೀಲ ದುರುಗೇಶ್ ಗುಡಗೇರಿ, ಇ. ಶಿವಣ್ಣ, ಶೇಖರಪ್ಪ, ಶಿವಕುಮಾರ್ ಮತ್ತು ಇತರರು ಸುದ್ದಿಗೋಷ್ಠಿಯಲ್ಲಿದ್ದರು.

> **ಭದ್ರಾ ಜಲಾಶಯದ ನೀರು ಸೋರಿಕೆ ಬಗ್ಗೆ ಇಂಜಿನಿಯರ್ ಬಳಿ ಮಾತನಾಡಿದ್ದೇನೆ. ಈ ಬಗ್ಗೆ ನೀರು ಸೋರಿಕೆ ಆಗದಂತೆ ಕ್ರಮ ಕೈಗೊಳ್ಳಲು ತಿಳಿಸಿದ್ದೇನೆ. ಇದೇ ಭಾನುವಾರ ಜನ ಪ್ರತಿನಿಧಿಯೊಂದಿಗೆ ರೈತರ ಸಭೆ ಕರೆಯಲಾಗಿದೆ.**
>
> **- ಕೆ.ಎಸ್. ಬಸವಂತಪ್ಪ, ಶಾಸಕ**

## ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನಲ್ಲಿ ಡಬಲ್ ಡಿಸ್ಕೌಂಟ್ - ಶ್ರಾವಣ ಸಂಭ್ರಮ



ದಾವಣಗೆರೆ, ಜು. 18- ನಗರದ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನ ಸ್ಥಳೀಯ ಎಲ್ಲಾ ಶೋ ರೂಂ ಹಾಗೂ ಬೆಳಗಾವಿ ಶೋ ರೂಂನಲ್ಲಿ ಡಬಲ್ ಡಿಸ್ಕೌಂಟ್‌ನ ಶ್ರಾವಣ ಸಂಭ್ರಮವು ನಾಡಿದ್ದು ದಿನಾಂಕ 21ರ ಭಾನುವಾರದಿಂದ ಪ್ರಾರಂಭವಾಗಲಿದೆ.

ಸ್ಯಾರೀಸ್, ಲೇಡಿಸ್ ವೇರ್, ಮೆನ್ಸ್‌ವೇರ್, ಕಿಡ್ಸ್‌ವೇರ್, ಹೋಮ್ ಫರ್ನಿಷಿಂಗ್, ಹೊಚ್ಚ ಹೊಸ ಬಟ್ಟೆಗಳ ಮೇಲೆ ರಿಯಾಯಿತಿ ಜೊತೆಗೆ ವಿಶೇಷ ರಿಯಾಯತಿ ನೀಡಲಾಗುವುದು. ವರ್ಷದಲ್ಲಿ ಒಮ್ಮೆ ಮಾತ್ರ ವಿಶೇಷ ರಿಯಾಯಿತಿ ಕೊಡುಗೆ ದೊರೆಯಲಿದೆ.

## ಹೆಸರು ದೃಢೀಕರಣ

ನಾನು, ಶ್ರೀಮತಿ ಉಮಾ ಯಾನೆ ಗೌರಮ್ಮ ಕೋಂ ಜಿ.ಸಿ. ಕುಮಾರ್ **(UMA ALLIAS GOWRAMMA W/O G.C. KUMAR)** ವಯಸ್ಸು 54 ವರ್ಷ, ವಿಳಾಸ : ಡೋರ್. ನಂ. 1831/57ಎ, 18ನೇ ಕ್ರಾಸ್, ಎಸ್.ಆರ್.ಪಿ. ಕಾನ್ವೆಂಟ್ ಹತ್ತಿರ, ಆಂಜನೇಯ ಬಡಾವಣೆ, ದಾವಣಗೆರೆ ವಾಸಿಯಾದ ನಾನು ಈ ಕೆಳಕಂಡಂತೆ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ.

ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನ ಆಧಾರ್ ಕಾರ್ಡ್‌ನಲ್ಲಿ **(7054 3281 0450)** ರಲ್ಲಿ ನನ್ನ ಹೆಸರು **ಉಮಾ ಯಾನೆ ಗೌರಮ್ಮ ಕೋಂ ಜಿ.ಸಿ. ಕುಮಾರ್** ಎಂದು ನಮೂದಾಗಿರುತ್ತದೆ ಹಾಗೂ ನನ್ನ **ಭಾರತೀಯ ಚುನಾವಣಾ ಗುರುತಿನ ಚೀಟಿಯಲ್ಲಿ** (YYV4336988) ರಲ್ಲಿ ನನ್ನ ಹೆಸರು **ಉಮಾ ಕೋಂ ಕುಮಾರ್** ಜಿ.ಸಿ. ಎಂದು ನಮೂದಾಗಿರುತ್ತದೆ ಹಾಗೂ ನನ್ನ ಪಾನ್ ಕಾರ್ಡಿನಲ್ಲಿ (AFXPU5205P) ರಲ್ಲಿ ನನ್ನ ಹೆಸರು **UMA D/O MASARUR BHADRAPPA GOWDA** ಎಂದು ನಮೂದಾಗಿರುತ್ತದೆ ಹಾಗೂ ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು **ಗೌರಮ್ಮ ಎಂ.ಬಿ. ಬಿನ್ ಭದ್ರಪ್ಪಗೌಡ ಎಂ,** ಎಂದು ನಮೂದಾಗಿರುತ್ತದೆ.

ಆದ್ದರಿಂದ ಮೇಲ್ಕಂಡ ಎಲ್ಲಾ ಹೆಸರುಗಳು ನನಗೆ ಅನ್ವಯಿಸುತ್ತವೆಂದು ಹಾಗೂ ಸದರಿ ನನ್ನ ಹೆಸರುಗಳಲ್ಲಿ ಮುಂದೆ ಏನಾದರೂ ತಂಟೆ-ತಕರಾರು ಬಂದಲ್ಲಿ ಅದಕ್ಕೆ ನಾನೇ ಜವಾಬ್ದಾರಿಳಾಗಿರುತ್ತೇನೆಂದು ಹಾಗೂ ಈ ಎಲ್ಲಾ ಹೆಸರಿನ ವ್ಯಕ್ತಿ ನಾನೇ ಆಗಿರುತ್ತೇನೆಂದು ಈ ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸುತ್ತೇನೆ ಹಾಗೂ ಇನ್ನು ಮುಂದೆ ನನ್ನ ಹೆಸರನ್ನು **ಉಮಾ ಯಾನೆ ಗೌರಮ್ಮ ಕೋಂ ಜಿ.ಸಿ. ಕುಮಾರ್ (UMA ALLIAS GOWRAMMA W/O G.C. KUMAR)** ಎಂಬ ಹೆಸರಿನಲ್ಲಿ ಮುಂದುವರೆಸಿಕೊಂಡು ಹೋಗುತ್ತೇನೆಂದು ಈ ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸುತ್ತೇನೆ.

ಈ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಲು ಮಾಡಿಸಿರುತ್ತೇನೆ. ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ಪ್ರಮಾಣೀಕರೀಸುತ್ತೇನೆ.

ದಿನಾಂಕ : 16.07.2024
ಸ್ಥಳ : ದಾವಣಗೆರೆ

ಉಮಾ
ಪ್ರಮಾಣಕರ್ತಳು

# ಜಿಎಂಐಟಿ ಹಿಂಭಾಗದಲ್ಲಿ ಅವೈಜ್ಞಾನಿಕ ಅಂಡರ್ ಪಾಸ್



## ಕರೂರು ಮತ್ತು ಬಾತಿ ಗ್ರಾಮಸ್ಥರ ಆರೋಪ

ದಾವಣಗೆರೆ, ಜು. 18- ಕರೂರು ಮಾರ್ಗವಾಗಿ ಬಾತಿಗೆ ಹೋಗುವ ಜಿಎಂಐಟಿ ಕಾಲೇಜು ಹಿಂಭಾಗದ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ರೈಲ್ವೇ ಅಂಡರ್ ಪಾಸ್ ನಿರ್ಮಿಸಲಾಗುತ್ತಿದೆ ಎಂದು ಕರೂರು ಮತ್ತು ಬಾತಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಪ್ರಸ್ತುತ ನಿರ್ಮಿಸಲಾಗುತ್ತಿರುವ ಕೆಳ ಸೇತುವೆಯಲ್ಲಿ ಬೈಕ್‌ಗಳು ಮಾತ್ರ ಓಡಾಡಲು ಸಾಧ್ಯವಾಗಿದೆ. ದೊಡ್ಡದಾದ ರಸ್ತೆಯಡಿ ಇಂತಹ ಚಿಕ್ಕದಾದ ಅಂಡರ್ ಪಾಸ್ ಮಾಡುವುದರ ಉಪಯೋಗವಾದರೂ ಏನು? ಈಗಾಗಲೇ ಹಲವಾರು ಅವೈಜ್ಞಾನಿಕ ಕಾಮಗಾರಿಗಳು ನಡೆದಿದ್ದು, ಇದೂ ಸಹ ಅವೈಜ್ಞಾನಿಕವಾಗಬಾರದು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಈ ಬಗ್ಗೆ ಗಮನ ಹರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ನಾಟಕ ವೀಕ್ಷಣೆಯಿಂದ ಮಕ್ಕಳಲ್ಲಿ ಸಕಾರಾತ್ಮಕ ಆಲೋಚನೆ

## ಮಕ್ಕಳ ನಾಟಕೋತ್ಸವದಲ್ಲಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಜು. 18- ಮಕ್ಕಳಲ್ಲಿ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸುವಲ್ಲಿ 'ರಾಮಾಯಣ' ದಂತಹ ನಾಟಕ ಪ್ರದರ್ಶನಗಳು ಸಹಕಾರಿಯಾಗಲಿವೆ. ಪೌರಾಣಿಕ ನಾಟಕಗಳು ಮಕ್ಕಳ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಲಿವೆ ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ದಂತ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ವೃತ್ತಿ ರಂಗಭೂಮಿ ರಂಗಾಯಣ, ಬಾಪೂಜಿ ವಿದ್ಯಾಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಮಕ್ಕಳ ನಾಟಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾಟಕಗಳು ಮಕ್ಕಳ ಮನಸ್ಸನ್ನು ಮುದಗೊಳಿಸುವುದಲ್ಲದೇ ವ್ಯಕ್ತಿತ್ವ, ನಡವಳಿಕೆಗಳನ್ನು ತಿದ್ದಿಕೊಳ್ಳಲು ಸಹಕಾರಿಯಾಗುತ್ತವೆ. ಪ್ರಸ್ತುತ ಮಕ್ಕಳಿಗೆ ರಂಗಭೂಮಿ ಪರಿಚಯಿಸುವ ಅಗತ್ಯವಿದೆ ಎಂದರು.

ನಾಟಕಗಳಲ್ಲಿ ಮಕ್ಕಳೇ ಅಭಿನಯಿಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ನಾಟಕಗಳನ್ನು ನೋಡುವುದರಿಂದ ಮಕ್ಕಳ ಮನಃಪರಿವರ್ತನೆಯಾಗುತ್ತದೆ ಎಂದು ಹೇಳಿದರು.

ಮಕ್ಕಳಲ್ಲಿ ರಂಗಾಸಕ್ತಿ ಬೆಳೆಸಬೇಕಾಗಿದೆ. ಶಿಸ್ತು, ಕಠಿಣ ಪರಿಶ್ರಮ ಇದ್ದರೆ ಸಾಧನೆ ಸುಲಭವಾಗುತ್ತದೆ. ಮಕ್ಕಳಿಗೆ ಕಲಿಕೆಗೆ ಉತ್ತೇಜನ ನೀಡಬೇಕು. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜ, ರಂಗ ಸಂಘಟಕರಾದ ಪ್ರೊ. ಹಾಲಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ರವಿಚಂದ್ರ, ರಂಗಕರ್ಮಿ ಎಸ್.ಎಸ್. ಸಿದ್ಧರಾಜು ಮತ್ತಿತರರು ಭಾಗವಹಿಸಿದ್ದರು.

ನಾಟಕೋತ್ಸವದ ಮೊದಲ ದಿನವಾದ ಇಂದು ಬಿ.ಆರ್. ವೆಂಕಟರಮಣ ಐತಾಳ್ ಅವರು ರಚಿಸಿರುವ, ಗಣೇಶ್ ಮಂದಾರ್ತಿ ಅವರ ಸಂಗೀತ, ವಿನ್ಯಾಸ ಮತ್ತು ನಿರ್ದೇಶನದಲ್ಲಿ 'ಮಕ್ಕಳ ರಾಮಾಯಣ' ನಾಟಕ ಪ್ರದರ್ಶನಗೊಂಡಿತು.

ಬೈಂದೂರಿನ ಸುರಭಿ ಮಕ್ಕಳ ರಂಗ ತಂಡದ 25 ಬಾಲ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದರು.

ನಾಳೆ ದಿನಾಂಕ 19 ರ ಶುಕ್ರವಾರ 'ಕರ್ಣಾರ್ಜುನ ಕಾಳಗ', ನಾಡಿದ್ದು ದಿನಾಂಕ 20 ರ ಶನಿವಾರ 'ಸಿದಿಧಾನ್ಯವೇ ಸರಿಧಾನ್ಯ' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಸೀತಮ್ಮ ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಸಿದ್ಧಗಂಗಾ ಪ್ರೌಢಶಾಲೆ, ಮೋತಿ ವೀರಪ್ಪ ಸರ್ಕಾರಿ ಪ್ರೌಢಶಾಲೆ ಹಾಗೂ ಬಾಪೂಜಿ ಪ್ರೌಢಶಾಲೆ ವಿದ್ಯಾರ್ಥಿಗಳು ನಾಟಕ ವೀಕ್ಷಿಸಿದರು.

# ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಉಪಾಧ್ಯಕ್ಷರಾಗಿ ಜಯಮ್ಮ



ದಾವಣಗೆರೆ, ಜು. 18 - ಕರ್ನಾಟಕ ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಉಪಾಧ್ಯಕ್ಷರನ್ನಾಗಿ ನಗರದ ಕು. ಜಯಮ್ಮ ಹೆಚ್.ಸಿ. ಅವರನ್ನು ನೇಮಕ ಮಾಡಲಾಗಿದೆ ಎಂದು ಮೋರ್ಚಾದ ರಾಜ್ಯಾಧ್ಯಕ್ಷರಾದ ಸಿ. ಮಂಜುಳಾ ತಿಳಿಸಿದ್ದಾರೆ.

# ದೇವರಬೆಳಕೆರೆ : ಸಂಗೀತ ಕಾರ್ಯಕ್ರಮ



ಹರಿಹರ, ಜು. 18 - ತಾಲ್ಲೂಕಿನ ದೇವರಬೆಳಕೆರೆ ಗ್ರಾಮದಲ್ಲಿ ಹಿಂದೂ - ಮುಸ್ಲಿಂ ಭಾವೈಕ್ಯತೆಯ ಸಂಕೇತವಾದ ಪವಿತ್ರ ಮೊಹರಂ ಹಬ್ಬವನ್ನು ಆಚರಿಸಲಾಯಿತು.

ಮೊಹರಂ ಹಬ್ಬದ ಕತ್ತಲ ರಾತ್ರಿಯ ಕೆಂಡಸೇವೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದಾವಣಗೆರೆಯ ಶ್ರೀ ಗುರು ಹವ್ಯಾಸಿ ಕಲಾವೃಂದದ ಕಲಾವಿದ ಜಿ. ಶಂಭುಲಿಂಗಪ್ಪ ಮತ್ತು ತಂಡದಿಂದ ಸುಗಮ ಸಂಗೀತ ಮತ್ತು ಜಾನಪದ ಮನೋರಂಜನೆ ಕಾರ್ಯಕ್ರಮ ನಡೆಯಿತು.

ವೇದಿಕೆಯಲ್ಲಿ ಬುಕ್ಕಸಾಗರ ಶ್ರೀ ಕರಿಸಿದ್ದೇಶ್ವರ ಮಹಾಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ದರ್ಗಾದ ಹಜರತ್ ಸೈಯದ್ ಚಮನ್ ಸಾಬ್ ಮತ್ತು ಹಳೇ ಕುಂದುವಾಡದ ಶ್ರೀ ಕರಿಬಸವೇಶ್ವರ ದೇವಸ್ಥಾನದ ರಾಜಣ್ಣ, ದರ್ಗಾ ಅಧ್ಯಕ್ಷ ಜಯ್ಯಣ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮೊಹರಂ ಹಬ್ಬದ ಆಚರಣೆಗಳು ಜನರ ನಡುವೆ ಕೋಮು - ಸೌಹಾರ್ದತೆ ಮತ್ತು ಹೊಂದಾಣಿಕೆ ಮಾಡಿಕೊಂಡು ಬಾಳುವ ಯೋಗ್ಯತೆಯನ್ನು ಸೃಷ್ಟಿ ಮಾಡುತ್ತವೆ ಎಂದು ಆವರಗೊಳ್ಳ ಶ್ರೀಗಳು ಆಶೀರ್ವಚನ ನೀಡಿದರು.

# ಪಾಕ್‌ನಲ್ಲಿ ಫೇಸ್‌ಬುಕ್ ನಿರ್ಬಂಧ

## ಹಂತ ಹಂತವಾಗಿ ಎಲ್ಲಾ ಸಾಮಾಜಿಕ ಜಾಲತಾಣಗಳ ನಿಷೇಧಕ್ಕೆ ಕ್ರಮ

ಲಾಹೋರ್, ಜು. 18 - ಪಾಕಿಸ್ತಾನ ಸರ್ಕಾರ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮ್ ಸಾಮಾಜಿಕ ಜಾಲತಾಣ ವೇದಿಕೆಗಳ ಮೇಲೆ ನಿರ್ಬಂಧ ವಿಧಿಸಿದೆ. ಸರ್ಕಾರ ಈ ಹಿಂದೆ ಟ್ವಿಟರ್ ಮೇಲೆ ನಿಷೇಧ ಹೇರಿತು. ಪಾಕ್ ಸರ್ಕಾರ ಸಾಮಾಜಿಕ ಜಾಲತಾಣಗಳ ಮೇಲೆ ಸಂಪೂರ್ಣ ನಿಷೇಧ ಹೇರುವ ಕ್ರಮಕ್ಕೆ ಮುಂದಾಗುವ ಸೂಚನೆಗಳಿವೆ.

ಬುಧವಾರದಿಂದ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಮ್‌ಗಳ ಮೇಲೆ ನಿರ್ಬಂಧ ಹೇರಲಾಗಿದೆ. ವಾಟ್ಸಾಪ್ ಬಳಸಲು ಸಮಸ್ಯೆಯಾಗುತ್ತಿದೆ ಎಂದು ಕೆಲವರು ಹೇಳಿದ್ದಾರೆ. ಈ ನಿರ್ಬಂಧಗಳ ಬಗ್ಗೆ ಪಾಕಿಸ್ತಾನ ಸರ್ಕಾರ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಸುಪ್ರೀಂಕೋರ್ಟ್, ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷ ಹಾಗೂ ಸೈನ್ಯದ ನಡುವಿನ ಸಂಘರ್ಷದ ಮಧ್ಯೆ ಸಾಮಾಜಿಕ ಜಾಲತಾಣಗಳ ಮೇಲೆ ನಿರ್ಬಂಧ ಹೇರಲಾಗಿದೆ.

ಸಾಮಾಜಿಕ ಮಾಧ್ಯಮ ದುರಾಚಾರದ್ದಾಗಿದೆ ಎಂದು ಪಾಕಿಸ್ತಾನದ ಸೈನ್ಯದ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ಈ ಹಿಂದೆ ಘೋಷಿಸಿದ್ದರು. ಸಾಮಾಜಿಕ ಮಾಧ್ಯಮಗಳನ್ನು ಡಿಜಿಟಲ್ ಉಗ್ರವಾದಕ್ಕೆ ಹೋಲಿಸಿದ್ದ ಅವರು, ಇವುಗಳ ವಿರುದ್ಧ ಹೋರಾಟ ನಡೆಸಬೇಕು ಎಂದು ಕರೆ ನೀಡಿದ್ದರು.

ಸಾಮಾಜಿಕ ಮಾಧ್ಯಮಗಳ ಮೇಲೆ ಸಂಪೂರ್ಣ ನಿಷೇಧ ಹೇರಬೇಕು ಎಂದು ಪಾಕಿಸ್ತಾನದ ಉಪಮುಖ್ಯಮಂತ್ರಿ ಇಶಾಕ್ ದರ್ ಹೇಳಿದ್ದರು.

ಮಾಜಿ ಪ್ರಧಾನಮಂತ್ರಿ ಇಮ್ರಾನ್ ಖಾನ್ ವಿಷಯಕ್ಕೆ ಸಂಬಂಧಿಸಿದಂತೆ ಸೈನ್ಯ ಹಾಗೂ ಸರ್ಕಾರದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಸಾಮಾಜಿಕ ಮಾಧ್ಯಮಗಳ ಹಲವಾರು ಕಾರ್ಯಕರ್ತರನ್ನು ಬಂಧಿಸಲಾಗಿತ್ತು.

ಪಾಕಿಸ್ತಾನ ಸರ್ಕಾರ ಟ್ವಿಟರ್ ಮೇಲೆ ಕಳೆದ ಫೆಬ್ರುವರಿ ತಿಂಗಳಿನಿಂದ ನಿಷೇಧ ಹೇರಿತ್ತು. ಟ್ವಿಟ್ಟರ್‌ನಿಂದ ದೇಶದ ಶಾಂತಿ ಹಾಗೂ ಭದ್ರತೆಗೆ ಧಕ್ಕೆ ಯಾಗಿದೆ ಎಂದು ತಿಳಿಸಿತ್ತು.

# ದಾವಣಗೆರೆ ಗುಪ್ತಾ ಶಾಪೆಯಲ್ಲಿ 'ಸ್ಯಾಂಸಂಗ್ ಗ್ಯಾಲಕ್ಷಿ-ಝೆಡ್ ಫೋಲ್ಡ್-6' ಲೋಕಾರ್ಪಣೆ



ದಾವಣಗೆರೆ, ಜು. 18- ದಾವಣಗೆರೆ ಗುಪ್ತಾ ಶಾಪೆಯಲ್ಲಿ ಗುರುವಾರ ಮಧ್ಯೆ ರಾತ್ರಿ 12 ಗಂಟೆಗೆ 'ಸ್ಯಾಂಸಂಗ್ ಗ್ಯಾಲಕ್ಷಿ -ಝೆಡ್ ಫೋಲ್ಡ್- 6' ಹೊಸ ಮೊಬೈಲ್ ಬಿಡುಗಡೆ ಮಾಡಲಾಯಿತು.

ಇದನ್ನು ಗ್ರಾಹಕರಾದ ಕಂಸಾಗರದ ಪ್ರದೀಪ್, ಕಂದಗಲ್ಲು ಲೋಹಿತ್ ಹಾಗೂ ಸುಬ್ರಹ್ಮಣಿ ಕುಪ್ಪುರಾಜ್ ಇವರು ಹೊಸ ಪ್ರಾಡಕ್ಟಗಳನ್ನು ಖರೀದಿಸುವ ಮೂಲಕ ಪ್ರಥಮ ಗ್ರಾಹಕರಾಗಿ ಹೊರ ಹೊಮ್ಮಿದರು.

ಈ ವೇಳೆ ಜಿಲ್ಲಾ ವಿತರಕರಾದ ಪ್ರಶಾಂತ ಗುಪ್ತಾ, ಏರಿಯಾ ಮ್ಯಾನೇಜರ್ ವಿನಯ, ಸಂತೋಷ್ ಹಾಗೂ ತಾಹೀರ್ ಉಪಸ್ಥಿತರಿದ್ದರು.

# ಕೆ. ಜೈಮುನಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



ದಾವಣಗೆರೆ, ಜು.18- ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆಯ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮ ಅವಧೂತ ದತ್ತಪೀಠದಲ್ಲಿ ಕಳೆದ ವಾರ ನಡೆದ 'ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ಹಾಗೂ 'ರಾಜ್ಯ ವಿಭೂಷಣ ಪ್ರಶಸ್ತಿ' ಪ್ರದಾನ ಸಮಾರಂಭ ನಡೆಯಿತು. ಈ ವೇಳೆ ಅನೇಕ ಸಾಧಕರ ಪೈಕಿ ನಗರದ ಅಂತರರಾಷ್ಟ್ರೀಯ ಯೋಗಪಟು ಕೆ. ಜೈಮುನಿ ಅವರ ಸಾಧನೆ ಗುರುತಿಸಿ, ಮೈಸೂರು ಮಹಾರಾಜರು ಹಾಗೂ ಸಂಸದರೂ ಆದ ಯದುವೀರ್ ಒಡೆಯರ್ ಅವರು 'ನಾಲ್ವಡಿ ಕೃಷ್ಣರಾಜ ಒಡೆಯರ್ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿದರು.

# ಚಿತ್ರದುರ್ಗ ಜಿಲ್ಲೆಯಲ್ಲಿ ವಚನಾನಂದ ಶ್ರೀ 'ಶ್ರಾವಣ'



ಹರಿಹರ, ಜು. 18 - ಹರ ಪೀಠಾಧ್ಯಕ್ಷ ಲಿಂಗೈಕ್ಯ ಶ್ರೀ ಜಗದ್ಗುರು ಡಾ.ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾ ಶೀರ್ವಾದದೊಂದಿಗೆ ಯೋಗಸಿಂಹಾಸನಾಧೀಶ್ವರ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಹರ ಶ್ರಾವಣವನ್ನು ಬರುವ ಅಗಸ್ಟ್ 5 ರಿಂದ 10 ವರೆಗೆ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಚಿತ್ರದುರ್ಗ ಜಿಲ್ಲಾ ಘಟಕವು ಆಯೋಜಿಸಿದೆ.

ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ವಿವಿಧ ಹಳ್ಳಿ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲೆಯ ಸದ್ಭಕ್ತರ ಮಹಾ ಮನೆಯಲ್ಲಿ ಇಷ್ಟಲಿಂಗ ಮಹಾಪೂಜೆ, ಪಾದಪೂಜೆ, ಸತ್ಸಂಗ, ಸಂಘಟನೆ ಹಾಗೂ ಚಿಂತನ ಮಂಥನ ನೆರವೇರಿಸಲಿದ್ದಾರೆ.

ಸದ್ಭಕ್ತರು ಮುಂಚಿತವಾಗಿ ಚಿತ್ರದುರ್ಗ ಜಿಲ್ಲಾ ಘಟಕಕ್ಕೆ ಸಂಪರ್ಕಿಸಿದರೆ, ತಮ್ಮ ಮಹಾ ಮನೆಗೂ ಜಗದ್ಗುರು ಮಹಾ ಸನ್ನಿಧಿಯವರು ಪಾದಾರ್ಪಣೆ ಮಾಡುವರು.




॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ನಗರ ತರಳಬಾಳು ಬಡಾವಣೆ ವಾಸಿ
ದಿ॥ ಶ್ರೀ ಓಂಕಾರಪ್ಪ ಇವರ ಮಕ್ಕಳಾದ
ಶ್ರೀ ಹರೀಶ್ ಜಿ.ಓ. ಮತ್ತು ಶ್ರೀ ಗಿರೀಶ್ ಜಿ.
ಇವರುಗಳು ಮಾಡುವ ವಿಜ್ಞಾಪನೆಗಳು.

ದಿನಾಂಕ 12-7-2024ನೇ ಶುಕ್ರವಾರ ಬೆಳಗಿನ ಜಾವ 4ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಕಮಲಮ್ಮ ಓಂಕಾರಪ್ಪ**
(ಬಾಡ ಗ್ರಾಮದ ಶ್ರೀ ದಿ॥ ಜಿ. ಓಂಕಾರಪ್ಪ ನಿ. ಇಂಜಿನಿಯರ್ ಇವರ ಧರ್ಮಪತ್ನಿ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 20-07-2024ನೇ ಶನಿವಾರ ಬೆಳಿಗ್ಗೆ 10-30ಕ್ಕೆ
ಎಸ್.ಎಸ್. ಮಿನಿಹಾಲ್, ಹದಡಿ ರಸ್ತೆ, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು : ಶ್ರೀಮತಿ ಆಶಾ ಶ್ರೀ ಬಸವರಾಜ ಪಟೇಲ್ ಮತ್ತು ಮಕ್ಕಳು, ಬೆಂಗಳೂರು
ಶ್ರೀಮತಿ ಅನಿತಾ ಶ್ರೀ ಹನುಮಂತಗೌಡ ದೊಡ್ಡಗೌಡರ್ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಅನುಪಮ ಶ್ರೀ ಜಿ.ಓ. ಹರೀಶ್ ಮತ್ತು ಮಕ್ಕಳು, ಬಾಡ. ಶ್ರೀಮತಿ ಮಂಜುಳ ಶ್ರೀ ಜಿ. ಗಿರೀಶ್ ಮತ್ತು ಮಕ್ಕಳು
ಬಾಡ ಗಂಗಸ್ಥರ ವಂಶಸ್ಥರು, ದೊಡ್ಡಬಸಪ್ಪರ ವಂಶಸ್ಥರು ಬಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


# ಗರ ಬಡಿದ ಗೃಹಲಕ್ಷ್ಮಿ ಯೋಜನೆ : ಲೋಕಸಭಾ ಹಿನ್ನಡೆ ನಂತರ ಯೋಜನೆ ಬಗ್ಗೆ ಸರ್ಕಾರಕ್ಕೆ ನಿರಾಸಕ್ತಿ

ಬೆಂಗಳೂರು, ಜು. 18 - ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಒಬ್ಬ ಹಿರಿಯ ಮಹಿಳೆಗೆ ಗೃಹಲಕ್ಷ್ಮಿ ಯೋಜನೆಯಡಿ ಮಾಸಿಕ 2,000 ರೂ. ನೀಡುತ್ತಿದ್ದ ಜನಪ್ರಿಯ ಕಾರ್ಯಕ್ರಮಕ್ಕೆ ಗರ ಬಡಿದಿದೆ.

ಕಳೆದ ಮೂರು-ನಾಲ್ಕು ತಿಂಗಳಿಂದ ಯಾರೊಬ್ಬರ ಖಾತೆಗೂ ಹಣ ಬಂದಿಲ್ಲ. ಕಾರ್ಯಕ್ರಮ ಅನುಷ್ಠಾನದ ನಂತರ ಕಳೆದ 10 ತಿಂಗಳಲ್ಲಿ ಕುಟುಂಬದ ಮಹಿಳೆಗೆ ಹಣ ಸಂದಾಯವಾಗಿತ್ತು, ಇದರಿಂದ ರಾಜ್ಯದ ಬೊಕ್ಕಸಕ್ಕೆ 23,000 ಕೋಟಿ ರೂ. ಹೊರೆ ಬಿದ್ದಿದೆ. ಲೋಕಸಭಾ ಚುನಾವಣಾ ಫಲಿತಾಂಶದಿಂದ ವಿಚಲಿತಗೊಂಡ ಕಾಂಗ್ರೆಸ್ ಸರ್ಕಾರ ಯೋಜನೆ ಮುಂದುವರೆಸುವ ಬಗ್ಗೆ ಮೀನಾ-ಮೇಷ ಎಣಿಸುತ್ತಿದೆ.

ಫಲಿತಾಂಶದ ನಂತರ ಯೋಜನೆ ಸದ್ಯಕ್ಕೆ ಸ್ಥಗಿತಗೊಂಡಿದೆ. ತಮಗೆ ಹಣ ಬಂದಿಲ್ಲವೆಂದು ಫಲಾನುಭವಿಗಳು ದಿನನಿತ್ಯ ಇಲಾಖೆ ಹೊಣೆ ಹೊತ್ತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಪ್ರಶ್ನೆ ಮಾಡುತ್ತಿದ್ದಾರೆ.

ಸಚಿವೆ, ಈ ಸಂಬಂಧ ಆರ್ಥಿಕ ಇಲಾಖೆಗೆ ಮೂರು ಪತ್ರಗಳನ್ನು ಬರೆದರೂ ಹಣ ಬಿಡುಗಡೆ ಆಗಿಲ್ಲ, ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಅವರಿಂದಲೂ ಮೌನ ಉತ್ತರ.

ಇದರಿಂದ ಸಚಿವೆ ತೀವ್ರ ಬೇಸರಗೊಂಡಿದ್ದರೂ ಪಕ್ಷ ನೀಡಿದ್ದ ಭರವಸೆ ಮುಂದುವರೆಸಲು ನಿರಂತರ ಪ್ರಯತ್ನ ಪಡುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

ಯೋಜನೆಗೆ ರಾಜ್ಯಾದ್ಯಂತ ಒಂದು ಕೋಟಿ 19 ಲಕ್ಷ ಮಹಿಳೆಯರು ಹೆಸರು ನೋಂದಾಯಿಸಿಕೊಂಡಿದ್ದು, ಕಳೆದ ಮೂರು ತಿಂಗಳಿಂದ ಹಣದ ನಿರೀಕ್ಷೆಯಲ್ಲಿದ್ದಾರೆ.

ಲೋಕಸಭೆ ಚುನಾವಣೆ ಸಮಯದಲ್ಲಿ ಒಂದೇ ಬಾರಿಗೆ ಎರಡು ತಿಂಗಳ 4,000 ರೂ. ಪ್ರತಿಯೊಬ್ಬ ಫಲಾನುಭವಿಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವ ಮೂಲಕ ಗೃಹಲಕ್ಷ್ಮಿಯರಲ್ಲಿ ಭಾರೀ ಸಂತಸ ತಂದಿತ್ತು.

ಗ್ಯಾರಂಟಿ ಯೋಜನೆಗಳಿಂದ ಲೋಕಸಭಾ ಚುನಾವಣೆಯಲ್ಲಿ ಭಾರೀ ಯಶಸ್ಸು ನಿರೀಕ್ಷಿಸಿದ್ದ ಕಾಂಗ್ರೆಸ್‌ಗೆ ಫಲಿತಾಂಶ ಆಘಾತ ತಂದಿತ್ತು.

ಚುನಾವಣೆ ಫಲಿತಾಂಶದಲ್ಲಿ ಗೃಹಲಕ್ಷ್ಮಿ ಯೋಜನೆ ಹೆಚ್ಚು ಪರಿಣಾಮ ಬೀರಿಲ್ಲ ಎಂಬ ವರದಿಗಳು ರಾಜ್ಯ ಸರ್ಕಾರವನ್ನು ತಲುಪಿದ್ದು, ಫಲಾನುಭವಿಗಳ ಮಾಸಿಕ 2,000 ರೂ.ಗಳ ಆಸೆಗೆ ಗ್ರಹಣ ಹಿಡಿಯಿತು.

ಕಳೆದ ಮೂರು ತಿಂಗಳಿಂದ ಫಲಾನುಭವಿಗಳಿಗೆ ನೀಡಬೇಕಾದ ಸುಮಾರು 2,090 ಕೋಟಿ ರೂ. ನೀಡಲು ಹಣಕಾಸು ಇಲಾಖೆ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಗೆ ಬಿಡುಗಡೆ ಮಾಡಬೇಕಾದ ಹಣ ಸದ್ಯದ ಪರಿಸ್ಥಿತಿಯಲ್ಲಿ ಲಭ್ಯವಿಲ್ಲ ಎಂಬ ಸಬೂಬು ಹೇಳುತ್ತಿರುವ ಅಧಿಕಾರಿಗಳು, ಆದಷ್ಟು ಶೀಘ್ರ ಬಿಡುಗಡೆ ಮಾಡುವ ಭರವಸೆಯನ್ನಷ್ಟೇ ನೀಡುತ್ತಿದ್ದಾರೆ.

# ಉಗ್ರರು ಹತ

ಶ್ರೀನಗರ, ಜು. 18 - ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯ ನಿಯಂತ್ರಣ ರೇಖೆ ಬಳಿ ನುಸುಳುವಿಕೆಗೆ ಪ್ರಯತ್ನ ನಡೆಸಿದ ಇಬ್ಬರು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಉಗ್ರರ ನುಸುಳುವಿಕೆ ಪ್ರಯತ್ನದ ಬಗ್ಗೆ ಗುಪ್ತಚರ ಮಾಹಿತಿ ದೊರೆತಿತ್ತು. ನಂತರ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿದ್ದವು.


ತೂಕದ ಲೆಕ್ಕದ ಬಟ್ಟೆ ಅಂಗಡಿ
ಈಗ ಬಟ್ಟೆಗಳು
1 ಕಿಲೋಗೆ ಕೇವಲ
~~900/-~~, 500/ರೂ.
ಡಿಸ್ಕೌಂಟ್


# ಕಲಬುರ್ಗಿ ಚಿತ್ರಕಲಾ ಶಿಬಿರದಲ್ಲಿ ರವೀಂದ್ರ ಅರಳಗುಪ್ಪಿ



ದಾವಣಗೆರೆ, ಜು. 18- ಕಲಬುರ್ಗಿಯಲ್ಲಿ ಕಳೆದ ವಾರ ನಡೆದ ಚಿತ್ರಕಲಾ ಶಿಬಿರದಲ್ಲಿ ನಗರದ ಚಿತ್ರ ಕಲಾವಿದ ಹಾಗೂ ರಂಗಭೂಮಿ ಕಲಾವಿದ ರವೀಂದ್ರ ಅರಳಗುಪ್ಪಿ ಭಾಗವಹಿಸಿದ್ದರು. ಶಿಬಿರದಲ್ಲಿ ರಾಷ್ಟ್ರ ಹಾಗೂ ರಾಜ್ಯಮಟ್ಟದ ಹೆಸರಾಂತ 50 ಕಲಾವಿದರು ಭಾಗವಹಿಸಿದ್ದರು. ಡಾ.ವಿ.ಜಿ. ಅಂದಾನಿ ಮೇಷ್ಟ್ರು ಅವರ 75ರ ಸಂಭ್ರಮಾಚರಣೆ ಅಂಗವಾಗಿ ಅಭಿನಂದನಾ ಗ್ರಂಥ ಬಯಲು ಬೆಳಕು ಹಾಗೂ 50 ಕಲಾವಿದರ ಚಿತ್ರ ಕಲಾ ಶಿಬಿರ ಇದಾಗಿತ್ತು.

# ಪಂಚಮಸಾಲಿ ಜಗದ್ಗುರು ಪೀಠದಲ್ಲಿ ನಾಡಿದ್ದು ಗುರು ಪೂರ್ಣಿಮೆ

ಹರಿಹರ,ಜು.18- ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಹರ ಕ್ಷೇತ್ರದಲ್ಲಿ ಇದೇ ದಿನಾಂಕ 21ರ ಭಾನುವಾರ ಗುರು ಪೂರ್ಣಿಮೆ ಮಹೋತ್ಸವ ನಡೆಯಲಿದೆ. ಪ್ರಾತಃಕಾಲದಲ್ಲಿ ಲಿಂಗೈಕ್ಯ ಜಗದ್ಗುರು ಶ್ರೀ ಡಾ.ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಇಷ್ಟಲಿಂಗಾರ್ಚನೆ, 10 ಗಂಟೆಗೆ ಮೈಲಾರ ಶ್ರೀ ಬಸವಲಿಂಗ ಶರಣರ ಗುರುಕರಣ ತ್ರಿವಿಧ ಪಠಣ ನಂತರ ಶ್ರೀ ಗುರು ಪಾದ ಪೂಜೆ, ಶ್ರೀ ಗುರೂಪದೇಶ, ಪ್ರಸಾದದ ವ್ಯವಸ್ಥೆ ಮಾಡಲಾಗಿದೆ.









KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas